ಪ್ರೊ. ಸಾ.ಕೃ.ರಾ. - ಸಮಗ್ರ ಸಾಹಿತ್ಯ - ೧೪

ಪೂರ್ಣಪ್ರಜ್ಞ ಪ್ರಶಸ್ತಿ

ಶ್ರೀ ಮಧ್ವಾಚಾರ್ಯರ ಬಾಳು ಮತ್ತು ಬೆಳಕು

ವಿದ್ಯಾಲಂಕಾರ

ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ

ಬೆಂಗಳೂರು-11

ಪೂರ್ಣಪ್ರಜ್ಞ ಪ್ರಶಸ್ತಿ

(ಶ್ರೀ ಮಧ್ವಾಚಾರ್ಯರ ಬಾಳು- ಬೆಳಕು)

ವಿದ್ಯಾಲಂಕಾರ

ಪ್ರೊ. ಎಸ್. ಕೆ. ರಾಮಚಂದ್ರರಾವ್

ಸುರಮಾ ಪ್ರಕಾಶನ

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಬೆಂಗಳೂರು-560 011

Poorna Prajna Prashasti - Madhvāchāryara bāḷu-beḷaku by Vidyālankāra Prof. S. K. Ramachandra Rao. Published by Dr. S. R. Sudarshan for Suramā Prakāshana, the publication wing of the Prof. S. K. Ramachandra Rao Memorial Trust (R),
305, 6th Cross, I Block, Jayanagar,
Bangalore-560 011.
Phone : 26563957
e-mail : drsrsudarshan@gmail.com

©: Prof. S. K. Ramachandra Rao Memorial Trust (R)

Pages : xii + 124

First Edition : 1968
Second Edition : 2011

Price : Rs.80/-

Typeset at :
Sree Lakshmi Enterprises
1052, 50ft Road, I Stage
Kumaraswamy Layout
Bangalore-78 Ph.: 64555684

Printed at :
Vagartha, Bangalore-19. vagartha@yahoo.com

ನನ್ನಲ್ಲಿ ಅವ್ಯಾಜವಾದ ವಾತ್ಸಲ್ಯವನ್ನಿಟ್ಟು ನನ್ನ ಸಾರಸ್ವತ
ವ್ಯವಸಾಯಕ್ಕೆ ಪ್ರೇರಕರಾಗಿರುವ ನಾಡಿನ ರಸಋಷಿ

ದತ್ತಾತ್ರೇಯ ರಾಮಚಂದ್ರ ಬೇಂದ್ರೆ

ಅವರಲ್ಲಿ ಸಮರ್ಪಿತ

ಅನುಕ್ರಮಣಿಕೆ

ಲೇಖಕರ ಪರಿಚಯ vii

ಮುನ್ನುಡಿ ix

ಮೊದಲ ಮಾತು xi

೧. ಮೊದಲನೆಯ ಪರಿಚ್ಛೇದ ೧

ಆಕರ ವಿಮರ್ಶೆ – ೧;
ಸ್ಥಳ ಪುರಾಣ ಕಣೆಗಳು – ೧೩;
ಕಾಲ ನಿರ್ಣಯ – ೧೫;
ಪರಿಶಿಷ್ಟ೧ – ಸಂಪ್ರದಾಯ ಪದ್ಧತಿ – ೨೫;
ಅಣುಮಧ್ವಚರಿತ – ೨೯; ಪರಿಶಿಷ್ಟ ೨ – ೩೦;
ಪರಿಶಿಷ್ಟ ೩ – ಶ್ರೀ ಕೂರ್ಮಶಾಸನ – ೩೨.

೨. ಎರಡನೆಯ ಪರಿಚ್ಛೇದ ೩೪

ಕರ್ಮಭೂಮಿ ತುಳುನಾಡು – ೩೪;
ಧರ್ಮ ಸಂಗಮ – ೪೧; ಭೂತಾರಾಧನೆ – ೪೨;
ಶೈವಸಂಪ್ರದಾಯ – ೪೪; ಮಂಗಳಾದೇವಿ – ೪೭;
ಬೌದ್ಧರ ದೇವಾಲಯಗಳು – ೪೮;
ಶಂಕರಾಚಾರ್ಯರು – ೪೯;
ಮುಸಲ್ಮಾನರು – ಕ್ರೈಸ್ತರು – ೫೦;
ಕುಂಬಳಸೀಮೆ – ೫೨.

೩. ಮೂರನೆಯ ಪರಿಚ್ಛೇದ ೫೬

ಅವತಾರಕ್ಷೇತ್ರ - ೫೬; ಅನಂತೇಶ್ವರನ ಗುಡಿ - ೫೯;

ದುರ್ಗಾ ಮಂದಿರಗಳು - ೬೧;

ಬಾಲ್ಯ - ೬೫;

ಯತಿದೀಕ್ಷೆ - ೭೫.

೪. ನಾಲ್ಕನೆಯ ಪರಿಚ್ಛೇದ ೮೩

ಪರ್ಯಟನೆ - ೮೩;

ಕೃಷ್ಣ ಪ್ರತಿಷ್ಠೆ - ೮೮;

ಶಿಷ್ಯ ಸಂಗ್ರಹ - ೯೭;

ತಿರೋಧಾನ - ೧೦೭.

೫. ಐದನೆಯ ಪರಿಚ್ಛೇದ ೧೧೦

ಸಿದ್ಧಾಂತೋದ್ಧಾರ ಸರ್ವಮೂಲ - ೧೧೦;

ಭೇದವಾದ - ೧೧೨;

ವಿಷ್ಣುತತ್ತ್ವ - ೧೧೪;

ತಾರತಮ್ಯ - ೧೧೭;

ಪ್ರಪಂಚಸತ್ಯತ್ವ - ೧೧೯;

ಜೀವಗಣ - ೧೨೦;

ಮುಕ್ತಿ - ೧೨೧;

ಸಾಧನೆ - ೧೨೩.

ಲೇಖಕರ ಪರಿಚಯ



ಪ್ರೊ. ಸಾ. ಕೃ. ರಾಮಚಂದ್ರರಾಯರು (೧೯೨೫-೨೦೦೬) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ ಮನಃಶಾಸ್ತ್ರ

ದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಿಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಿಕಗಳನ್ನು, ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ' ಮತ್ತು 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕಗಳು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.

ಮುನ್ನುಡಿ

ಪ್ರೊ. ಸಾ. ಕೃ. ರಾಮಚಂದ್ರರಾಯರು ಶ್ರೀಮಧ್ವಾಚಾರ್ಯರನ್ನು ಕುರಿತು ಮೊದಲು ಬರೆದ ಪುಸ್ತಕ - ''ಶ್ರೀ ಮಧ್ವಾಚಾರ್ಯರು'' ೧೯೬೦ರಲ್ಲಿ ಪ್ರಕಟವಾಯಿತು. (ಕಾವ್ಯಾಲಯ, ಮೈಸೂರು). ಈ ಪುಸ್ತಕದ ಮುನ್ನುಡಿಯಲ್ಲಿ ಅವರ ನಿಲುವನ್ನು ವಿವರಿಸುತ್ತ ಹೀಗೆ ಬರೆದಿದ್ದಾರೆ -

> *''ಶಂಕರಾಚಾರ್ಯರು ಶಿವಸ್ವರೂಪಿ; ಮಧ್ವಾಚಾರ್ಯರು ವಾಯುದೇವರ ಅವತಾರ. ಇಬ್ಬರೂ ನಮ್ಮಂತೆ ಹುಟ್ಟಿ ಬೆಳೆಯಲಿಲ್ಲ; ಭಗವತ್ಕಾರ್ಯ ಸಾಧನೆಗೆಂದೇ ಅವತರಿಸಿದರು. ಶಂಕರಾಚಾರ್ಯರು ಸಾಯಲಿಲ್ಲ, ಅದೃಶ್ಯರಾದರು; ಮಧ್ವಾಚಾರ್ಯರು ವಿಧಿವಶರಾಗಲಿಲ್ಲ, ಬದರಿಕಾಶ್ರಮಕ್ಕೆ ವಲಸೆ ಹೋದರು. ಇಬ್ಬರ (ಪರಸ್ಪರ ವಿರುದ್ಧ?) ಭಾಷ್ಯಗಳನ್ನೂ ವ್ಯಾಸರೇ ಅನುಮೋದಿಸಿದರು. ಲೋಕೋತ್ತರವಾದ, ದಿವ್ಯವಾದ ಲೀಲೆಗಳು ಇಬ್ಬರ ಜೀವನದಲ್ಲೂ ಅಸಂಖ್ಯಾತ'' - ಈ ದೃಷ್ಟಿಯ ಪ್ರಮಾಣವೇ ಬೇರೆ; ಇದನ್ನು ವಿಮರ್ಶೆಗೆ ಒಳಪಡಿಸಬಾರದು. ಮಹಾತ್ಮರ ಜೀವನ ಸಾಮಾನ್ಯ ಮನುಷ್ಯನ ಜೀವನದಂತೆ ನೀರಸವಾಗಿದ್ದರೆ ಹೇಗೆ ? ಅದು ಸ್ಫೂರ್ತಿದಾಯಕವಾಗಲು ಅದರಲ್ಲಿ ವೈಶಿಷ್ಟ್ಯವನ್ನು ಎತ್ತಿ ಹಿಡಿಯಬೇಕು.*
>
> *ಆದರೆ ಜೀವನಚರಿತ್ರೆಯಲ್ಲಿ ಇತಿಹಾಸಕ್ಕೂ ಒಂದು ಸ್ಥಾನ ಇರಬೇಕಲ್ಲವೇ? ಮಹಾತ್ಮನಾಗಲಿ, ಸಂತನಾಗಲಿ, ಕವಿಯಾಗಲಿ, ಅವನು ಎಲ್ಲರಂತೆ ಸನ್ನಿವೇಶಗಳಿಂದ ಬಂದವನು ತಾನೆ? ಭಕ್ತಿಗೇ ಪ್ರಥಮ ಸ್ಥಾನ ಕೊಟ್ಟರೂ, ವ್ಯಕ್ತಿಯ ವೈಶಿಷ್ಟ್ಯವನ್ನು ಗ್ರಹಿಸಲು ಶುಷ್ಕವಾದರೂ ಐತಿಹಾಸಿಕವಾದ ಸಂಶೋಧನೆಗೆ ಪ್ರಾಶಸ್ತ್ಯ ಕೊಡಬೇಕು.*

ಪ್ರಸ್ತುತ ಪುಸ್ತಕ - ''**ಪೂರ್ಣಪ್ರಜ್ಞ ಪ್ರಶಸ್ತಿ**'' ಹೊರಬಂದದ್ದು ೧೯೬೮ರಲ್ಲಿ (ಗೀತಾ ಬುಕ್ ಹೌಸ್, ಮೈಸೂರು). ಈ ಪುಸ್ತಕದಲ್ಲಿ ನನ್ನ ತಂದೆಯವರು ಐತಿಹಾಸಿಕ ಸಂಶೋಧನೆಯ ದೀವಟಿಗೆಯಿಂದ ಮಧ್ವಾಚಾರ್ಯರ ಜೀವನದ ಮೇಲೆ ಬೆಳಕನ್ನು ಚೆಲ್ಲಲು ಯತ್ನಿಸಿದ್ದಾರೆ. 'Śankara and Adhyāsa Bhāṣya' ಎಂಬ ಪುಸ್ತಕದಲ್ಲಿ ಅವರು ಶಂಕರಾಚಾರ್ಯರ ಜೀವನವನ್ನು ಅದೇ ರೀತಿಯಲ್ಲಿ ಪರಿಶೀಲಿಸಿದ್ದಾರೆ. ಈ

ಗ್ರಂಥದ ಕೆಲವು ಮುಖ್ಯ ಅಂಶಗಳನ್ನು 'The Three Acharyas' ಎಂಬ ನಮ್ಮ ಪ್ರಕಟಣೆಯಲ್ಲಿ ಸೇರಿಸಲಾಗಿದೆ.

ಈ ಪುಸ್ತಕದ ಮರು ಪ್ರಕಟಣೆಗೆ ಪ್ರೋತ್ಸಾಹ ನೀಡಿದ ಪ್ರೊ. ಪ್ರಭಂಜನಾಚಾರ್ಯರಿಗೆ ನಾನು ಆಭಾರಿಯಾಗಿದ್ದೇನೆ. ಅಂದವಾಗಿ ಅಕ್ಷರಜೋಡಣೆ ಮಾಡಿದ ಶ್ರೀಮತಿ ವಸಂತಲಕ್ಷ್ಮೀ ಅವರಿಗೆ ಮತ್ತು ಮುದ್ರಿಸಿದ ವಾಗರ್ಥದವರಿಗೆ ನಮ್ಮ ಧನ್ಯವಾದಗಳು.

ಮಧ್ವನವಮಿ
ಮಾಘ ಶುದ್ಧ ನವಮಿ
೧೨-೦೨-೨೦೧೧

ಡಾ|| ಸಾ. ರಾ. ಸುದರ್ಶನ

ಮೊದಲ ಮಾತು

ಕನ್ನಡನಾಡಿನ ವಿಭೂತಿಪುರುಷರಲ್ಲಿ ಒಬ್ಬರಾದ ಶ್ರೀ ಮಧ್ವಾಚಾರ್ಯರನ್ನು ಕುರಿತ ಈ ಗ್ರಂಥದಲ್ಲಿ ಸಂಶೋಧನಾ ದೃಷ್ಟಿಯನ್ನು ಬಳಸಿಕೊಂಡಿದ್ದೇನೆ. ಇದರಿಂದ ಶ್ರದ್ಧಾಳುಗಳಿಗೆ ಅಪಚಾರವೆಣಿಸುವ ಉದ್ದೇಶವಿಲ್ಲ. ಸಂಶೋಧನೆಯೆಂದ ಮಾತ್ರಕ್ಕೆ ಶ್ರದ್ಧೆಗೆ ಭಂಗ ಬರಬೇಕೆಂಬ ನಿಯಮವಿದೆಯೆ ? ನಾನೂ ಶ್ರದ್ಧಾಳುವೇ ಎಂದು ಭಿನ್ನವಿಸಿಕೊಳ್ಳುತ್ತೇನೆ. ಶ್ರೋತ್ರಿಯರಾದ, 'ಸಚ್ಛಾಸ್ತ್ರ' ಸಂಪನ್ನರಾದ ಮಾಧ್ವರ ಮನೆತನಕ್ಕೇ ಸೇರಿದವನು ನಾನು ; ಎಳೆತನದಿಂದಲೂ ಮಧ್ವಾಚಾರ್ಯರ ಹಿರಿಮೆಯನ್ನು ಹಿರಿಯರಿಂದ ಕೇಳುತ್ತಿದ್ದವನೇ. ಈ ಪ್ರಭಾವ ನನ್ನಲ್ಲಿ ಮೂಡದೆ ಇರುವುದು ಸಾಧ್ಯವೆ ? ಆದರೆ ಶ್ರದ್ಧಾಳುಗಳು ವಿಚಾರಪರರೂ ಆಗಬೇಕೆಂದು ಹೇಳುವವರಲ್ಲಿ ನಾನೊಬ್ಬ. ''ಸಂತಃಪರೀಕ್ಷ್ಯ'' ಎಂದು ಕಾಳಿದಾಸ ಹೇಳುವಾಗ, ''ದೇಶೇ ದೇಶೇ ವಿಚಾರ್ಯ'' ಎಂದು ಆಚಾರ್ಯರು ಹೇಳುವಾಗ ಇದೇ ದೃಷ್ಟಿಯನ್ನೇ ಅನುಮೋದಿಸಿದ್ದಾರಲ್ಲವೇ ?

ವಿವರಗಳನ್ನು ನಿರೂಪಿಸುವುದಷ್ಟೇ ನನ್ನ ಕೆಲಸವೆಂದು ಭಾವಿಸಿದ್ದೇನೆ. ಹೆಚ್ಚಿನ ಸಂಶೋಧನೆ, ವಿಮರ್ಶೆ ನಡೆಯದೆ ಸಿದ್ಧಾಂತವೆಂದು ಏನನ್ನೂ ಹೇಳುವುದಾಗದು. ಈ ಕ್ಷೇತ್ರದಲ್ಲಿ ಇನ್ನಷ್ಟು ಸಂಶೋಧನೆ ನಡೆಯಲು, ಉತ್ಸುಕರ ಆಸಕ್ತಿಯನ್ನು ಸೆಳೆಯಲು ಈ ಗ್ರಂಥ ನೆರವಾದರೆ ನನ್ನ ಪ್ರಯತ್ನ ಸಾರ್ಥಕವಾಯಿತು.

ವಿಚಾರಪರರೂ, ಶೀಲವಂತರೂ, ಲೋಕಕಲ್ಯಾಣದಲ್ಲಿ ಉತ್ಸುಕರೂ ಆಗಿರುವ ಶ್ರೀ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಈ ಬಾರಿಯ ಉಡುಪಿ ಪರ್ಯಾಯ ಪೀಠವನ್ನು ಏರುತ್ತಿದ್ದಾರೆ. ಅವರ ಅಧಿಕಾರಾವಧಿಯಲ್ಲಿ ನಾಡಿನ ಹಿತ ಬಹುಮುಖವಾಗಿ ಹೆಚ್ಚುತ್ತದೆ ಎನ್ನುವ ನಿರೀಕ್ಷೆ ಬಹುಜನರಲ್ಲಿ ಉಂಟು. ಮಠಾಧಿಪತಿಗಳ ವ್ಯಕ್ತಿತ್ವಕ್ಕೆ, ಉತ್ಸಾಹಕ್ಕೆ, ಮನೋಧರ್ಮಕ್ಕೆ ಆದರ್ಶಪ್ರಾಯರಾಗಿರುವ ಈ ಸ್ವಾಮಿಗಳು ಪರ್ಯಾಯ ಪಟ್ಟವೇರುವ ಸಂದರ್ಭದಲ್ಲಿ ಪ್ರಸ್ತುತ ಗ್ರಂಥ ಪ್ರಕಟವಾಗುತ್ತಿರುವುದು ನನ್ನ ಪುಣ್ಯ.

ಈ ಗ್ರಂಥ ಸಿದ್ಧವಾಗುವಾಗ ಹಲವು ಪ್ರಾಚೀನ, ಅರ್ವಾಚೀನ ಗ್ರಂಥಗಳನ್ನು ನೋಡಬೇಕಾಯಿತು ; ಶಾಸನಗಳನ್ನು ಓದಬೇಕಾಯಿತು. ಇವನ್ನೆಲ್ಲ ಒದಗಿಸಿದ ಮಿತ್ರರಿಗೂ, ಸಂಸ್ಥೆಗಳಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಓಡಾಡಿ ಅಲ್ಲಿನ ಜನಜೀವನದ, ಧರ್ಮಪರಿಸ್ಥಿತಿಯ ಪರಿಚಯವನ್ನು ಪಡೆಯಲು ಪರೋಕ್ಷವಾಗಿ ನೆರವಾದ ಧರ್ಮಸ್ಥಳದ ಹೆಗ್ಗಡೆಯವರಿಗೂ, ಮಣಿಪಾಲದ ಡಾ. ಟಿ. ಎಂ. ಎ. ಪೈ ಅವರಿಗೂ, ಪ್ರೊ. ಬಿ. ವಿ. ಕೃಷ್ಣಮೂರ್ತಿಗಳಿಗೂ ನನ್ನ ಕೃತಜ್ಞತೆ ಸಲ್ಲಬೇಕು. ಈ ಗ್ರಂಥದ ಪ್ರಕಾಶನ ಭಾರವನ್ನು ಆದರದಿಂದ ನಿರ್ವಹಿಸಿರುವ ನನ್ನ ಮಿತ್ರ ಶ್ರೀ ಎಂ. ಸತ್ಯನಾರಾಯಣರಾಯರು ನನ್ನ ಧನ್ಯವಾದಗಳಿಗೆ ಪಾತ್ರರಾಗಿದ್ದಾರೆ.

ಬೆಂಗಳೂರು ಎಸ್. ಕೆ. ರಾಮಚಂದ್ರರಾವ್

17-1-1968

ಪೂರ್ಣಪ್ರಜ್ಞಪ್ರಶಸ್ತಿ

ಮೊದಲನೆಯ ಪರಿಚ್ಛೇದ

1. ಆಕರ ವಿಮರ್ಶೆ

ದಕ್ಷಿಣ ಭಾರತದಲ್ಲಿ ಬಹುಸಂಖ್ಯಾತವಾಗಿರುವ ಜನಾಂಗವೊಂದನ್ನು ಮಾಧ್ವವೆಂಬ ವಿಶೇಷಣವನ್ನು ಸೇರಿಸಿ ವ್ಯವಹರಿಸುತ್ತಾರೆ. ಮಧ್ವಾಚಾರ್ಯರ ಅನುಯಾಯಿಗಳೆಂದು ಈ ಪ್ರಯೋಗದ ತಾತ್ಪರ್ಯ. ಆದರೆ ಶಂಕರಾಚಾರ್ಯರ ಅನುಯಾಯಿಗಳನ್ನು ಶಾಂಕರರೆನ್ನುವುದಿಲ್ಲ; ಅವರು ನಿತ್ಯವ್ಯವಹಾರದಲ್ಲಿ ಸ್ಮಾರ್ತರು. ರಾಮಾನುಜಾಚಾರ್ಯರ ಪಂಥವನ್ನು ಹಿಡಿದವರು ಸಾಮಾನ್ಯವಾಗಿ ಶ್ರೀವೈಷ್ಣವರೆನಿಸಿಕೊಳ್ಳುತ್ತಾರೆ ; ರಾಮಾನುಜೀಯರೆನಿಸಿಕೊಳ್ಳುವುದು ಅಪರೂಪ. ಮಧ್ವಾಚಾರ್ಯರೇ ಆಚಾರ್ಯರೆಂದು ನಂಬಿದವರು ಮಾತ್ರ ಮಾಧ್ವರೆಂದೇ ಕರೆಸಿಕೊಳ್ಳುವುದು ವಿಶೇಷ. ಇವರ ವ್ಯಕ್ತಿತ್ವದ ಪ್ರಭಾವ ಈ ಜನರ ಮನೋಧರ್ಮದ ಮೇಲೂ, ಭಾವಜೀವನದ ಮೇಲೂ ಪ್ರಬಲವಾಗಿ ಮುದ್ರಿತವಾಗಿರುವುದು ಇದರ ಕಾರಣ.

'ನ ಮಾಧವ ಸಮೋ ದೇವಃ, ನ ಚ ಮಧ್ವಸಮೋ ಗುರುಃ' ಎಂದು ತುಂಬಿ ಬಂದ ಶ್ರದ್ಧೆಯಿಂದ, ಭಾವುಕತೆಯಿಂದ ನಂಬಿರುವ ಈ

ಜನರ ದೃಷ್ಟಿಯಲ್ಲಿ ಮಧ್ವಾಚಾರ್ಯರೇ ಇಡೀ ಜನಾಂಗದ ಸ್ವರೂಪೋದ್ಧಾರಕರು. ರಾಮನ ಆಣತಿಯಂತೆ ದೈತ್ಯರ ದವಡೆಯಿಂದ ಸಜ್ಜನರನ್ನು ಪಾರುಮಾಡಿದ ಮಾರತಿಯಂತೆ ದುರ್ವಾದಿಗಳ ಮುಷ್ಟಿಯಿಂದ ಸದ್ಧರ್ಮವನ್ನು ಪಾರುಮಾಡಿ ಉದ್ಧರಿಸಿದವರು ಇವರೆಂದು ಮಾಧ್ವರ ನಂಬಿಕೆ. ಈ ನಿಲುವಿನಲ್ಲಿ ಮಧ್ವಾಚಾರ್ಯರು ಮಾರುತಿಯ ಅವತಾರವೆಂದೇ ಅವರ ಕಲ್ಪನೆ. ಊರ್ಜಿತವಾದ ಯಶಸ್ಸುಳ್ಳ ಹಿರಿಯ ಚೇತನಗಳು ಭಗವದಂಶವಿಲ್ಲದೆ ಬಾಳುವುದು ಅಸಾಧ್ಯ ; ಒಂದು ದೃಷ್ಟಿಯಲ್ಲಿ ವಿಭೂತಿ ಪುರುಷರೆಲ್ಲ ಅವತಾರಿಗಳೇ. ಶಂಕರಾಚಾರ್ಯರು ಶಿವನ ಅವತಾರವೆಂದೂ ರಾಮಾನುಜಾಚಾರ್ಯರು ಆದಿಶೇಶನ ಅವತಾರವೆಂದೂ ಕಲ್ಪನೆಗಳಿಲ್ಲವೆ ? ಅವರ ಮಹತ್ಕಾರ್ಯಗಳಿಂದ, ವ್ಯಕ್ತಿತ್ವದ ಉತ್ಕರ್ಷೆಯಿಂದ ಪ್ರಭಾವಿತರಾದ ಜನ ಅವರನ್ನು ದೇವಾಂಶ ಸಂಭೂತರೆಂದು ಗ್ರಹಿಸಿ ಅವರನ್ನು ಆರಾಧಿಸಲು ಆರಂಭಿಸುವುದು ಸಹಜವೇ. ಭಗವತ್ಕಾರ್ಯಸಾಧಕನಾಗಿ ಹನುಮಂತ ಮಾಡಿದ ಕೆಲಸ ರಾಮಾಯಣದಲ್ಲೇ ಮುಖ್ಯರಸ. ಭಾರತದಲ್ಲಿ ಆರ್ಯ ಸಂಸ್ಕೃತಿಯು ಉಳಿಯಲು ಬೆಳೆಯಲು ರಾಮನ ಪ್ರತಾಪವೇ ಕಾರಣವೆಂದರೆ, ರಾಮನಿಗೆ ಕರಣವಾಗಿ ನಿಂತವನು ಹನುಮಂತ. ಹಾಗೆಯೇ ಸಚ್ಛಾಸ್ತ್ರ ಸದ್ಧರ್ಮಗಳು ಉಳಿಯಲು, ಬೆಳೆಯಲು ಮಧ್ವಾಚಾರ್ಯರ ನೆರವು ಒದಗಿತೆಂದು ಮಾಧ್ವರು ಮದ್ವಾಚಾರ್ಯರನ್ನೂ ಹನುಮಂತನನ್ನೂ ಒಂದು ಗೋತ್ರದಲ್ಲಿ ನಿಲ್ಲಿಸಿದರೆಂದು ತೋರುತ್ತದೆ. ಪ್ರಚಲಿತವಾದ ಕಲ್ಪನೆಗಳಿಗೂ ತರ್ಕ್ಯವಾದ ಆಧಾರ ಇರಬೇಕಷ್ಟೆ, ನಾಡಿನ ಆರಾಧ್ಯ ದೈವವಾದ ಹನುಮಂತನೇ ಮಧ್ವಾಚಾರ್ಯರೆಂದು ಪರಿಗಣಿಸಿ ಈ ಜನಾಂಗದ ಜನ ಅವರಿಗೆ ಮರ್ಯಾದೆ ತೋರಿಸಿತು. ವ್ಯಕ್ತಿತ್ವದ ಹೆಗ್ಗಳಿಕೆಯಿಂದ ಈ ಪ್ರಶಸ್ತಿಯನ್ನು ಪಡೆದುದೂ ಈ ಪ್ರಶಸ್ತಿಯಿಂದ ವ್ಯಕ್ತಿತ್ವದ ಹಿರಿಮೆ ಹಿಗ್ಗಿದುದೂ ಅನ್ಯೋನ್ಯಾಶ್ರಯ.

ಅಂತೂ ಮಾಧ್ವರಿಗೆ ಮಧ್ವಾಚಾರ್ಯರು ಎಣೆಯಿಲ್ಲದ ಗುರುಗಳು. ಅವರ ನಿತ್ಯದ ಹಂಬಲ ''ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ'' ಎಂದು.

ಹಿರಿಯರ ಚಿತ್ರವನ್ನು ಮನಸ್ಸಿನಲ್ಲಿ ರೂಢಿಸಿಕೊಳ್ಳುವಾಗ ಇಂತಹ ಕಲ್ಪನೆಗಳು ಒದಗಿಯೇ ಒದಗುತ್ತವೆ. ಮಹಾಭಾರತದಲ್ಲಿ ಭೀಮ, ರಾಮಾಯಣದಲ್ಲಿ ಹನುಮಂತ ಮಾಡಿದ ಕೆಲಸಗಳನ್ನು ಮಧ್ವಾಚಾರ್ಯರು ನಮ್ಮ ಕಾಲದಲ್ಲಿ ಮಾಡಿದರು ಎಂದು ಹೇಳಲು ''ಪ್ರಥಮೋ ಹನುಮನ್ನಾಮ ದ್ವಿತೀಯೋ ಭೀಮ ಏವ ಚ'' ಎಂದು ಮಧ್ವಾಚಾರ್ಯರ ಹಿನ್ನೆಲೆಯನ್ನು ಹೇಳಿದರೆ ಭಾವುಕರಿಗೆ ಸಮಾಧಾನ. ಅಷ್ಟುದೂರ ಹೋಗಲು ಮನಸ್ಸಿಲ್ಲದವರು ಮಧ್ವಾಚಾರ್ಯರು ಮನುಷ್ಯಮಾತ್ರದವರೆಂದೇ ಬಗೆದರೂ ಅದರಿಂದ ಅವರ ಹಿರಿಮೆಗೆ ಊನವಿಲ್ಲ. ಏಸುಕ್ರಿಸ್ತನು ದೇವರ ಮಗನೆಂದು ನಂಬದ ಕ್ರೈಸ್ತರೂ ಅವನ ಹೆಗ್ಗಳಿಕೆಯನ್ನು ಒಪ್ಪುವುದಿಲ್ಲವೆ ? ಮಧ್ವಾಚಾರ್ಯರ ಇತಿಹಾಸ ಪ್ರಸಿದ್ಧಿಯನ್ನು ಅರ್ಥಮಾಡಿಕೊಳ್ಳಲು ಅವರು ಅವತಾರಿಗಳೆಂಬ ಕಲ್ಪನೆ ಅಗತ್ಯವಲ್ಲ.

ಅವತಾರಿಗಳೆಂದು ನಂಬುವವರೂ ಆ ನಂಬಿಕೆಯನ್ನು ಮೇಲೇರಿಸಿಕೊಳ್ಳದಿರುವುದು ಒಳಿತು. 'ವ್ಯಾಸಯೋಗಿ ಚರಿತೆ'ಯನ್ನು ಸಂಪಾದಿಸಿ ಪ್ರಕಟಿಸಿದ ಶ್ರೀ ಬಿ. ವೆಂಕೋಬರಾಯರು ಆ ಗ್ರಂಥಕ್ಕೆ ತಾವು ಬರೆದಿರುವ ಪ್ರಸ್ತಾವನೆಯಲ್ಲಿ ಈ ವಿಚಾರವನ್ನೇ ಎತ್ತಿಕೊಂಡು ಮಧ್ವಾಚಾರ್ಯರ ಮಾತುಗಳನ್ನೇ ಉದ್ಧರಿಸಿದ್ದಾರೆ. ''ಮಾನುಷಂ ಮಾನುಷೋ ಧರ್ಮೋ ; ದೇವಾ ಅಪಿ ಹಿ ಮಾನುಷೇ ಮನುಷ್ಯವತ್ ಪ್ರವರ್ತನ್ತೇ, ನೈವೈಶ್ವರ್ಯಪ್ರಕಾಶಿನ ಇತಿ ಚ'' ಎಂಬುದೇ ಆಚಾರ್ಯರ ಮಾತು. ಎಂದರೆ, ದೇವತೆಗಳೂ ಮನುಷ್ಯಲೋಕದಲ್ಲಿ

ಅವತರಿಸಿದಾಗ ಅವರ ವ್ಯವಹಾರವೆಲ್ಲ ಮನುಷ್ಯರಂತೆಯೇ ; ಅದ್ಭುತ ಲೀಲೆಗಳಿಗೆ ಅವಕಾಶವಿಲ್ಲ, ಮತ್ತೆ 'ಪ್ರಾಪ್ತೇ ನರೇಷು ಜನನೇ ನರವತ್‌ಪ್ರವೃತ್ತಿಃ'. ವಿಶ್ವವನ್ನು ಸತ್ಯವೆಂದು ಸಾರಿದ ಆಚಾರ್ಯರು ಹೇಳತಕ್ಕ ಮಾತೇ ಇದು. ಅವರು ಮನುಷ್ಯರೇ, ತಮ್ಮ ಪ್ರತಿಭೆಯಿಂದಲೂ ಪ್ರಭಾವದಿಂದಲೂ ಅಜರಾಮರರಾದರು ಎಂದು ಗ್ರಹಿಸಿದರೆ ಶ್ರದ್ಧೆಗೆ ಅಪಚಾರವಲ್ಲ.

ಇಂಥ ಕಲ್ಪನೆಗಳಿಂದ ತೊಂದರೆಯೂ ಉಂಟು. ಗೌತಮಬುದ್ಧನ ಸುತ್ತ ಹರಡಿದ್ದ ಅದ್ಭುತ ವೃತ್ತಗಳ ಹಂದರವನ್ನು ನೋಡಿ ಅವನು ಐತಿಹಾಸಿಕ ವ್ಯಕ್ತಿಯೇ ಅಲ್ಲವೆಂದೂ, ಸೌರಸಂಪ್ರದಾಯದ ಕಲ್ಪನೆ ಮಾತ್ರವೆಂದೂ ಹಿಂದೆ ಒಂದು ವಾದ ಎದ್ದಿದ್ದಿತು. ಕ್ರೈಸ್ತವಾರ್ತೆಗಳಲ್ಲಿ ಬರುವ ಪವಾಡಗಳನ್ನು ನೋಡಿ ಪಂಡಿತರು ಏಸುಕ್ರಿಸ್ತನೆಂಬ ವ್ಯಕ್ತಿ ನಿಜವಾಗಿ ಇದ್ದನೇ ಎಂದು ಶಂಕಿಸಲಾರಂಭಿಸಿದರು ; ಒಂದು ವೇಳೆ ಅಂಥ ವ್ಯಕ್ತಿ ಇದ್ದಿದ್ದರೂ ಸುವಾರ್ತೆಗಳಲ್ಲಿ ಒದಗುವ ಚಿತ್ರಕ್ಕೆ ಎಷ್ಟು ಆಧಾರವಿದೆಯೆಂಬುದೂ ಸಂದೇಹಾಸ್ಪದವಾಯಿತು. ಈ ವಿಚಾರವಾಗಿ ಚರ್ಚೆ ಇಂದಿಗೂ ಮುಗಿದಿಲ್ಲ. ಶ್ರದ್ಧಾಳುಗಳ ಕಲ್ಪನೆಯ ಜಾಲ ಜಟಿಲವಾಗಿ ಇಂಥ ಗೊಂದಲಗಳು ಏಳುತ್ತವೆ. ಒಂದು ಯುಗದ ಮನೋಧರ್ಮಕ್ಕೆ ಇದು ಸಮಂಜಸವೆಂದು ಕಂಡಿತು ; ಆದರೆ ಮುಂದಿನ ಯುಗದ ಮನೊಧರ್ಮದಲ್ಲಿ ಅತ್ಯುಕ್ತಿಯು ಅನುಚಿತವೆನಿಸಿಕೊಳ್ಳುತ್ತದೆ. ಶಂಕರ ದಿಗ್ವಿಜಯಗಳಲ್ಲಿಯೂ ಯತಿರಾಜ ವೈಭವಗಳಲ್ಲಿಯೂ ಅತಿಶಯೋಕ್ತಿ ಉತ್ಪ್ರೇಕ್ಷೆ, ಅದ್ಭುತ ಕಲ್ಪನೆಗಳು ಅನಿವಾರ್ಯವಾಗಿ ಸೇರಿಕೊಂಡಿವೆ. ಚರಿತ್ರೆಯ ಚೌಕಟ್ಟಿನಲ್ಲಿ ಅಲಂಕಾರದ ಹಂದರವನ್ನು ಹೆಣೆದರೆ ಇತಿಹಾಸ ಶುದ್ಧಿಯನ್ನು ಅರಸುವ ದಾರಿ ದುರ್ಗಮವಾಗುತ್ತದೆ. ಈ ಮಾತು ಮಧ್ವಾಚಾರ್ಯರ ವಿಚಾರದಲ್ಲಿಯೂ ದಿಟವೆಂದು ಒಪ್ಪಿಕೊಳ್ಳಬೇಕು.

ಮಧ್ವಾಚಾರ್ಯರ ವಿಚಾರವಾಗಿ ಬಳಕೆಯಲ್ಲಿರುವ ವಿವರಗಳಿಗೆಲ್ಲ ಪ್ರಮುಖವಾದ ಆಕರವೆಂದರೆ ನಾರಾಯಣಪಂಡಿತಾಚಾರ್ಯರ 'ಮಧ್ವವಿಜಯ'ವೆಂಬ ಹದಿನಾರು ಸರ್ಗಗಳ ಮಹಾಕಾವ್ಯ. ಈ ಗ್ರಂಥವು ಮೈದಳೆದದ್ದು ಆಚಾರ್ಯರು ಮರೆಯಾದ ಮೇಲೆಯೇ ಎಂಬುದು ನಿರ್ವಿವಾದ. ಈ ಕವಿಗಳ ತಂದೆ ಲಿಕುಚಾನ್ವಯ – ತ್ರಿವಿಕ್ರಮ ಪಂಡಿತಾಚಾರ್ಯರು ಮಧ್ವಾಚಾರ್ಯರ ಕಾಲದಲ್ಲಿದ್ದವರು, ಅವರನ್ನು ಬಲ್ಲವರು, ಅವರೊಡನೆ ವಾದಮಾಡಿ ಪರಾಜಿತರಾಗಿ ಅವರ ಶಿಷ್ಯರಾಗಿ ನಿಂತವರು. ಆಚಾರ್ಯರಂತೆ ಇವರೂ ತುಳುನಾಡಿನವರು, ಆಚಾರ್ಯರ ಪೂರ್ವಾಪರಗಳನ್ನು ಚೆನ್ನಾಗಿ ತಿಳಿದಿದ್ದರು. ಇವರೇ ಮಧ್ವವಿಜಯವನ್ನು ಬರೆದಿಟ್ಟಿದ್ದರೆ ಅದಕ್ಕಿಂತ ಹೆಚ್ಚು ಶ್ರದ್ಧೇಯವಾದ ಆಕರವು ಬೇರೆ ಇರುತ್ತಿರಲಿಲ್ಲ. ಇವರು ರಚಿಸಿರುವ 'ವಾಯುಸ್ತುತಿ' ಎಂಬ ನಲವತ್ತೊಂದು ಶ್ಲೋಕಗಳ ಮಾಲೆಯು ಮುಖ್ಯವಾಗಿ ಮಧ್ವಾಚಾರ್ಯರನ್ನು ಕುರಿತದ್ದೇ ಆದರೂ ಅಲ್ಲಿ ಅವರ ಬಾಳುವೆಯ ವಿವರಗಳು ಬರುವುದಿಲ್ಲ. ಮೂವತ್ತೊಂಬತ್ತನೆಯ ಶ್ಲೋಕದಲ್ಲಿ ಮಾತ್ರ ರೂಪ್ಯಪೀಠವೆಂಬ ಹೆಸರು ಹೊತ್ತ ಸ್ಥಳದಲ್ಲಿ ಮಧ್ಯಗೇಹವೆಂಬ ಮನೆತನದಲ್ಲಿ ಇವರು ಹುಟ್ಟಿ ಸಂನ್ಯಾಸಿಗಳಾಗಿ ಬದರಿಗೆ ಹೋಗಿ ಭಾಷ್ಯಗಳನ್ನು ಬರೆದರೆಂಬಷ್ಟೇ ನಿರೂಪಣೆಯಿದೆ. ಇತಿಹಾಸ ಇವರ ಉದ್ದೇಶವಲ್ಲ. 'ಕೇಶವಾನಂದ ತೀರ್ಥ ಶ್ರೀ ಮತ್ಪಾದಾಬ್ಜ ಭಕ್ತ'ರೆಂದು ತಮ್ಮನ್ನು ಬಣ್ಣಿಸಿಕೊಂಡಿರುವ ಇವರು ''ತತ್ಪಾದಾರ್ಚಾದರೇಣ ಗ್ರಥಿತಪದಲಸನ್ಮಾಲೆ''ಯೆಂದು ಈ 'ವಾಯುಸ್ತುತಿ'ಯನ್ನು ನಿರ್ದೇಶಿಸಿದ್ದಾರೆ. ಭಕ್ತಿಯ ಭರದಲ್ಲಿ ರಚಿತವಾದ ಈ ಗ್ರಂಥದಲ್ಲಿ ಮಧ್ವಾಚಾರ್ಯರು ವಾಯುದೇವರೆಂದೂ, ಭೀಮಾವತಾರ ಮಾಡಿದವರೆಂದೂ ಪ್ರಸ್ತಾಪವಿದೆ. 'ವಾಯುರಸ್ಮದ್ಗುರುಸ್ತಂ' ಎಂದೇ ಆಚಾರ್ಯರನ್ನು ವ್ಯವಹರಿಸಿದ್ದಾರೆ.

ಡಾ. ಬಿ. ಎನ್. ಕೃಷ್ಣಮೂರ್ತಿಶರ್ಮರ ಎಣಿಕೆಯಂತೆ ತ್ರಿವಿಕ್ರಮ ಪಂಡಿತಾಚಾರ್ಯರ ಕಾಲ ೧೨೫೮ ರಿಂದ ೧೩೨೦ರವರೆಗೆ, ಆಚಾರ್ಯರ ಮತ್ತು ಇವರ ಸಮಾಗಮವಾದದ್ದು ಸುಮಾರು ೧೩೦೦ರಲ್ಲಿ. ಎಂದರೆ ಮಧ್ವಾಚಾರ್ಯರು, (೧೨೩೮-೧೩೧೭) ಮರೆಯಾಗುವ ವೇಳೆಗೆ ಪಂಡಿತಾಚಾರ್ಯರಿಗೆ ಐವತ್ತೊಂಬತ್ತು ವರ್ಷಗಳು. ಮಧ್ವವಿಜಯ ವನ್ನು ಬರೆದ ನಾರಾಯಣಪಂಡಿತಾಚಾರ್ಯರು ತ್ರಿವಿಕ್ರಮಪಂಡಿತರ ಮೂರನೆಯ ಮಗ (ತ್ರಿವಿಕ್ರಮಗುಣನಿಧೇಃ ...... ಸುತಾಃ..... ಯಸ್ತೃತೀಯೋಽತ್ರ ನಾರಾಯಣಃ), ಕಿರಿಯವರು. ಇವರು ತಮ್ಮ ಕಾವ್ಯನಾಯಕರಾದ ಆಚಾರ್ಯರನ್ನು ಕಂಡಿದ್ದರೇ, ಒಂದು ವೇಳೆ ಎಳೆತನದಲ್ಲಿ ಕಂಡಿದ್ದರೂ ಅವರ ಪರಿಚಯದ ಪುಣ್ಯವನ್ನು ಪಡೆದಿದ್ದರೇ ಎಂಬುದು ತಿಳಿಯುವುದಿಲ್ಲ. ತಮ್ಮ ತಂದೆಯಿಂದ ಆಚಾರ್ಯರ ವಿಚಾರವಾಗಿ ವಿವರಗಳನ್ನು ಅಷ್ಟಿಷ್ಟು ಪಡೆದಿರಬಹುದು, ತಂದೆ ಆಚಾರ್ಯರನ್ನು ಕಾಣಲು ಉಡುಪಿಗೆ ಹೋದಾಗ ತಾವೂ ಜೊತೆಯಲ್ಲಿ ಹೋಗಿರಲೂಬಹುದು. ಆದರೆ ತಮ್ಮ ತಂದೆಯಿಂದಲೇ ವಿವರಗಳನ್ನು ಸಂಗ್ರಹಿಸಿದರೆಂದಾಗಲೀ, ತಾವು ಆಚಾರ್ಯರನು ಸಂದರ್ಶಿಸಿದ್ದ ರೆಂದಾಗಲೀ ನಾರಾಯಣಪಂಡಿತಾಚಾರ್ಯರು ಸ್ಪಷ್ಟವಾಗಿ ಎಲ್ಲಿಯೂ ಹೇಳಿಲ್ಲ. ಹಲವೆಡೆಗಳಿಂದ ವಿವರಗಳನ್ನು ಪಡೆದಂತೆಯೂ, ನೋಡಿದವ ರಿಂದಲೇ ಕೇಳಿ ತಿಳಿದುಕೊಂಡಂತೆಯೂ, ಇಬ್ಬರ ವಿವರಗಳಲ್ಲಿ ವಿರೋಧವು ಒದಗಿದಾಗ ಪ್ರಬಲರಾದವರ ಮಾತಿಗೇ ಮನ್ನಣೆಯಿತ್ತಿರು ವುದಾಗಿಯೂ ತಮ್ಮ "ಮಧ್ವವಿಜಯಭಾವಪ್ರಕಾಶಿಕೆ"ಯಲ್ಲಿ ಕಾಣಿಸಿದ್ದಾರೆ. (ಪ್ರಾಯೇಣ ನೈಕಮಾತ್ರೋಕ್ತಾಃ ಕಥಿತಾ ಇಹ ಸರ್ವಶಃ, 'ಮಯಾ ದೃಷ್ಟಾಧ್ರುವ' ಮಿತಿ ಪ್ರೋಕ್ತಾ ಪ್ರಾಯೇಣ ಪೂರುಷೈಃ, ದ್ವಯೋರ್ವಕ್ತ್ರೋರ್ವಿರೋಧೇ ತು ಸ್ವೀಕೃತಾ ಪ್ರಬಲಸ್ಯ ಗೀಃ)

ಪಂಡಿತಾಚಾರ್ಯರು ಬಯಸಿದ್ದರೂ ಇತಿಹಾಸವನ್ನು ಬರೆಯುವುದು ಅವರಿಂದ ಸಾಧ್ಯವಿರುತ್ತಿರಲಿಲ್ಲ. ತಂದೆಯಿಂದಲೇ ವಿವರಗಳನ್ನು ಸಂಗ್ರಹಿಸಿದರೆಂದು ಒಪ್ಪಿದರೂ ಅವರ ಗ್ರಂಥ ಮೈದಳೆಯುವ ವೇಳೆಗೆ ಆಚಾರ್ಯರು ಮರೆಯಾಗಿ ಬಹಳ ವರ್ಷಗಳು ಕಳೆದಿದ್ದುವು. ಮಹಾತ್ಮರ ಸುತ್ತ ಪವಾಡಗಳು ನೆರೆಯುವದು ಸಹಜ ; ಇತಿಹಾಸದ ವಿವರಗಳೊಂದಿಗೆ ಭಕ್ತಿಯ ಆಳದಿಂದ ಮೈದುಂಬಿ ಬಂದ ಅತ್ಯುಕ್ತಿಗಳೂ ಕಲ್ಪನೆಗಳೂ ವರ್ಷ ಕಳೆದಂತೆಲ್ಲ ಕಳೆದುಂಬಿ ನಿಲ್ಲುವುದು ಸಹಜ. ನಾರಾಯಣಪಂಡಿತಾಚಾರ್ಯರಿಗೆ ದೊರೆತ ಸಾಮಗ್ರಿ ಇಂಥದು. ಏಸುಕ್ರಿಸ್ತನ ಒಡನಾಡಿಯಾಗಿದ್ದ ಪೀಟರ್‌ನಿಂದಲೇ ವಿವರಗಳನ್ನು ಪಡೆದು ಜಾನ್ ಮಾರ್ಕನು ಸಿದ್ಧಪಡಿಸಿದ ಸುವಾರ್ತೆಯಲ್ಲಿ ಎಷ್ಟು ಅತ್ಯುಕ್ತಿಗಳು ಒದಗಿ ಬಂದಿಲ್ಲ ? ಎಷ್ಟು ಅದ್ಭುತ ಪವಾಡಗಳು ಪ್ರಸಕ್ತವಾಗಿಲ್ಲ ? ಏಸುವು ಶಿಲುಬೆಯನ್ನೇರಿ ತೀರಿಕೊಂಡ ಮೂವತ್ತು ವರ್ಷಗಳ ನಂತರ ಮೊದಲನೆಯ ಈ ಸುವಾರ್ತೆಯು ಸಿದ್ಧವಾದುದು. ನಾರಾಯಣಪಂಡಿತಾಚಾರ್ಯರು ಗ್ರಂಥರಚನೆ ಮಾಡಿದ ಸಮಯದಲ್ಲೇ ಆಚಾರ್ಯರು ವಾಯುವಿನ ಅವತಾರವೆಂಬ ಕಲ್ಪನೆ ದೃಢವಾಗಿದ್ದಿತು. ತ್ರಿವಿಕ್ರಮ ಪಂಡಿತಾಚಾರ್ಯರೇ ಇದನ್ನು ಒಪ್ಪಿಕೊಂಡಿದ್ದರಷ್ಟೆ 'ಮಧ್ವ ವಿಜಯ'ದ ಗ್ರಂಥಕಾರಪ್ರತಿಜ್ಞೆಯ ಸಂದರ್ಭದಲ್ಲಿ "ವಿಶ್ವಗುರೋರ್ವಿಶುದ್ಧಾಂ ವಕ್ಷ್ಯಾಮಿ ವಾಯೋರವತಾರಲೀಲಾಂ'* ಎಂಬ ಮಾತು ಬಂದಿದೆ. ಹನುಮ, ಭೀಮರು ಮಧ್ವರಪೂರ್ವಾವತಾರಗಳೆಂಬ ಕಲ್ಪನೆ ಇಲ್ಲಿಯೇ ಕಾಣುತ್ತದೆ. ಈ ಕಲ್ಪನೆಗೆ ಪೋಷಕವಾಗಿ, ಪೂರಕವಾಗಿ 'ಭುವನಾದ್ಭುತಮಧ್ವಚೇಷ್ಟಿತ'ಗಳ ನಿರೂಪಣೆ ಬರುತ್ತದೆ.

ಮೇಲಾಗಿ, 'ಮಧ್ವವಿಜಯ'ವು ಮುಖ್ಯವಾಗಿ ಮಹಾಕಾವ್ಯ ಎಂಬುದನ್ನು ಮರೆಯಬಾರದು. ಎಂಥ ಮಹಾತ್ಮನ ಬಾಳುವೆಯ

---

* **सुमध्वविजयः**, १, ५.

ಲ್ಲಾಗಲೀ ಬರಡು ವಿವರಗಳಿದ್ದೇ ಇರುತ್ತವೆ. ಆದರೆ ಕವಿಚೇತನಕ್ಕೆ ಇಷ್ಟರಿಂದ ಸಮಾಧಾನವಿಲ್ಲ. ಕವಿಯ ಪ್ರತಿಭೆಯಿಂದಾಗಿ ಇಂಥ ನಿತ್ಯನೀರಸ ವಿವರಗಳು ಕಳೆದುಂಬಿ ಕಾಣಿಸಿಕೊಳ್ಳುತ್ತವೆ. ನಾರಾಯಣ ಪಂಡಿತಾಚಾರ್ಯರು ಹೇಳಿರುವ ಈ ಮಾತು ಅವರ ದೃಷ್ಟಿಯನ್ನು ಸ್ಪಷ್ಟಗೊಳಿಸುತ್ತದೆ –

> **ಗಮನಾಸನ ಸಂಕಥಾದಿಲೀಲಾಃ**
> **ಸ್ಮೃತಿಮಾತ್ರೇಣ ಭವಾಪವರ್ಗದಾತ್ರೀಃ ।**
> **ಕಥಮಪ್ಯಮರಾಃ ಪ್ರಪಂಚಯೇಯುಃ**
> **ನನು ಮಧ್ವಸ್ಯ ನಮಾದೃಶೋಽಲ್ಪಬೋಧಾಃ ॥***

ಹೋದರು, ಬಂದರು, ಕೂತರು, ಮಾತಾಡಿದರು ಮುಂತಾದುವೆಲ್ಲ ಲೀಲೆಗಳಂತೆ ; ಅವನ್ನು ನೆನೆಸಿಕೊಂಡರೇ ಭವ ಇಂಗುವುದಂತೆ. ದೇವತೆಗಳಿಂದಲೂ ಅವನ್ನು ವಿವರಿಸುವುದಾಗದು, ತನ್ನಂಥ ಅಲ್ಪಜ್ಞನಿಂದಾದೀತೇ ಎಂದು ಭಿನ್ನವಿಸಿಕೊಂಡಿದ್ದಾರೆ. ಇದು ಕವಿಯ ದೃಷ್ಟಿ ಶ್ರದ್ಧಾಳುವಿನ ದೃಷ್ಟಿ ; ಇತಿಹಾಸಕಾರನದಲ್ಲ. ಇತಿಹಾಸದಲ್ಲಿ ಪರಿಚ್ಛೇದವೊಂದನ್ನು ನಿರ್ಮಿಸಬೇಕೆಂಬ, ನಿರೂಪಿಸಬೇಕೆಂಬ ಆಶಯ ನಾರಾಯಣಪಂಡಿತ ಆಚಾರ್ಯರಿಗಿರಲಿಲ್ಲ. ಆಚಾರ್ಯರ ಜೀವನ ವೃತ್ತಾಂತವನ್ನು ನೇರವಾಗಿ ನಿರೂಪಿಸಬೇಕೆಂಬುದೂ ಗೌಣವಾದ ಪ್ರಯೋಜನವಷ್ಟೆ. ಆಚಾರ್ಯರ ಸಿದ್ಧಾಂತಕ್ಕೆ ಮನಒಲಿದು ಜನರಲ್ಲಿ ಶ್ರದ್ಧೆ ಮೂಡಿಸಬೇಕೆಂಬ ಕಾತರ ಈ ಕಾವ್ಯದ ಮುಖ್ಯ ಸ್ಫೂರ್ತಿಯೆಂದರೆ ತಪ್ಪಾಗದು.

'ಮಧ್ವವಿಜಯ'ವನ್ನು ಬರೆದವರು ಬರಿಯ ಶ್ರದ್ಧಾಳುಗಳಲ್ಲ ; ತುಂಬ ಪ್ರತಿಭಾಶಾಲಿಯಾದ ಕವಿ. ಅವರ ಕೃತಿಯಲ್ಲಿ ಮಧುರವಾದ ಪದಯೋಜನೆಯಿದೆ ; ಮನೋಜ್ಞವಾದ ಉಪಮೆಗಳಿವೆ ; ಶ್ಲೇಷಾದ್ಯಲಂಕಾರಗಳನ್ನು ಅವರು ಬಳಸಿದ್ದಾರೆ ; ಮಂಜುಭಾಷಿಣಿ,

* सुमध्वविजयः, १३, ४२.

ಸುಂದರಿ, ಚಂದ್ರಿಕಾ, ಪ್ರಹರ್ಷಿಣೀ ಮುಂತಾದ ವೃತ್ತಗಳನ್ನು ಪ್ರಯೋಗಿಸಿದ್ದಾರೆ. ಪ್ರತಿಭೆಗೆ ಅನುರೂಪವಾದ ಕಲ್ಪನಾಶಕ್ತಿಯೂ ಇದೆ. ಕಾವ್ಯಸಂಸಾರದಲ್ಲಿ ಪ್ರಜಾಪತಿಯಾದ ಕವಿಯು ವಿಶ್ವವನ್ನು ತನಗೆ ರುಚಿಸಿದಂತೆ ಪರಿವರ್ತಿಸಿಕೊಳ್ಳುವುದು ಸಹಜವಷ್ಟೆ. ಈ ದೃಷ್ಟಿಯಿಂದಲೂ 'ಮಧ್ವವಿಜಯ'ದಲ್ಲಿ ಅಡಗಿರುವುದೆಲ್ಲ ಇತಿಹಾಸವೆನ್ನುವುದು ಸಲ್ಲದು. ಆದರೆ ಅದರಲ್ಲಿ ಇತಿಹಾಸವಿಲ್ಲವೆನ್ನುವುದೂ ತಪ್ಪಾದೀತು. ಅದು 'ಮೇಘಸಂದೇಶ'ದಂತೆ ಕೇವಲ ಕಾಲ್ಪನಿಕವಾದ ಕಾವ್ಯವಲ್ಲ, 'ಕಿರಾತಾರ್ಜುನೀಯ'ದಂತೆ ಬರಿಯ ಪೌರಾಣಿಕ ಕಾವ್ಯವೂ ಅಲ್ಲ. ನಿಜವಾಗಿ ಇದ್ದು ಓಡಾಡಿದ ವ್ಯಕ್ತಿಯೊಬ್ಬನನ್ನು ಅಧಿಕರಿಸಿ ರೂಪತಳೆದ ಕೃತಿಯಲ್ಲವೆ ಅದು ? ಭಕ್ತಿಯ ರಭಸದಲ್ಲಿ ಅತ್ಯುಕ್ತಿ ಒದಗುವುದು ಸಹಜ ; ಆದರೆ ಈ ಕಂಚುಕವನ್ನು ಕಳಚಿದರೆ ಇತಿಹಾಸಶುದ್ಧವಾದ ವಿವರಗಳು ಹೊರಬರುತ್ತವೆ.

'ಮಧ್ವವಿಜಯ'ವನ್ನು ಬರೆದವರೇ 'ಮಣಿಮಂಜರಿ'ಯೆಂಬ ಇನ್ನೊಂದು ಕಾವ್ಯಗ್ರಂಥವನ್ನೂ ಬರೆದಿದ್ದಾರೆ. 'ನಾರಾಯಣಪ್ರೋದ್ಭವ'ವಾದ ಇದನ್ನು 'ಕೃಷ್ಣಸ್ಯಾದ್ಭುತವೀರ್ಯವರ್ಣನಪರ'ವೆಂದೂ 'ವಿಚಿತ್ರವೃತ್ತ ರಚಿತ'ವಾದುದೆಂದೂ ಗ್ರಂಥಕಾರರು ಬಣ್ಣಿಸಿದ್ದಾರೆ. ಎಂಟನೆಯ (ಅದೇ ಕಡೆಯದು) ಸರ್ಗದಲ್ಲಿ ಮಧ್ವಾಚಾರ್ಯರ ಜನ್ಮ, ಸಂನ್ಯಾಸ, ಸಿದ್ಧಾಂತಗಳ ಪ್ರಸ್ತಾಪವಿದ್ದರೂ ಬಹುಮಟ್ಟಿಗೆ ಇದು ಹಿನ್ನೆಲೆಯ ನಿರೂಪಣೆ. ಸೃಷ್ಟಿಕ್ರಮದಿಂದ ಆರಂಭಿಸಿ ರಾಮಾವತಾರದ ಕಥೆ ; ಮಹಾಭಾರತದ ಕಥೆ ; ಕೃಷ್ಣನಜನ್ಮ, ಬಾಲಲೀಲೆ ; ಭೀಮನು ಸ್ವರ್ಗಸ್ಥನಾದಮೇಲೆ ಕಲಿಮುಖ್ಯರು ನಿರ್ಭೀತರಾಗಿ ಮಣಿಮಂತನನ್ನು ಪ್ರಚೋದಿಸುವುದು ; ಮಣಿಮಂತನ ಕಥೆ, ಶಂಕರವಿಜಯದ ಕಥೆ ಇವನ್ನು ನಿರೂಪಿಸಿದ್ದಾರೆ. ಮಣಿಮಂತನು ಬ್ರಾಹ್ಮಣಿಯೊಬ್ಬಳಲ್ಲಿ

ಜಾರನಿಂದ ಉತ್ಪನ್ನನಾಗಿ ಸರ್ವಕರ್ಮಬಹಿಷ್ಕೃತನಾದ 'ಸಂಕರ'ನಾದನೆಂದು ಪ್ರಸ್ತಾಪವಿದೆ ; ಶಂಕರಾಚಾರ್ಯರನ್ನು ಕುರಿತ ಪ್ರಸ್ತಾಪ ಇದು. ಈ ಉಲ್ಲೇಖದಲ್ಲಿ ಶ್ಲಾಘ್ಯವಾದ ಮನೋಧರ್ಮ ಕಾಣಿಸುವುದಿಲ್ಲವೆಂದು ಒಪ್ಪಬೇಕು. ಆದರೆ 'ಮಣಿಮಂಜರಿ'ಯಲ್ಲಿ ಬೌದ್ಧಮತದ ಮತ್ತು ಮಾಯಾವಾದದ ಉಗಮ, ಪ್ರಚಾರ ಮತ್ತು ಅವನತಿಗಳ ಚಿತ್ರಣವಿರುವುದು ಸ್ವಾರಸ್ಯವಾಗಿದೆ. 'ಮಣಿಮಂಜರಿ'ಯು 'ಮಧ್ವವಿಜಯ'ಕ್ಕೆ ವಸ್ತುವಿನ ದೃಷ್ಟಿಯಿಂದ ಪೂರಕವಾದುದೆನ್ನಬಹುದು.

ನಾರಾಯಣ ಪಂಡಿತಾಚಾರ್ಯರು 'ಮಧ್ವವಿಜಯ'ಕ್ಕೆ ತಾವೇ 'ಭಾವ ಪ್ರಕಾಶಿಕೆ'ಯೆಂಬ ವ್ಯಾಖ್ಯಾನವನ್ನೂ ಬರೆದಿದ್ದಾರೆ. ಇದರಲ್ಲಿ ಮಧ್ವಾಚಾರ್ಯರ ಕಾಲದ ತುಳುನಾಡಿನ ವಿವರಗಳು ದೊರೆಯುತ್ತವೆ. ಹಲವಾರು ಊರ ಹೆಸರುಗಳನ್ನೂ ಜನರ ಹೆಸರುಗಳನ್ನೂ 'ಮಧ್ವವಿಜಯ'ದಲ್ಲಿ ಸಂಸ್ಕೃತ ರೂಪದಲ್ಲೇ ಹೇಳಿದ್ದಾರೆ ; ಇವುಗಳಿಗೆ ಮೂಲಭೂತವಾದ ತುಳುಶಬ್ದಗಳನ್ನು 'ಭಾವಪ್ರಕಾಶಿಕೆ'ಯಲ್ಲಿ ಕೊಟ್ಟಿದ್ದಾರೆ. ಇದರಿಂದ ಇತಿಹಾಸ ಸುಮಾರಾಗಿ ಶುದ್ಧವಾಗಿದೆಯೆನ್ನಬೇಕು. ಇದಲ್ಲದೆ 'ಅಣುಮಧ್ವವಿಜಯ'ವೆಂಬ ಮತ್ತೊಂದು ಗ್ರಂಥವನ್ನೂ ನಾರಾಯಣ ಪಂಡಿತಾ-ಚಾರ್ಯರೇ ರಚಿಸಿದ್ದಾರೆ. ಇದು 'ಮಧ್ವವಿಜಯ'ದ ಸಂಗ್ರಹವಷ್ಟೆ

ನಾರಾಯಣ ಪಂಡಿತಾಚಾರ್ಯರ 'ಮಧ್ವವಿಜಯ'ವೇ ಮಧ್ವಾಚಾರ್ಯರ ವಿಚಾರವಾಗಿ ರಚಿತವಾದ ಮೊಟ್ಟ ಮೊದಲನೆಯ ಗ್ರಂಥವಲ್ಲ. ಅದೇ ಗ್ರಂಥದ ಹತ್ತನೆಯ ಸರ್ಗದಲ್ಲಿ ಮಧ್ವಾಚಾರ್ಯರ ಶಿಷ್ಯನೊಬ್ಬನು ಅವರ ಬಗ್ಗೆ ಕಾವ್ಯವೊಂದನ್ನು ಬರದಿದ್ದನೆಂಬ ಪ್ರಸ್ತಾಪವಿದೆ (**ದಶಮತಿಶಿಷ್ಯಃ ಕಶ್ಚಿತ್.... ವಿವಿಧ ಸುವೃತ್ತಂ ವಾಕ್ಯಂ ಕಾವ್ಯಮಿವೋಚೇ ಸನಾಯಕಸ್ತವಕಂ**).* ಇದು ಯಾರೆಂಬುದು ತಿಳಿದು

* **सुमध्वविजयः**, १०, २.

ಬರುವುದಿಲ್ಲ; ಈ ಗ್ರಂಥವು ಇಂದು ಉಪಲಬ್ಧವಿಲ್ಲ. ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರಾಗಿದ್ದ ಹೃಷೀಕೇಶತೀರ್ಥರೆಂಬುವರು (ಸುಮಾರು ೧೨೫೦-೧೩೩೦) 'ಸಂಪ್ರದಾಯಪದ್ಧತಿ'ಯೆಂಬ ಇಪ್ಪತ್ತಾರು ಶ್ಲೋಕಗಳ ಸಣ್ಣ ಗ್ರಂಥವೊಂದನ್ನು ಬರೆದಿದ್ದಾರೆ ; ಇದರಲ್ಲಿ ಮಧ್ವಾಚಾರ್ಯರ ಜೀವನಕ್ಕೆ ಸಂಬಂಧಿಸಿದ ವಿವರಗಳಿವೆ. ಹೃಷೀಕೇಶತೀರ್ಥರೂ ತೌಳವರೇ ; ಇವರ ಪ್ರಸ್ತಾಪ ನಾರಾಯಣಪಂಡಿತಾಚಾರ್ಯರ 'ಮಧ್ವವಿಜಯ'ದಲ್ಲಿಯೂ ಬರುತ್ತದೆ. ಮಧ್ವಾಚಾರ್ಯರು ಸ್ಥಾಪಿಸಿದ ಅಷ್ಟಮಠಗಳಲ್ಲಿ ಒಂದಾದ, ಅಷ್ಟೋತ್ಕೃಷ್ಟವೆನಿಸಿದ, ಫಲಿಮಾರು ಮಠದ ಮೂಲಪುರುಷರು ಇವರು. ಆಚಾರ್ಯರಿಗೆ ತುಂಬ ಪ್ರೀತಿಯ ಶಿಷ್ಯರಂತೆ ಇವರು ; ಆಚಾರ್ಯರು ಪ್ರವಚನ ಮಾಡುವಾಗ ಇವರಿಂದಲೇ ಭಾಗವತವನ್ನು ಓದಿಸುತ್ತಿದ್ದರಂತೆ. ಆಚಾರ್ಯರ 'ಸರ್ವಮೂಲ' ಗ್ರಂಥಗಳನ್ನು ಇವರು ತಮ್ಮ ಕೈಯಿಂದಲೇ ಬರೆದಿಟ್ಟ ತಾಳಪತ್ರಪ್ರತಿಯು ಇಂದಿಗೂ ಫಲಿಮಾರುಮಠದಲ್ಲಿ ಇದೆಯೆಂದು ಹೇಳುತ್ತಾರೆ. ಇಂಥವರು ಬರೆದಿಟ್ಟಿರುವ ಗ್ರಂಥ 'ಸಂಪ್ರದಾಯ ಪದ್ಧತಿ' ಯೆಂಬ ಹೆಸರು ಹೊತ್ತಿದ್ದರೂ ಮಧ್ವಜೀವಿತವನ್ನು ಇತಿಹಾಸ ಶುದ್ಧವಾಗಿ ಚಿತ್ರಿಸುತ್ತದೆ. ಆದರೆ ಇದು ಸಾರಸಂಗ್ರಹ ; ಇಲ್ಲಿ ಬರುವ ವಿವರಗಳು ಸ್ವಲ್ಪವೇ. ಇದರ ಮತ್ತು ಇದರೊಂದಿಗೇ ಇರುವ 'ಅಣುಮಧ್ವ ಚರಿತ'ವೆಂಬ ಭಾಗದ ಪೂರ್ಣ ಪಾಠಗಳನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ.

ಮಧ್ವಾಚಾರ್ಯರ ಬಾಳುವೆಯ ವಿವರಗಳನ್ನು ಹೇಳುವ ಪ್ರಾಚೀನ ಆಕರಗಳು ಇಷ್ಟೆ. ಉಳಿದುವೆಲ್ಲ ಈಚಿನವು ; ಕಲ್ಪನೆಗಳ ಕಾಡುಗಳು. ಮಧ್ವಾಚಾರ್ಯರು ತುಳುನಾಡಿನಲ್ಲಿ ಹುಟ್ಟಿಬಾಳುತ್ತಿರುವಾಗ ಉಡುಪಿಗೆ ತೀರ ಹತ್ತಿರದ ಬಾರಕೂರಿನಲ್ಲೇ ಆಲುಪರಾಜರು ವಿಖ್ಯಾತ ರಾಗಿದ್ದರು ; ವಿಬುಧವಸು, ವೀರಪಾಂಡ್ಯದೇವ, ನಾಗದೇವರಸ,

ಬಂಕಿದೇವ ಇಮ್ಮಡಿ ಆಲುಪೇಂದ್ರ, ಸೋಯಿದೇವ ಆಲುಪೇಂದ್ರ ದೇವ ಇವರು ರಾಜ್ಯವಾಳಿದ ಕಾಲ ಅದು. ಅವರ ಶಾಸನಗಳು ಹಲವಾರು ದೊರೆತಿವೆ. ಆದರೆ ಒಂದು ಶಾಸನದಲ್ಲೂ ಮಧ್ವಾಚಾರ್ಯರ ಉಲ್ಲೇಖ ವಿಲ್ಲದಿರುವುದು ಸೋಜಿಗ. ಆಲುಪರಾಜರು ಮೊದಲಿಗೆ ಜೈನರು, ಅನಂತರ ಶೈವಪಕ್ಷಪಾತಿಗಳಾದರು. ಹೀಗಾಗಿ ವೈಷ್ಣವ ಗುರುಗಳಾದ ಮದ್ವಾಚಾರ್ಯರನು ಹೆಸರಿಸುವ ಕಾರಣವಿರಲಿಲ್ಲ ಎನ್ನಬಹುದು. ಉಡುಪಿಯ ದೇವಸ್ಥಾನದಲ್ಲಿ ದೊರೆತ ಹಳೆಯ ಶಾಸನಗಳಲ್ಲಿ ಕೂಡ ಮಧ್ವಾಚಾರ್ಯರ ಹೆಸರು ಬರುವುದಿಲ್ಲ. ತುಳುದೇಶದಲ್ಲಿ ಪ್ರಚಲಿತ ವಾದ 'ಗ್ರಾಮಪದ್ಧತಿ'ಗಳಲ್ಲೂ ಮಧ್ವಾಚಾರ್ಯರ ಪ್ರಸ್ತಾಪವಿಲ್ಲ. ಆದರೆ ಪುತ್ತಿಗೆ ಗ್ರಾಮಪದ್ಧತಿಯೊಂದು 'ಮಾಧ್ವಮತ ಪ್ರಚಂಡ'ರಾದ ಮುನಿಯೊಬ್ಬರ ವೃತ್ತಾಂತವನ್ನು ನಿರೂಪಿಸುತ್ತದೆ.

'ಅಸಾಕ್ಷಿತ್ವೇನನಿಂದಿತ'ರಾದ ಕೋಟೇಶ್ವರ ಬ್ರಾಹ್ಮಣರು ತಮ್ಮ ನಾಡವರಿಂದ ಬಹಿಷ್ಕೃತರಾಗಿ ಅಲೆದಾಡುತ್ತಿದ್ದಾಗ ಈ ಮುನಿಯನ್ನು ಕಂಡರೆಂದೂ, ಅವನಲ್ಲಿ ಶರಣು ಹೋಗಲು ಕೃಪಾಳುವಾದ ಮುನಿಯು ಅವರಿಗೆ ತಪ್ತ ಮುದ್ರಾಂಕನ ಮಾಡಿ ನಾರಾಯಣಾಷ್ಟಾಕ್ಷರಮಂತ್ರವನ್ನು ಉಪದೇಶ ಮಾಡಿದನೆಂದೂ, ಹೀಗೆ ಶುದ್ಧರಾದ ಆ ಬ್ರಾಹ್ಮಣರು ರಾಜನ ಅಪ್ಪಣೆಯನ್ನು ಪಡೆದು ಅದೇ ಗ್ರಾಮದಲ್ಲೇ ಇರಲಾರಂಭಿಸಿದರೆಂದೂ ಪುತ್ತಿಗೆ ಗ್ರಾಮಪದ್ಧತಿಯ ವಿವರ. ಇದನ್ನು ತಮ್ಮ 'ಪ್ರಾಚೀನ ಕರ್ಣಾಟಕ' ದಲ್ಲಿ ಪ್ರಸ್ತಾಪಿಸಿರುವ ಭಾಸ್ಕರ ಆನಂದ ಸಾಲೆತ್ತೂರು ಗ್ರಾಮ ಪದ್ಧತಿಯು ಮಧ್ವಾಚಾರ್ಯರ ಚಿತ್ರವನ್ನು ಬಿಡಿಸಿರುವ ಮೂಲಪಾಠವನ್ನೂ ಕೊಟ್ಟಿದ್ದಾರೆ –

ಊರ್ಧ್ವಪುಂಡ್ರಾಂಕಿತಂ ಶಾಂತಂ ಚಂದನೇನೋರ್ಧ್ವಪುಂಡ್ರಕಂ।
ಆಮೂಲ ಮುದ್ರಾಂಕಿತಬಾಹುದಂಡಂ ಕಲೌಯುಗೇ ಮಾಧ್ವಮತ ಪ್ರಚಂಡಂ॥

ಪುನಶ್ಚ ಮುದ್ರಾಂಕಿತ ಸರ್ವಗಾತ್ರಂ ವಾಮೇತರೇ ಸಂಸ್ಥಿತ ನೀಲಪತ್ರಂ।
ಕಪಾಲಮಾಲೋಕಿತವಾಮನೇತ್ರಂ ಧ್ಯಾಯಂತಮೀಶಂ ಹೃದಿ ಪಕ್ಷಿಪನ್ನಂ ॥
ಕಂಠೇ ಸಮಾಶ್ಲಿಷ್ಟ ಸುಪದ್ಮಮಾಲಂ ಬ್ರಹ್ಮಾಂಡಪಿಂಡೀಕೃತ ಬಿಂದು ಜಾಲಂ।
ಗಾಯಂತಮೀಶಸ್ಯ ನೃಸಿಂಹಲೀಲಾಂ ಧ್ಯಾಯಂತಮಾದ್ಯಂ ಹೃದಿ ಕೋಲ ರೂಪಂ॥

ಈ ಪಾಠ ಅಲ್ಲಲ್ಲಿ ಅಶುದ್ಧವಾಗಿದ್ದು ಅರ್ಥವಾಗುವುದಿಲ್ಲ. ಆದರೆ ಇಲ್ಲಿ ಹೇಳುವ ಮಾಧ್ವಮುನಿಯು ಮಧ್ವಾಚಾರ್ಯರೇ ಎಂದು ಸಾಲೆತ್ತೂರರ ವಾದ. ಪುತ್ತಿಗೆ ಗ್ರಾಮಪದ್ಧತಿಯಲ್ಲೇ ಮತ್ತೊಂದೆಡೆ ಬೆಳಂಜೆಗ್ರಾಮದ ತರುಣನೊಬ್ಬನು ತನ್ನ ಹೆಂಡತಿಯನ್ನೂ ಆಕೆಯ ಜಾರನನ್ನೂ ಕೊಂದು, ಊರವರು ಅವನನ್ನು ಹೊರಗೆ ಹಾಕಲು ಅವನು ಮನೆಯವರೊಂದಿಗೆ ಯಾತ್ರಾಟನೆ ಮಡುತ್ತ ಗೋರಾಷ್ಟ್ರ, ಅವಿಮುಕ್ತ ಕ್ಷೇತ್ರಗಳನ್ನೂ ಕ್ರೋಡ-ಶಂಕರನಾರಾಯಣನನ್ನೂ ಸಂದರ್ಶಿಸಿ ಅನಂತೇಶ್ವರನನ್ನು ಸಂದರ್ಶಿಸಲು ಉಡುಪಿಗೆ ಬರುತ್ತಾನೆ. ಇಲ್ಲಿ ಅವರು ಮಧ್ವಾಚಾರ್ಯರನ್ನೂ ಕಂಡು ಅವರಿಂದ ತೀರ್ಥ ಪಡೆದು ಶುದ್ಧರಾಗುತ್ತಾರೆ ; ಆಚಾರ್ಯರು ಅವರಿಗೆ ತಮ್ಮಲ್ಲಿದ್ದ ಜನಾರ್ದನ ಶಾಲಗ್ರಾಮವನ್ನು ಕೊಡುತ್ತಾರೆ.

ಸ್ಥಳ ಪುರಾಣ ಕಥೆಗಳು

ತುಳುನಾಡಿನ ಹತ್ತಾರು ಊರುಗಳಲ್ಲಿ ಮಧ್ವಾಚಾರ್ಯರಿಗೆ ಸಂಬಂಧಿಸಿದ ಸಂಪ್ರದಾಯಗಳು ಬೆಳೆದು ಬಂದಿದೆ. ಉಡುಪಿ, ಪಾಜಕ ಕ್ಷೇತ್ರಗಳಂತೂ ಅವರ ತೌರೂರೇ ಆಯಿತಲ್ಲ. ಕ್ರೋಡ, ಕುಂಭಾಸಿ, ಸೋಮೇಶ್ವರ, ಮಂಜೇಶ್ವರ, ಸುಬ್ರಹ್ಮಣ್ಯ, ಕಣ್ವತೀರ್ಥ, ಬಡುಗಬೆಟ್ಟು, ಪಡುಬಿದ್ರಿ-ಎರ್ಮಾಳು, ಕೊಡವೂರು, ಕೂಡಲು ಮುಂತಾದ ಹಳ್ಳಿಗಳು ಮಧ್ವಾಚಾರ್ಯರ ನೆನಪನ್ನು ಉಳಿಸುತ್ತವೆ. ಹುಡುಗರಾಗಿದ್ದಾಗ ಕ್ರೋಡ-ಶಂಕರನಾರಾಯಣಕ್ಕೆ ಅವರು ಆಗಾಗ ಬರುತ್ತಿದ್ದರು. ಕುಂಭಾಸಿ ದೇವಾಲಯದ ಪೂಜಾ ವ್ಯವಸ್ಥೆಯಾದದ್ದು

ಅವರಿಂದ. ಮಧ್ವಾಚಾರ್ಯರು ಯಾದವರಾಜ ಈಶ್ವರದೇವನನ್ನು ನೋಡಿದುದು ಮಂಜೇಶ್ವರದಲ್ಲಿ. ಸೋಮೇಶ್ವರಕ್ಕೆ ಅವರು ಹಲವಾರು ಬಾರಿ ಹೋಗಿಬರುತ್ತಿದ್ದರು. ತುಳುನಾಡಿನಲ್ಲಿರುವಾಗ ದಿನವೂ ಸಂಜೆಯ ಪೂಜೆಯನ್ನು ಸುಬ್ರಹ್ಮಣ್ಯದಲ್ಲೇ ನಡೆಸುತ್ತಿದ್ದರು. ಕಣ್ವತೀರ್ಥದಲ್ಲೇ ಅಷ್ಟಮಠದ ಯತಿಗಳಿಗೆ ಆಶ್ರಮವಾದದ್ದು. ಬಡುಗಬೆಟ್ಟಿನ ಬಲ್ಲಾಳ ಬ್ರಾಹ್ಮಣನಿಗೆ ಮಧ್ವಾಚಾರ್ಯರು ಕೊಟ್ಟ ಲಕ್ಷ್ಮೀನಾರಾಯಣ ಪ್ರತಿಮೆಯನ್ನು ಪರ್ಯಾಯಸ್ವಾಮಿಗಳು ನೋಡಿಕೊಂಡು ಬರುವ ಪದ್ಧತಿಯಿದೆ. ಎರ್ಮಾಳಿನಲ್ಲಿ ಮಧ್ವಾಚಾರ್ಯರಿಗೆ ದೊರೆತ ಜನಾರ್ದನ ಮೂರ್ತಿಯ ದೇವಾಲಯವಿದೆ. ಆಚಾರ್ಯರು ಬೇಡಿದ ಗೋಪೀಚಂದನಗೆಡ್ಡೆಗಳನ್ನು ಹಡಗಿನಿಂದ ಅವರಿದ್ದಲ್ಲಿಗೆ ಒಯ್ದುತಂದ ಪೆಂಟೆಮನೆಯವರು ಎರ್ಮಾಳಿನವರೇ ; ಅವರ ವಂಶೀಕರು ಇಂದಿಗೂ ಇದ್ದಾರೆ. ತ್ರಿವಿಕ್ರಮಪಂಡಿತಾಚಾರ್ಯರಿಗೂ ಮಧ್ವಾಚಾರ್ಯರಿಗೂ ವಾಕ್ಯಾರ್ಥ ನಡೆದದ್ದು ಕೂಡಲಿನಲ್ಲಿ ಇತ್ಯಾದಿ, ಇತ್ಯಾದಿ. ಎಂದರೆ ಆ ಕಡೆ, ತುಳುನಾಡಿನಲ್ಲಿ, ಮಧ್ವಾಚಾರ್ಯರ ಇರವು ಜನಜೀವನದಲ್ಲಿ ಬೆರೆತು ನಿಂತಿದೆ. ಈ ಊರುಗಳ ಸ್ಥಳಪುರಾಣ ಹೇಳುವ ಕಥೆಗಳಲ್ಲಿ ಮಧ್ವಾಚಾರ್ಯರ ಪ್ರಶಸ್ತಿಯಿದೆ. ಇತಿಹಾಸವನ್ನು ಅರಸುವರಿಗೆ ಇದು ತುಂಬ ನೆರವಾಗುತ್ತದೆ. ೧೮೯೪ರಲ್ಲಿ ಜಾನ್ ಸ್ಟರೋಕ್ ಎಂಬಾತನು 'ಡಿಸ್ಟ್ರಿಕ್ಟ್ ಮ್ಯಾನ್ಯುವಲ್ ಆಫ್ ಸೌತ್ ಕೆನರಾ' ಎಂಬ ಗ್ರಂಥದ ಮೊದಲನೆಯ ಭಾಗವನ್ನೂ, ೧೮೯೫ರಲ್ಲಿ ಹೆರಾಡ್ಡ್ ಸ್ಟುಆರ್ಟ್ ಎಂಬಾತನು ಈ ಗ್ರಂಥದ ಎರಡನೆಯ ಭಾಗವನ್ನೂ, ೧೯೩೮ರಲ್ಲಿ ಜೆ. ಎಫ್. ಹಾಲ್ ಮತ್ತು ಕೆ. ಎನ್. ಕೃಷ್ಣಸ್ವಾಮಿ ಅಯ್ಯರ್ ಎಂಬುವರು ಈ ಎರಡೂ ಭಾಗಗಳಿಗೆ ಪರಿಶಿಷ್ಟ ಗ್ರಂಥವೊಂದನ್ನೂ ಸಿದ್ಧಪಡಿಸಿದರು. ಈ ಗ್ರಂಥಗಳಲ್ಲಿ ಇಂತಹ ಸ್ಥಳಪುರಾಣಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

2. ಕಾಲ ನಿರ್ಣಯ

ಮಧ್ವಚಾರ್ಯರ ಕಾಲ ನಿರ್ಣಯದ ವಿಚಾರವಾಗಿ ವಿಪುಲವಾದ ಚರ್ಚೆ ನಡೆದಿದೆ. ಆಚಾರ್ಯರ ಅವತಾರ ಕಾಲ, ತಿರೋಧಾನ ಕಾಲಗಳ ಬಗ್ಗೆ ಮಠಗಳವರು ಉಳಿಸಿಕೊಂಡಿರುವ ವಿವರಗಳು ವಿಭಿನ್ನವಾಗಿರುವುದೂ, ಕಾಲನಿರ್ಣಯಕ್ಕೆ ನೆರವಾಗಲು ನೇರವಾದ ಯಾವೊಂದು ಶಾಸನದ ಬಲವೂ ಇಲ್ಲದಿರುವುದೂ ಈ ಗೊಂದಲಕ್ಕೆ ಕಾರಣವಾದುವು. ಫಲಿಮಾರು ಮಠದವರು ಮಧ್ವಾಚಾರ್ಯರ ಕಾಲ ಶಕ ೧೧೧೮ ರಿಂದ ೧೧೯೯ರವರೆಗೆ ಎಂದರೆ (ಕ್ರಿಸ್ತಾಬ್ಧ ೧೧೯೬-೧೨೭೭) ಎಂದು ಸಂಪ್ರದಾಯ ಉಳಿಸಿಕೊಂಡಿದ್ದರು ; ರಾಮಕೃಷ್ಣಗೋಪಾಲಭಂಡಾರಕರರು ಇದನ್ನೇ ಸರಿಯೆಂದು ಸ್ವೀಕರಿಸಿದ್ದರು. ಅಧಮಾರು ಮಠದ ಕೈಫಿಯತ್ತು ಆಚಾರ್ಯರ ಜನನ ಶಕ ೧೧೨೧ರಂದು, (ಕ್ರಿ.ಶ. ೧೧೯೯) ಕಾಳಾಯತಾಕ್ಷಿ ಸಂವತ್ಸರದ ಮಾಘಶುದ್ಧ ಸಪ್ತಮಿಯ ದಿನವೆಂದು ನಿರೂಪಿಸುತ್ತದೆ ; ಬೆನಗಲ್ ರಾಮರಾಯರು ಇದರ ಆಧಾರದ ಮೇಲೆ ಆಚಾರ್ಯರ ಕಾಲ ನಿರ್ಣಯವನ್ನು ಮಾಡಿದರು. ಉತ್ತರಾದಿ ಮತ್ತಿತರ ಮಠಗಳವರು ಆಚಾರ್ಯರ ಕಾಲವನ್ನು ಶಕ ೧೦೪೦ರಿಂದ ೧೧೨೦ (೧೧೧೪-೧೧೯೮) ಎಂದು ಸಾಂಪ್ರದಾಯಿಕವಾಗಿ ನಂಬಿದ್ದರು. ಸಿ. ಎಂ. ಪದ್ಮನಾಭಾಚಾರ್ಯರು ಆಚಾರ್ಯರ ಜನನವರ್ಷ ಶಕ ೧೧೬೦ ಎಂದು ನಿರ್ಧಾರ ಮಾಡಿದರು. ನರಹರಿತೀರ್ಥರೂ ದೇವಗಿರಿಯ ಈಶ್ವರದೇವನೂ ಮಧ್ವಾಚಾರ್ಯರ ಸಮಸಾಮಯಿಕರಾಗಿದ್ದುದೂ ಅಕ್ಷೋಭ್ಯರೂ ವಿದ್ಯಾರಣ್ಯರೂ ಒಂದೇ ಕಾಲದಲ್ಲಿದ್ದುದೂ ಈ ನಿರ್ಧಾರವನ್ನು ಮೂಡಿಸಿತು. ಪುಣೆ ಎಂ.ವಿ. ಶಿಂಗ್ರೆ ಅವರು ಸಾಂಪ್ರದಾಯಿಕವಾದ ಜನನ ವರ್ಷ ೧೧೯೯ ಎಂಬ ವಾದವನ್ನು ಸಮರ್ಥಿಸಲೆತ್ನಿಸಿದರು. ಈ ವಾದಕ್ಕೆ

ನೆರವಾಗಿ 'ಮಹಾಭಾರತ ತಾತ್ಪರ್ಯನಿರ್ಣಯ' (೩೨,೧೩೧)ದಲ್ಲಿ ''ಚತುಃಸಹಸ್ರೇತ್ರಿಶರೋತ್ತರೇ ಗತೇ ಸಂವತ್ಸರಾಣಾಂತು ಕಲೌ ಪೃಥಿವ್ಯಾಂ। ಜಾತಃ ಪುನರ್ವಿಪ್ರತನುಃ ಸ ಭೀಮಃ ದೈತ್ಯೈರ್ನಿಗೂಢಂ ಹರಿತತ್ತ್ವಮಾಹ'' ॥ ಎಂದರೆ ಕಲಿ ೪೩೦೦ ರಂದು (೧೧೯೯) ಆಚಾರ್ಯರು ಹುಟ್ಟಿದರೆಂಬ ಸೂಚನೆಯಿದೆ. ಆದರೆ ಈ ಶ್ಲೋಕ ಪ್ರಕ್ಷಿಪ್ತಾದುದೆಂದು ಎಚ್. ಕೃಷ್ಣಶಾಸ್ತ್ರಿಗಳು ತೋರಿಸಿದರು.

ಹೃಷಿಕೇಶತೀರ್ಥರ 'ಅಣುಮಧ್ವಚರಿತೆ'ಯಲ್ಲಿಯೂ ಆಚಾರ್ಯರ ಕಾಲಮಾನದ ಪ್ರಸ್ತಾಪವಿದೆ. ಆಚಾರ್ಯರು ಹುಟ್ಟಿದುದು ಕಲಿ ೪೩೩೯ (ತ್ರಿಶತಾಬ್ದೋತ್ತರ ಚತುಃಸಹಸ್ರಾಬ್ದೇಭ್ಯ ಉತ್ತರೇ ಏಕೋನಚತ್ವಾರಿಂಶಾಬ್ದೇ) ವಿಳಂಬಿ ಸಂವತ್ಸರದ ಆಶ್ವೀಜ ಶುಕ್ಲದಶಮೀ ಬುಧವಾರ ಮಧ್ಯಾಹ್ನ ದಲ್ಲೆಂದು ಅವರು ಹೇಳಿದ್ದಾರೆ. ಎಂದರೆ ಕ್ರಿಸ್ತಾಬ್ಧ ೧೨೩೮ರ ಸೆಪ್ಟೆಂಬರ್ ತಿಂಗಳು ಇಪ್ಪತ್ತನೆಯ ತಾರೀಖಿಗೆ ಇದು ಸರಿಯಾಗುತ್ತದೆ. ಆದರೆ ಫಲಿಮಾರುಮಠದವರೇ ಉಳಿಸಿಕೊಂಡಿರುವ ಎಣಿಕೆಯ ಪ್ರಕಾರ ಆಚಾರ್ಯರ ಜನ್ಮದಿನ ಶಾ.ಶ. ೧೧೧೯ ಪಿಂಗಳ ಸಂವತ್ಸರದ ಮಾಘ ಶುದ್ಧ ಸಪ್ತಮಿಯಾಗುತ್ತದೆ. ಹೃಷಿಕೇಶತೀರ್ಥರ ಪ್ರಕಾರ ಆಚಾರ್ಯರು ಎಪ್ಪತ್ತೊಂಬತ್ತು ವರ್ಷಗಳು ಬದುಕಿದ್ದು ಪಿಂಗಳ ಸಂವತ್ಸರದ (ಕಲಿ ೪೪೧೮) ಮಾಘ ಶುದ್ಧ ನವಮಿಯಂದು ಮರೆಯಾದರು

ಏಕೋನಾಶೀತಿವರ್ಷಾಣಿ ನೀತ್ವಾ ಮಾನುಷದೃಷ್ಟಿಗಃ।
ಪಿಂಗಲಾಬ್ದೇ ಮಾಘ ಶುದ್ಧನವಮ್ಯಾಂ ಬದರೀಂಯಯೌ॥

ಇದು ಕ್ರಿಸ್ತಾಬ್ಧ ೧೩೧೭ರ ಜನವರಿ ಇಪ್ಪತ್ತೆರಡನೆಯ ಶನಿವಾರಕ್ಕೆ ಸರಿಯಾಗುತ್ತದೆ. ಹೃಷೀಕೇಶ ತೀರ್ಥರು ಆಚಾರ್ಯರ ಸಕ್ಷಾಚ್ಛಿಷ್ಯ ರಾದುದರಿಂದ ಅವರ ಮಾತು ಶ್ರದ್ಧೇಯವಾದುದು. ಇದಕ್ಕೆ ಪೋಷಕವಾಗಿ ಶ್ರೀ ಕೂರ್ಮಶಾಸನವೂ ಪ್ರಕಟವಾಯಿತು.

ಆಂಧ್ರಪ್ರದೇಶದಲ್ಲಿ ಶ್ರೀಕಾಕುಳಕ್ಕೆ ಆಗ್ನೇಯದಲ್ಲಿ ಆರು ಮೈಲಿ ದೂರ ಶ್ರೀ ಕೂರ್ಮವಿದೆ. ಪೂರ್ವಸಮುದ್ರ ತೀರದಲ್ಲಿರುವ ಈ ಊರು ಸ್ವಯಂವ್ಯಕ್ತ ಮೂರ್ತಿಯೆನಿಸಿದ ಕೂರ್ಮನಾಥಸ್ವಾಮಿಯ ದೇವಾಲಯ ದಿಂದ ಪ್ರಸಿದ್ಧವಾದುದು. ಗಾಂಗವಂಶಕ್ಕೆ ಸೇರಿದ ಕಳಿಂಗ ಅರಸರು ೧೦೩೮ ರಿಂದ ೧೪೩೪ರವರೆಗೂ ಇದರ ಮೇಲೆ ಅಧಿಕಾರ ವನ್ನಿಟ್ಟುಕೊಂಡಿದ್ದರು. ಆ ಅರಸರಲ್ಲಿ ಪ್ರಖ್ಯಾತನಾದ ವೀರ ನರಸಿಂಹದೇವನು (೧೨೩೭-೧೨೬೩) ವಿದ್ಯಾಪೋಷಕನಾಗಿ ಧರ್ಮ ಕಾರ್ಯನಿರತನಾಗಿದ್ದನಾಗಿ ಅವನ ಕಾಲದಲ್ಲಿ ಶ್ರೀ ಕೂರ್ಮವೂ ಸಿಂಹಾಚಲವೂ ವಿಶೇಷವಾದ ಅಭಿಮಾನವನ್ನು ಗಳಿಸಿದುವು. ಅವನ ಕಾಲದಲ್ಲೇ ಆಂಧ್ರ ಪ್ರಾಂತ್ಯದಲ್ಲಿ ವೈಷ್ಣವ ಧರ್ಮ ಪ್ರಚಲಿತವಾಯಿತು. ಅವನು ಕಾಲವಾದಾಗ ಅವನ ಮಗ ಅನಂತವರ್ಮ ಪ್ರತಾಪ-ವೀರಭಾನುದೇವ(೧೨೬೩-೧೨೭೮)ನಿನ್ನೂ ಎಳೆಯವನಾದದ್ದರಿಂದ ನರಹರಿತೀರ್ಥರು ಅವನು ಪ್ರಾಯಕ್ಕೆ ಬರುವವರೆಗೆ ಅವನ ಪ್ರತಿನಿಧಿ ಯಾಗಿ ರಾಜ್ಯವಾಳಬೇಕಾಯಿತು. ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯ ರಾದ ಇವರು ಆ ಪ್ರದೇಶದವರೇ ; ಸನ್ಯಾಸಿಗಳಾಗುವ ಮುಂಚೆ ಕಳಿಂಗ ರಾಜನ ಅಧಿಕಾರಿಗಳಾಗಿದ್ದರು. ರಾಜನು ಅಪ್ರಾಪ್ತ ವಯಸ್ಕನಾದಾಗ ಸಂನ್ಯಾಸಿಗಳಾದರೂ ರಾಜ್ಯಭಾರವನ್ನು ನಿರ್ವಹಿಸಬೇಕೆಂಬ ಕರೆ ಇವರಿಗೆ ಬಂದಿತು. ಕರೆಗೆ ಓಗೊಟ್ಟು ೧೨೬೪ ರಿಂದ ೧೨೯೩ರ ವರೆಗೂ ಇವರು ಅಧಿಕಾರವನ್ನು ವಹಿಸಿದರು. ಈ ಅಧಿಕಾರಾವಧಿಯಲ್ಲಿ ಅವರ ಹಲವಾರು ಶಾಸನಗಳು ಸಿದ್ಧವಾದುವು. ಇವುಗಳಲ್ಲಿ ೧೨೮೧ರಂದು ಶ್ರೀಕೂರ್ಮ ದಲ್ಲಿ ಕೂರ್ಮನಾಥಾಲಯದ ಎದುರು ಯೋಗಾನಂದ ನರಸಿಂಹಾಲಯವನ್ನು ಕಟ್ಟಿಸಿದ ಶಾಸನವೂ, ೧೨೯೧ರಂದು ಸಿಂಹಾಚಲದಲ್ಲಿ ತಮ್ಮ 'ಆರೋಗ್ಯಯಶಃ ಪುಣ್ಯಾಭಿವೃದ್ಧಿ'ಗಾಗಿ ನರಸಿಂಹನಿಗೆ ಅಖಂಡ ದೀಪದಾನ ಮಾಡಿದ ಶಾಸನವೂ ಸೇರಿವೆ.

ಭಾನುದೇವನ ಮಗ ಇಮ್ಮಡಿ ವೀರನರಸಿಂಹದೇವ (೧೨೭೮-೧೩೦೫)ನ ಆಳ್ವಿಕೆಯಲ್ಲೂ ನರಹರಿತೀರ್ಥರು ಕಳಿಂಗರಾಜ್ಯದಲ್ಲೇ ಇದ್ದರು.

ಮೇಲೆ ಹೇಳಿದ ಶ್ರೀ ಕೂರ್ಮಶಾಸನದಲ್ಲಿ ಮಧ್ವಾಚಾರ್ಯರು ನರಹರಿತೀರ್ಥರ ಗುರುಗಳೆಂಬ ಪ್ರಸ್ತಾಪವಿದೆ ; ಈ ಶಾಸನವು ಸಿದ್ಧವಾಗುವ ವೇಳೆಯಲ್ಲಿ ಮಧ್ವಾಚಾರ್ಯರು ಜೀವಂತರಾಗಿದ್ದರೆಂಬ ಸೂಚನೆಯಿದೆ. ಈ ಶಾಸನವು ಪ್ರಕಟವಾದಂದು ಮಧ್ವಾಚಾರ್ಯರ ಕಾಲ ನಿರ್ಣಯದ ವಿಚಾರವಾಗಿ ಇದ್ದ ಗೊಂದಲ ಸುಮಾರಾಗಿ ಪರಿಹಾರವಾಯಿತೆನ್ನಬಹುದು. ಈ ಶಾಸನವನ್ನು ನಿರ್ಮಿಸಿದ ಕಾಲವನ್ನು ಶಾಸನವೇ ಹೇಳುತ್ತದೆ – ಶ್ರೀಶಕವತ್ಸರೇ ಹುತವಹ (೩) ವ್ಯೋಮ (೦) ದ್ವಯ (೨) ಕ್ಷ್ಮಾ (೧) ಯುತೇ ಮೇಷೇ' ಇತ್ಯಾದಿ. ಇದು ಅಂಕಗಳ ವಾಮಗತಿಯಲ್ಲಿ ಶಕ ೧೨೦೩ (ಅಥವಾ ಕ್ರಿಸ್ತಾಬ್ಧ ೧೨೮೧) ಎಂದಾಗುತ್ತದೆ. ಈ ಸಮಯದಲ್ಲಿ ಆಚಾರ್ಯರು ಇದ್ದರೆಂದು ಒಪ್ಪಿದರೆ ಮಠಗಳ ಸಾಂಪ್ರದಾಯಿಕ ಎಣಿಕೆ ತಪ್ಪಾಗುತ್ತದೆ ; ಹೃಷಿಕೇಶತೀರ್ಥರ ವಿವರಗಳಿಗೆ ಪುಷ್ಟಿ ದೊರೆಯುತ್ತದೆ.

ಅಂತೂ ಇತ್ತೀಚಿನ ಅಭಿಮತದಂತೆ ಮಧ್ವಾಚಾರ್ಯರ ಜನನ ವರ್ಷ ೧೨೩೮, ಅವರು ತಿರೋಧಾನವಾದ ವರ್ಷ ೧೩೧೭. ಇದಕ್ಕೆ ಸಿ. ಎಂ. ಪದ್ಮನಾಭಾಚಾರ್ಯರು, ಬಿ.ಎ. ಸಾಲೆತ್ತೂರು, ಬಿ. ವೆಂಕೋಬ ರಾವ್, ಬಿ. ಎನ್. ಕೃಷ್ಣಮೂರ್ತಿಶರ್ಮಾ ಮೊದಲಾದ ಪಂಡಿತರ ಸಮ್ಮತಿಯಿದೆ. ಈ ಕಾಲನಿರ್ಣಯಕ್ಕೆ ಹೃಷೀಕೇಶತೀರ್ಥರ 'ಅಣುಮಧ್ವ ಚರಿತೆ'ಯ ಬೆಂಬಲವೂ ಇದೆ.

ಮಧ್ವಾಚಾರ್ಯರ ಕಾಲನಿರ್ಣಯ ಮಾಡುವಾಗ 'ಮಧ್ವವಿಜಯ'ದಲ್ಲಿ ಪ್ರಸ್ತಾಪಕ್ಕೆ ಬರುವ ಇಬ್ಬರು ಮೂವರು ಅರಸರ

ನಿರ್ದೇಶನವೂ ಪ್ರಸಕ್ತವಾಗುತ್ತದೆ. ಹತ್ತನೆಯ ಸರ್ಗದಲ್ಲಿ 'ಭುವನಾದ್ಭುತಮಧ್ವಚೇಷ್ಟಿತ'ಗಳಿಗೆ ನಿದರ್ಶನವಾಗಿ ಈಶ್ವರದೇವ ನೆಂಬ ಅರಸನನ್ನು ಆಚಾರ್ಯರು ಭಂಗಗೊಳಿಸಿದ ವೃತ್ತಾಂತ ಬರುತ್ತದೆ. ಈ ರಾಜನು ದಾರಿಗರಿಂದ ಭೂಮಿಯನ್ನು ಅಗೆಸುತ್ತಿದ್ದಾಗ ಆಚಾರ್ಯರು ಅಲ್ಲಿಗೆ ಬರಲು ಅವರನ್ನೂ ಈ ಕೆಲಸ ಮಾಡುವಂತೆ ಅವನು ನಿಯೋಜಿಸುತ್ತಾನೆ. ಆದರೆ ಆಚಾರ್ಯರು ತಮಗೆ ಆ ಕೆಲಸ ಬರದೆಂದೂ, ತಾನು ತೋರಿಸಿಕೊಟ್ಟರೆ ತಾವೂ ಮಾಡುವೆವೆಂದೂ ಹೇಳುತ್ತಾರೆ. ಅಗೆಯುವ ಬಗೆಯನ್ನು ತೋರಿಸಲು ರಾಜನು ತಾನೇ ಅಗೆಯಲಾರಂಭಿಸುತ್ತಾನೆ ; ಆದರೆ ಆಚಾರ್ಯರ ಮಹಿಮೆಯಿಂದ ಅಗೆಯಲಾರಂಭಿಸಿದವನು ನಿಲ್ಲಿಸಲೇ ಇಲ್ಲವಂತೆ (೪-೫). ಈ ಪ್ರಸಂಗವು ನಡೆದದ್ದು ಎಲ್ಲಿ, ಈ ಅರಸನು ಯಾರು ಎಂಬ ವಿವರಗಳು '**ಮಧ್ವವಿಜಯ**'ದಲ್ಲಿ ಬರುವುದಿಲ್ಲ. ಗ್ರಂಥಕಾರರು 'ಕ್ವಜಿದೀಶ್ವರದೇವ ಭೂಪ'ನೆಂದಷ್ಟೇ ಹೇಳಿದ್ದಾರೆ. ಅದೇ ಅಧ್ಯಾಯದಲ್ಲೇ ಅದೇ ಸಂದರ್ಭದಲ್ಲೇ ಮತ್ತೊಂದು ವೃತ್ತಾಂತವೂ ನಿರೂಪಿತವಾಗಿದೆ. ಒಂದು ಬಾರಿ ಗಂಗಾನದಿಯನ್ನು ಶಿಷ್ಯರೊಂದಿಗೆ ದಾಟುವಾಗ ತುರುಕ (ತ್ವರಕ) ರಾಜಪುರುಷರಿಂದ ತಡೆಯಲ್ಪಟ್ಟು ಅವರ ಅಧಿಪತಿಯಾದ 'ನೃಪ' ನೊಂದಿಗೆ ಅವರ ಭಾಷೆಯಲ್ಲಿಯೇ (ತದ್ಭಾಷಯಾ), ಎಂದರೆ ತುರುಕ ಭಾಷೆಯಲ್ಲಿಯೇ, ಮಾತನಾಡಿದ ಸಂದರ್ಭ ಇದು. ಇಲ್ಲಿಯೂ ಈ ತುರುಕರಾಜನು ಯಾರು, ಆ ಪರದೇಶ ಯಾವುದು ಎಂಬ ವಿವರಗಳಿಲ್ಲ (೮-೧೦). 'ವಿಷ್ಣುಪದ್ಯಾಃತಟಂ' ಎಂದು ಮಾತ್ರ ನಿರ್ದೇಶಿಸಿದ್ದಾರೆ. ಈ ಎರಡೂ ಪ್ರಸಂಗಗಳೂ ಅವರ ಸಂಚಾರ ಕ್ರಮದಲ್ಲಿ ನಿರೂಪಿತವಾಗಿಲ್ಲ; ಅವರ ಮಹಿಮೆಗೆ ನಿದರ್ಶನಗಳಾಗಿ ಇಲ್ಲಿ ಸೇರಿವೆ. ಅದು ಕಾರಣ ಸ್ಥಳ ನಿರ್ದೇಶನ ಸುಲಭವಲ್ಲ.

ನಾರಾಯಣ ಪಂಡಿತಾಚಾರ್ಯರು ಹೇಳುವ ಈಶ್ವರದೇವನೆಂಬ ರಾಜನು ದೇವಗಿರಿಯ ಮಹಾದೇವ (೧೨೬೦-೧೨೭೧)ನೆಂದು ಫ್ಲೀಟ್, ಪದ್ಮನಾಭಾಚಾರ್ಯರು, ಕೃಷ್ಣಸ್ವಾಮಿ ಅಯ್ಯರ್, ಕೃಷ್ಣಶಾಸ್ತ್ರಿ ಸಾಲೆತೂರ್ರು ಮುಂತಾದ ಪಂಡಿತರ ಊಹೆ. ಕೃಷ್ಣಾನದಿಯ ದಂಡೆಯ ಮೇಲೆ ದೇವಗಿರಿಯೇ ರಾಜಧಾನಿಯಾಗಿ ಉಳ್ಳ ವಿಶಾಲವಾದ ಪ್ರದೇಶ ವೊಂದಕ್ಕೆ ಯಾದವವಂಶದ ಅರಸರು ಬಹುಕಾಲ ಅಧಿಪತಿಗಳಾಗಿದ್ದರು. 'ಎಸೆವಾ ಕುಂತಳದೇಶಮಂ ನಿಜ ಭುಜಾವಷ್ಟಂಭದಿಂದಾಳ್ದ' ಭಿಲ್ಲಮ (ಸುಮರು ೧೧೮೫)ನೇ ಈ ಸೆವುಣಯಾದವ ಅರಸೊತ್ತಿಗೆಯ ಮೂಲಪುರುಷನೆನ್ನಬಹುದು. ಅವನ ಮಗ ಸಿಂಘಣ (೧೨೧೦-೧೨೪೭), ಅವನ ಮಗ ಕೃಷ್ಣಕಂಧಾರ (೧೨೪೭-೧೨೬೦) ಇಬ್ಬರ ನಂತರ ಈ ಮಹಾದೇವನು ಪಟ್ಟಕ್ಕೆ ಬಂದನು. ಮಹಾದೇವನು ಕೃಷ್ಣಕಂಧಾರನ ತಮ್ಮನೆಂದು ಹೇಳುತ್ತಾರೆ. ಇವನು "ತೈಲಂಗಕ್ಷತಿಪಾಲತೂಲನಿಚಯಕ್ಕೆ ಝುಂಝಾನಿಲ"ನಂತೆ, "ಗೂರ್ಜರಗರ್ವಪರ್ವತಕ್ಕೆ ವಜ್ರ"ನಂತೆ, ಕರ್ಣಾಟಲಾಟರಾಜರನ್ನು ವಿಡಂಬಿಸಿದನಂತೆ. ಇಷ್ಟು ಮಹಿಮಾನ್ವಿತ ನಾದ ಇವನು ಕಾಕತೀಯರನ್ನು ಗೆದ್ದು ಹಿಮ್ಮೆಟ್ಟಿಸಿದ ವೀರ. ಇವನ ಆಸ್ಥಾನದಲ್ಲಿ ಇದ್ದ ಹೇಮಾದ್ರಿಯ ಹೆಸರು ಧರ್ಮಶಾಸ್ತ್ರದಲ್ಲಿಯೂ ರಾಜತಂತ್ರದಲ್ಲಿಯೂ ಪ್ರಸಿದ್ಧವಾಗಿದೆ. ಇವನ ಕಾಲದಲ್ಲಿ ಮಹಾರಾಷ್ಟ್ರದಲ್ಲೂ ಕನ್ನಡನಾಡಿನಲ್ಲೂ ನಾಥಸಂಪ್ರದಾಯ, ಮಹಾನುಭಾವಪಂಥ ಮತ್ತು ಪಾಂಡುರಂಗವಿಟ್ಠಲ ಭಕ್ತಿಪಂಥಗಳು ಹರಡಿದುವು.* ಇವನ ಕಾಲದಲ್ಲೆ ಕಾಕತೀಯರ ರಾಣಿ ರುದ್ರಮದೇವಿಯೂ (೧೨೬೦-೧೨೯೫) ಹೊಯ್ಸಳರಾಜನಾಗಿದ್ದ

* ನೋಡಿ : ಡಿ. ಕೆ. ಭೀಮಸೇನರಾವ್, 'ಹದಿಮೂರನೆಯ ಶತಮಾನದ ಕರ್ಣಾಟಕಾಂಧ್ರ ಮಹಾರಾಷ್ಟ್ರ ಸಾಹಿತ್ಯಾವಲೋಕನ', ಉಸ್ಮಾನಿಯ ವಿಶ್ವವಿದ್ಯಾನಿಲಯದ ಪ್ರಕಾಶನ, 1942.

ಮುಮ್ಮಡಿ ನರಸಿಂಹನೂ (೧೨೬೪-೧೨೯೨) ಇದ್ದರು. ಇವನ ನಂತರ ಪಟ್ಟಕ್ಕೆ ಬಂದ ರಾಮದೇವನ ಕಾಲದಲ್ಲಿಯೇ ಅಲ್ಲಾವುದ್ದಿನ್ ಖಿಲ್ಜಿಯು ನರ್ಮದಾನದಿಯನ್ನು ದಾಟಿ ಬಂದು ದೇವಗಿರಿಯನ್ನು ದಾಳಿ ಮಾಡಿದುದು.

ಈ ಮಹಾದೇವನು ಮಧ್ವಾಚಾರ್ಯರ ಸಮಸಾಮಯಿಕನೆಂದು ಒಪ್ಪಿದರೂ ಆಚಾರ್ಯರ ಪ್ರಭಾವ ಈ ಅರಸನ ಮೇಲಾಗಲೀ ಆ ವಂಶದ ಮೇಲಾಗಲೀ ಬಿದ್ದಿತೆನ್ನಲು ಆಧಾರವಿಲ್ಲ. ಆ ಕಾಲದಲ್ಲಿ ಸಿದ್ಧವಾದ ಯಾವ ಶಾಸನದಲ್ಲೂ ಮಧ್ವಾಚಾರ್ಯರು ಧ್ವನಿತರಾಗಿಲ್ಲ. ಮೇಲಾಗಿ, 'ಮಧ್ವವಿಜಯ'ದಲ್ಲಿ ಈಶ್ವರದೇವನೆಂಬ ಹೆಸರಿದೆಯೇ ವಿನಾ ಮಹಾದೇವನೆಂದಿಲ್ಲ. ಮಹಾದೇವ, ಈಶ್ವರದೇವ ಎರಡೂ ಪರ್ಯಾಯ ಪದಗಳು ನಿಜ ; ಆದರೆ ವ್ಯಕ್ತಿನಾಮವನ್ನು ಹಾಗೆಯೇ ವೃತ್ತದಲ್ಲಿ ಅಡಕ ಮಾಡಲು ನಾರಾಯಣ ಪಂಡಿತಾಚಾರ್ಯರಿಗೆ ಶಕ್ಯ ವಿರಲಿಲ್ಲವೆ ? ಮಹಾದೇವನ ಕಾಲದ ಶಾಸನಗಳಲ್ಲಿ 'ಉಗ್ರಸಾರ್ವಭೌಮ', 'ಪ್ರತಿಜ್ಞಾಪರಶುರಾಮ', 'ಭುಜಬಲಭೀಮ' ಮುಂತಾದ ಹಲವಾರು ಹೆಸರುಗಳು ಬರುತ್ತವೆ ; ಒಂದರಲ್ಲೂ ಈಶ್ವರದೇವನೆಂಬ ಹೆಸರಿಲ್ಲ. ಇದು ಮಧ್ವವಿಜ್ಯದ 'ಈಶ್ವರದೇವ'ನೇ ದೇವಗಿರಿಯ ಮಹಾದೇವ ನೆಂಬ ನಿರ್ದೇಶನದ ವಿಚಾರವಾಗಿ ಸಂದೇಹಕ್ಕೆ ಎಡೆಕೊಡುತ್ತದೆ.

ಇನ್ನು ನಾರಾಯಣ ಪಂಡಿತಾಚಾರ್ಯರು ಮಾಡಿರುವ ತುರುಕರಾಜನ ಪ್ರಸ್ತಾಪ. ಸಿ. ಎಂ. ಪದ್ಮನಾಭಾಚಾರ್ಯರು ಈ ತುರುಕದೊರೆಯು ಸುಲ್ತಾನ್ ಜಲಾಲುದ್ದೀನ್ ಇರಬಹುದೆಂದು ಊಹಿಸಿದರು. ದಿಳ್ಳಿ ಅರಸೊತ್ತಿಗೆಯನ್ನು ಈ ದೊರೆಯು ೧೨೮೮ರಲ್ಲಿ ಏರಿದಂತೆ ತಿಳಿದು ಬರುತ್ತದೆ. ಬಿ. ವೆಂಕೋಬರಾಯರೂ ಮತ್ತಿತರ ಪಂಡಿತರೂ ಈ ತುರುಕದೊರೆಯು ಗಿಯಾಸುದ್ದೀನ್ ಬಲ್ಬನ್

(೧೨೬೬ರ ಸುಮಾರು) ಅಥವಾ ಮುಯಿಸುದ್-ದಿನ್-ಕೈಕೋಬಾದ್ (೧೨೮೬ರ ಸುಮಾರು) ಇರಬಹುದೆಂದು ತರ್ಕಿಸಿದ್ದಾರೆ. ಗಿಯಾಸುದ್ದೀನ್ ಬಲ್ಬನ್ ಎಂದು ಸಾಧಾರಣವಾಗಿ ಈಗ ಸ್ವೀಕೃತವಾಗಿರುವ ನಿರ್ದೇಶನ. ಈತನು ದಿಲ್ಲೀ ಸಾಮ್ರಾಟನಾಗಿದ್ದಾಗ ಗಂಗಾ-ಯಮುನಾ ನದಿಗಳ ನಡುವೆ ದಂಗೆಕಾರರ ಹಾವಳಿ ಹೆಚ್ಚಾಗಲು ಆ ಪ್ರಾಂತ್ಯಕ್ಕೆ ತನ್ನ ಸೇನೆಯೊಂದನ್ನು ಕಳುಹಿಸಿದ್ದನು. ಈ ಗೊಂದಲದ ಪರಿಸ್ಥಿತಿಯೇ 'ಮಧ್ವವಿಜಯ'ದ ಪ್ರಸ್ತಾಪದ ಹಿನ್ನೆಲೆಯೆಂದು ಗ್ರಹಿಸಬಹುದು. ದಂಗೆಗಳು, ತುರುಕರ ಸೇನಾಪ್ರಭುತ್ವ, ಈ ಪ್ರಕ್ಷುಬ್ಧ ಸಂದರ್ಭದಲ್ಲಿ ಆಚಾರ್ಯರು ಗಂಗಾ ನದಿಯನ್ನು ದಾಟಿ ಉತ್ತರ ದೇಶಕ್ಕೆ ಹೋದರೆಂದರೆ ಆ ವರ್ಷ ೧೨೬೬ ಎಂದು ವೆಂಕೋಬರಾಯರು ತೀರ್ಮಾನಿಸಿದ್ದಾರೆ. ಬಂಗಾಳದ ಅಧಿಪತಿಯಾಗಿದ್ದ ಮಲಿಕ್ ಇಜ್ಜುದ್ದೀನ್ ತುಘ್ರಿಲ್-ಇ-ತುಘಾನ್‌ಖಾನನು ನಿರಂಕುಶನಾಗಿ ವರ್ತಿಸಲು ಬಲ್ಬನ್ ಸಾಮ್ರಾಟನು ಅವನ ಮೇಲೆ ದಂಡೆತ್ತಿಕೊಂಡು ಹೋದ ಉಲ್ಲೇಖವಿದೆ. ಆಚಾರ್ಯರು ತುರುಕ ದೊರೆಯನ್ನು ಸಂಧಿಸಿದ್ದು ಈ ಸಂದರ್ಭದಲ್ಲಿ ಇದ್ದರೂ ಇರಬಹುದು. ಬಂಗಾಳದ ಲಕ್ಷ್ಮಣಾವತಿ (ಲಕ್ನೋತಿ)ಯಲ್ಲಿ ಆಗ ಮುಸಲ್ಮಾನರ ಪ್ರಭುತ್ವವೇ ಇದ್ದಿತು. ಅಂತೂ ಈ ದೊರೆಯ ನಿರ್ದೇಶನವೂ ಸ್ಪಷ್ಟವಾಗಿಲ್ಲ.

ಈ ಇಬ್ಬರು ಅರಸರ ಪ್ರಸ್ತಾಪವಲ್ಲದೆ 'ಮಧ್ವವಿಜಯ'ದಲ್ಲಿ ಜಯಸಿಂಹನೆಂಬ ರಾಜನ ಉಲ್ಲೇಖವೂ ಬರುತ್ತದೆ. ಪದ್ಮನಾಭಾಚಾರ್ಯರು ತಿರುವಾಂಕೂರಿನ ರಾಜ ರವಿವರ್ಮ-ಕುಲಶೇಖರ ಪೆರುಮಾಳ್ ಎಂಬುವನೇ ಈ ಜಯಸಿಂಹನೆಂದು ವಾದಿಸಿದ್ದರು. ೧೨೬೬ರಲ್ಲಿ ಹುಟ್ಟಿ ಕ್ವಿಲಾನ್ ನಗರದಲ್ಲಿ ಆಳುತ್ತಿದ್ದ ಈ ದೊರೆಗೆ ಜಯಸಿಂಹನೆಂಬ ಹೆಸರೂ ಇದ್ದಿತು. ಆದರೆ 'ಮಧ್ವವಿಜಯ'ದ ಜಯಸಿಂಹನು ಕುಂಬಳೆರಾಜನೆಂದು

ಈಗ ನಿರ್ದಿಷ್ಟವಾಗಿ ತಿಳಿದು ಬಂದಿದೆ. ತುಳುನಾಡಿನ ಈ ಅರಸನ ವಿಚಾರ ಮುಂದೆ ಬರುತ್ತದೆ.

ಆದರೆ ಈ ಅರಸರ ವಿಚಾರವಾಗಿ ಹೆಚ್ಚು ಆಲೋಚನೆ ಮಾಡುವ ಅಗತ್ಯವಿಲ್ಲ ; ಮಧ್ವಾಚಾರ್ಯರ ಕಾಲ ನಿರ್ಣಯಕ್ಕೆ ಇದು ಸಹಾಯವಾಗುವಂತಿಲ್ಲ. 'ಮಧ್ವವಿಜಯ'ದಲ್ಲಿ ಜಯಸಿಂಹನೊಬ್ಬನ ವಿನಾ ಉಳಿದ ಅರಸರ ಪ್ರಸ್ತಾಪ ತುಂಬ ಪ್ರಾಸಂಗಿಕವಾಗಿ ಬರುತ್ತದೆ. ಆ ಅರಸರನ್ನು ನಾರಾಯಣ ಪಂಡಿತಾಚಾರ್ಯರೇ ಪ್ರಮುಖರೆಂದಾಗಲೀ ಉಲ್ಲೇಖಾರ್ಹರೆಂದಾಗಲೀ ಪರಿಗಣಿಸಿದಂತೆ ತೋರುವುದಿಲ್ಲ; ಅಥವಾ ಆ ಅರಸರ ವಿಚಾರವಾಗಿ ವಿವರಗಳು ಅವರಿಗೆ ತಿಳಿದಿರಲಿಲ್ಲವೆಂದರೂ ಒಪ್ಪೀತು. ಕುಂಬಳೆ ಸೀಮೆಯ ಒಳಹಳ್ಳಿಯಾದ ಕಾವುಮಠದಲ್ಲಿರುತ್ತಿದ್ದ ನಾರಾಯಣ ಪಂಡಿತಾಚಾರ್ಯರಿಗೆ ತಮ್ಮ ತಂದೆಯ ಆಶ್ರಯದಾತನಾಗಿದ್ದ ಕುಂಬಳೆ ಅರಸನ ಪರಿಚಯವಿದ್ದಿತೆಂದು ಒಪ್ಪಬೇಕು. ಅವರ ತಂದೆಗೂ ಆಚಾರ್ಯರಿಗೂ ಕೂಡಲು ಎಂಬಲ್ಲಿ ವಾಕ್ಯಾರ್ಥ ನಡೆದಾಗ ಕುಂಬಳೆ ಅರಸ ಜಯಸಿಂಹನೇ ಅಧ್ಯಕ್ಷವಾಗಿದ್ದನೆಂದು ಪ್ರತೀತಿಯಿದೆ. ತ್ರಿವಿಕ್ರಮ-ಪಂಡಿತಾಚಾರ್ಯರಾಗಲೀ ನಾರಾಯಣ ಪಂಡಿತಾಚಾರ್ಯರಾಗಲೀ ದೇಶಾಟನೆ ಮಾಡಿದಂತೆ ತಿಳಿದು ಬರುವುದಿಲ್ಲ; ಆದ ಕಾರಣ, ಅವರಿಗೆ ಹೊರದೇಶದ ರಾಜರ ಪರಿಚಯ ಇಲ್ಲದಿರುವುದು ಸಹಜವೇ. 'ಮಧ್ವವಿಜಯ'ದಲ್ಲಿ ಈ ರಾಜರ ವಿಚಾರವಾಗಿ ಬರುವ ಉಲ್ಲೇಖಗಳೆಲ್ಲ ಅವರು ಕಿಂವದಂತಿಗಳಂತೆ ಕೇಳಿದ ವಿವರಗಳಿರಬೇಕು. ಅವುಗಳನ್ನು ಪ್ರಬಲವಾದ ಆಕರಗಳೆಂದು ಗ್ರಹಿಸುವುದು ತಪ್ಪಾದೀತು.

ಆಚಾರ್ಯರ ಕಾಲನಿರ್ಣಯಕ್ಕೆ ನೆರವಾಗುವ ಮತ್ತೊಂದು ವಿವರವೆಂದರೆ ಅವರು ಬದುಕಿದದಾಗ ಒದಗಿದ ಸೂರ್ಯಗ್ರಹಣದ ಉಲ್ಲೇಖ. ನಾರಾಯಣ ಪಂಡಿತಾಚಾರ್ಯರು ಮಧ್ವವಿಜಯದಲ್ಲಿ

ಆಚಾರ್ಯರು ಸೂರ್ಯಗ್ರಹಣದಲ್ಲಿ ಸಮುದ್ರಸ್ನಾನಕ್ಕೆ ಹೋದುದನ್ನು ಪ್ರಸ್ತಾಪಿಸಿದ್ದಾರೆ. (೧೬,೧೦) ಈ ಸಂದರ್ಭದಲ್ಲಿ ಕಣ್ವತೀರ್ಥದ ಪ್ರಸ್ತಾಪವೂ ಇರುವುದರಿಂದ ಆಗ ಆಚಾರ್ಯರು ಕಾಸರಗೋಡಿನ ಬಳಿ ಮಂಜೇಶ್ವರದಲ್ಲಿದ್ದರೆನ್ನಬಹುದು ; ಹರೆಯ ಹರಿದು ಇಳಿವಯಸ್ಸಿನಲ್ಲಿದ್ದ ರೆನ್ನಬಹುದು. ಈ ಸಮಯಕ್ಕೆ ಸರಿಯಾದ ಸೂರ್ಯಗ್ರಹಣ ಆದದ್ದು ಯಾವಾಗ ? ಜ್ಯೋತಿಃಶಾಸ್ತ್ರದ ಎಣಿಕೆಯಂತೆ ಕ್ರಿಸ್ತಾಬ್ದ ೧೨೯೩ರ ಜುಲೈ ಐದನೆಯ ತಾರೀಖು ಭಾನುವಾರದಂದು ಕಿಂಚಿನ್ನ್ಯೂನಪೂರ್ಣಗ್ರಹಣ ವಿದ್ದಿತು ; ೧೩೦೦ರ ಆಗಸ್ಟ್ ಹದಿನೈದರ ಸೋಮವಾರದಂದು ಪಾರ್ಶ್ವ ಗ್ರಹಣವಿದ್ದಿತು. ಈ ಎರಡರಲ್ಲಿ ನಾರಾಯಣ ಪಂಡಿತಾಚಾರ್ಯರು ಪ್ರಸ್ತಾಪಿಸಿರುವ ಸೂರ್ಯಗ್ರಹಣ ಯಾವುದೆಂಬುದು ಸ್ಪಷ್ಟವಾಗು ವುದಿಲ್ಲ. ಅಂತೂ ಅವರ ಜೀವಿತದ ಕೊನೆಯ ಘಟ್ಟದಲ್ಲಿ ಈ ಪ್ರಸಂಗ ಬಂದಿರುವುದರಿಂದ ಆಚಾರ್ಯರು ಆ ವೇಳೆಗೆ ಮುದುಕರಾಗಿದ್ದರೆಂದು ಒಪ್ಪಿದರೆ ೧೩೧೭ ಅವರ ನಿರ್ಯಾಣದಿನವೆಂದು ಹೇಳಲು ಅಡ್ಡಿಯಿಲ್ಲ.

* * *

ಪರಿಶಿಷ್ಟ - ೧

ಈ ಕೆಳಗೆ ಕಾಣಿಸಿರುವ ಪ್ರಾಚೀನ ಸಾರಸ್ವತ ಖಂಡವು ಉಡುಪಿ ಫಲಿಮಾರು ಮಠದ ವಶದಲ್ಲಿದೆ. ಇದನ್ನು ರಚಿಸಿದವರು ಫಲಿಮಾರು ಮಠದ ಮೂಲ ಪುರುಷರೂ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರೂ ಆದ ಹೃಷೀಕೇಶತೀರ್ಥರೆಂದೂ, ಈಗ ಆ ಮಠದಲ್ಲಿ ಉಪಲಬ್ಧವಿರುವ ಆ ಪ್ರತಿಯು ಅವರ ಕೈಬರಹದಲ್ಲಿಯೇ ಇದೆಯೆಂದೂ ಪ್ರತೀತಿ. ಈ ಖಂಡದ ಮೊದಲನೆಯ ಭಾಗಕ್ಕೆ 'ಸಂಪ್ರದಾಯ ಪದ್ಧತಿ'ಯೆಂದೂ ಎರಡನೆಯ ಭಾಗಕ್ಕೆ 'ಅಣುಮಧ್ವಚರಿತ'ವೆಂದೂ ಹೆಸರುಗಳಿರುವಂತೆ ತಿಳಿದುಬರುತ್ತದೆ.

ಸಂಪ್ರದಾಯ ಪದ್ಧತಿ

ಈಶೇಂದ್ರಾದಿಸುರಾಣಾಮೀಶಃ ಶ್ರೀ ರಮಣಪ್ರಿಯಃ।
ಯತ್ರ ಪ್ರಾತರಭೂದ್ವಾಯುಃ ಕ್ಷೇತ್ರಂ ತತ್ ಪಾಜಕಂ ಶುಭಂ ॥ ೧ ॥

ಜಡಸ್ಯ ಗಂಗಾದ್ಯಭಿಧಸ್ಯ ಕೇವಲಂ
ತೀರ್ಥಸ್ಯ ಮೂಲಂ ಹಿಮವನ್ನಗಾಧಿಪಃ
ಮತ್ ಸೌಖ್ಯತೀರ್ಥಸ್ಯ ಜಡೇತರಸ್ಯ ವೈ
ಮೂಲಂ ಪವಿತ್ರಂ ತದತೀವ ಪಾಜಕಂ ॥ ೨ ॥

ಯತ್ರತ್ಯತೀರ್ಥೇಷು ನಿಮಜ್ಜತಾಂ ನೃಣಾಂ
ಧರ್ಮಶ್ಚತುರ್ಭಿಶ್ಚರಣೈಃ ಸಹೈಧತೇ।
ಇತಿ ಪ್ರಬೋಧಾಯ ಚಕಾರ ಮಾಧವ–
ಶ್ಚತ್ವಾರಿ ತೀರ್ಥಾನಿ ಭೃಗೋಃ ಕುಲೋದ್ಭವಃ ॥ ೩ ॥

ಪರಶ್ವಾದೀನ್ಯಾಯುಧಾನಿ ಯಥಾ ಪಾಪಹರಾಣಿ ವೈ ।
ತೀರ್ಥಾನಿ ಚ ತಥೇತ್ವೇವಂ ಬೋಧಯಂತ್ಯಭಿಧಾ ಇಮಾಃ ॥ ೪ ॥

ಶ್ರೀಮನ್ಮಧ್ಯಗೃಹಾಖ್ಯವಿಪ್ರಗೃಹಜಃ ಶ್ರೀವಾಸುದೇವಾಭಿದಃ ।
ಪ್ರಾಣಃ ಪ್ರಾಪ್ಯ ವಟುತ್ವಮಾತ್ಮಜನನೀವಾಚಾ ಯದಾ ವಾರಿತಃ ।
ಸ್ನಾನಾರ್ಥಂ ತ್ವಮೃತೇ ಸಹಾಯಮಧುನಾ ನೋ ಯಾಹಿ ತಾತೇತ್ಯಸೌ ।
ತತ್ಕಾಲೇ ವ್ಯತನೋದ್ಗೃಹಾಂತಿಕಗತಂ ಸ್ವಾಖ್ಯಾಯುತಂ ಸತ್ತ್ವರಃ ॥ ೫ ॥

ಚತ್ವಾರಿ ತೀರ್ಥಾನಿ ವಿಧಾಯ ಪಾಜಕೇ
ಪ್ರಾಬೋಧಿ ತನ್ಮೋಕ್ಷಚತುಷ್ಟಯಪ್ರದಂ
ರಾಮೇಣ ನೋ ಸಾರ್ಷ್ಟಿದ ಮಿತ್ಯಸೌ ಮರು–
ತ್ತೀರ್ಥಂ ಚಕಾರೇತಿ ಮಮಾವಭಾಸತೇ ॥ ೬ ॥

'ಶ್ರೀಮದ್ವೈಷ್ಣವಮಾತನೋಮಿ ಸುಮತಂ ತಾತೇ'ತಿ ಪುತ್ರೋದಿತೇ ।
ವಿಪ್ರಸ್ಸಾಹ 'ಯದಾ ತ್ವದೀಯಕರಗಾ ಯಷ್ಟೀ ರುಹೇಚ್ಛೇದಿದಂ ।
ಸ್ಯಾದಿಷ್ಟಂ ಖಲಪೂರ್ಣಕಾಲ' ಇತಿ ತತ್ಕಾಲೇ ವಟುರ್ನೀರಸಾಂ ।
ಯಷ್ಟಿಂ ನ್ಯಸ್ಯ ಮೃದಾಂ ಚ ಯೋಽಖಿಲಜಗತ್ಪ್ರಾಣಪ್ರದೋಽಜೀವಯತ್ ॥ ೭ ॥

ಸತ್ವರಂ ವರ್ಧಮಾನಃ ಸ ವೃಕ್ಷಃ ಪನ್ನಗರೂಪಿಣಾ ।
ದಷ್ಟೋ ಮಣಿಮತಾ ರೋಷಾನ್ನ ಶುಶೋಷ ಮರುದ್ಬಲಾತ್ ॥ ೮ ॥

ಯದಾ ವಿಮಾನಾಖ್ಯಗಿರಿಸ್ಥಿತಾಂ ನಿಜಾಂ
ದಿದೃಕ್ಷುರಂಬಾಮಗಮನ್ಮಹಾಮತಿಃ ।
ವಟುಸ್ತದಾ ವರ್ತ್ಮನಿ ಪನ್ನಗಾಕೃತಿರ್ದದಂಶ
ತತ್ಪಾದಮಸೌ ಜಿಘಾಂಸಯಾ ॥ ೯ ॥

ಸ್ವಾಂಗುಷ್ಠಾಂಗುಲಿತುಂಡೇನ ವಾಸುದೇವಾಖ್ಯಪಕ್ಷಿರಾಟ್ ।
ಮಾರಯಾಮಾಸ ತಂ ಸರ್ಪಂ ತಲ್ಲಕ್ಷ್ಮಾದ್ಯಾಪಿ ದೃಶ್ಯತೇ ॥ ೧೦ ॥

ಗತ್ವಾಽಥ ದುರ್ಗಾಂ ನಿಜಭುಕ್ತಿಮುಕ್ತಿದಾಂ
ನನಾಮ ಭಕ್ತ್ಯಾ ಮರುತಾಂ ಪತಿಸ್ತದಾ।
ಮಾತಾ ಽಜುಹಾವಾಸಕೃದುತ್ತಮಂಜಸಾ
ಗಿರೇಸ್ತದೋಲ್ಲಂಘ್ಯ ಗೃಹಾಂತಿಕೇಽಭವತ್ ॥ ೧೧ ॥

ಅಣ್ವೋಶ್ಚರಣಯೋರಂಕಯುಗ್ಮಮಶ್ಮನ್ಯಭೂತ್ತದಾ।
ಪಾಪಾಚಲೇಂದ್ರಕುಲಿಶಮಿತ್ಯದ್ಯಾಪಿ ಗೃಹಾಂತಿಕೇ ॥ ೧೨ ॥

ಗೃಹೋತ್ತಮಂ ಪ್ರಾಪ್ಯ ಹರೇರ್ನಿವೇದಿತಂ
ಶೇಷಾಸನಸ್ಯಾದದಯಂ ದ್ವಿಜಾನ್ವಿತಃ।
ಇತ್ಯಾದ್ಯಚಿಂತ್ಯೋರು ಗುಣಾನ್ ಪ್ರದರ್ಶಯ –
ನ್ಮುದಾನ್ಮುದಂ ಸಜ್ಜನವೃಂದಚೇತಸಾಂ ॥ ೧೩ ॥

ಪಾರಿವ್ರಾಜ್ಯಂ ತತಃ ಪ್ರಾಪ್ಯ ಕೃತ್ವಾ ಸಚ್ಛಾಸ್ತ್ರಸಂಚಯಂ।
ರೂಪ್ಯೇ ಕೃಷ್ಣಾಕೃತಿಂ ವಾಯುಃ ಸಂಸ್ಥಾಪ್ಯಾದಾತ್ಸತಾಂ ಮುದಂ ॥ ೧೪॥

ಮಧ್ವಾಹ್ವಯೋಽಯಂ ಮರುದೀಶ್ವರೋಽದದಾ –
ನ್ಮುದಾ ಹೃಷಿಕೇಶನೃಸಿಂಹತೀರ್ಥಯೋಃ।
ಸೀತಾನುಜಾಭ್ಯಾಂ ಸಹಿತಂ ರಘೂತ್ತಮಂ
ಚತುರ್ಭುಜಂ ಕಾಲಿಯ ಮರ್ದನಂ ಹರಿಂ ॥ ೧೫ ॥

ಜನಾರ್ದನೋಪೇಂದ್ರಸುಯೋಗಿನೋರದಾ –
ತ್ಕೃಷ್ಣಂ ದ್ವಿಹಸ್ತಂ ಭುಜಗಸ್ಯ ಮರ್ದನಂ।
ಶ್ರೀ ವಿಠ್ಠಲಂ ವಾಮನಯೋಗಿನೋಽಪಿ ತಂ
ಶ್ರೀ ವಿಷ್ಣುತೀರ್ಥಸ್ಯ ಚ ಸೂಕರಾತ್ಮಕಂ ॥ ೧೬ ॥

ಶ್ರೀರಾಮತೀರ್ಥಸ್ಯ ನೃಸಿಂಹರೂಪಿಣಂ
ದದೌ ತಥಾಧೋಕ್ಷಜಯೋಗಿನಃ ಪುನಃ।

ಶ್ರೀ ವಿಟ್ಠಲಂ ಶ್ರೀ ರಘುವಂಶಶೇಖರಂ
ಶ್ರೀಪದ್ಮನಾಭಾಹ್ವಯಯೋಗಿಮೌಳಯೆ ॥ ೧೭ ॥

ಯಃ ಸಾಕ್ಷಾದನುಜಃ ಶಮಾದಿಸುಗುಣಃ ಶ್ರೀ ವಿಷ್ಣುತೀರ್ಥಾಹ್ವಯಃ ।
ಯಃ ಕರ್ಣಾಟಕಪೂರ್ವಸಜ್ಜನಗುರುಃ ಶ್ರೀ ಪದ್ಮನಾಭಾಹ್ವಯಃ ।
ತಾಭ್ಯಾಮೇಷ ದದೌ ಗುರುಃ ಸದಯಿತೋ ವಿಷ್ಣುಸ್ಥಿತೋ ಯಾಸು ತಾಃ ।
ಮೂರ್ತಿಃ ಶುದ್ಧಶಿಲಾತ್ಮಿಕಾಃ ಸ್ಥಲಯುಗೇ ತಸ್ಯಾನುಜೋಽಸ್ಥಾಪಯತ್ ॥ ೧೮ ॥

ತತೋ ದಯಾವಾರಿನಿಧಿಗ್ರಾಮೇ ಸೇತುತಿಲಾಹ್ವಯೇ ।
ಸ್ವಶಾಸ್ತ್ರಗ್ರಂಥಮಕರೋದ್ಭೂಗತಂ ಪೂರ್ಣಶೇಮುಷಿಃ ॥ ೧೯ ॥

ತೇಷಾಂ ಮಂತ್ರೋಪದೇಶ-ವ್ರತ-ನಿಯಮ-ಸುರಾರ್ಚಾದಿಕೇ ಸಂಪ್ರದಾಯಂ
ಯುಗ್ಮೇ ಯುಗ್ಮೇ ಪ್ರಭಿನ್ನಂ ಕುರುತ ಇತಿ ಹೃಷೀಕೇಶತೀರ್ಥಾದಿಕೇಷು ।
ಅಜ್ಞಾಪ್ಯಾರಾದಟಂತಂ ದಿಗಂತಂ ವ್ರತನಿಯಮವಿಧ ಪದ್ಮನಾಭಂ ಯತೀಂದ್ರಂ ।
ದೃಷ್ಟ್ವಾಚಾಜ್ಞಾಪ್ಯ ಭಿನ್ನಂ ವಿಧಿಮಮಿತಮತಿಃ ಕ್ಷೇತ್ರತೋ ನಿರ್ಗತೋಽಭೂತ್ ॥ ೨೦

ತಿರೋಹಿತೇ ಸನ್ಮತೇಽಸ್ಮಿನ್ ವಿಷ್ಣುತೀರ್ಥೋ ಗುಹಾಚಲಾತ್ ।
ಆಗತ್ಯೋದ್ಧೃತ್ಯ ತತ್ರತ್ಯಗ್ರಂಥಾನ್ ಸ ಪ್ರಥಯಿಷ್ಯತಿ ॥ ೨೧ ॥

ಯಸ್ಮಾತ್ ಸರ್ವಹೃದಿಸ್ಥಸಂಶಯಚಯಂ ಜ್ಞಾತ್ವಾ ಯತೀಶೋ ಮರುತ್ ।
ಸದ್ಧರ್ಮಾಂಶ್ಚ ತಿಲಾಂಶತೋಽಪ್ಯುಪದಿಶಂಶ್ಚಾಶೇತ್ಯಾಜ್ಞಾನಿಬಂಧ ವ್ಯಧಾತ್
ತಸ್ಮಾತ್ ಸೇತು ತಿಲೇತಿ ಲೋಕಗದಿತಂ ಕ್ಷೇತ್ರಂ ಸುತೀರ್ಥಾತ್ಮಕಂ ।
ಸ್ಕಂದಾದ್ರೇರ್ಬಿಲತೋಽವತೀರ್ಣ-ಯತಿನಾ ಸಂಶೋಧ್ಯತೇ ಕಾಲತಃ ॥ ೨೨ ॥

ತೀರ್ಥಾನಾಂ ಪಂಚಕೇ ಸ್ನಾತ್ವಾ ಕೃತ್ವಾ ದುರ್ಗಾವಲೋಕನಂ ।
ಉಪಾಸ್ಯ ಚರಣೌ ವಾಯೋಃ ಕೃತಕೃತ್ಯೋ ಭವೇನ್ನರಃ ॥ ೨೩ ॥

ಭಕ್ತಿತಸ್ತ್ರಿತಯಂ ಕೃತ್ವಾ ಪ್ರಯಾಗಾದಿಸ್ಥಲತ್ರಯೇ ।
ಸತ್ಕರ್ಮಣಾಂ ಫಲಂ ಯತ್ ಸ್ಯಾತ್ ತತ್ಪ್ರಾಪ್ನೋತಿ ನರೋ ಧ್ರುವಂ ॥ ೨೪ ॥

ಇತಿ ನಿಗದಿತಪೂರ್ಣಪ್ರಜ್ಞವಾಗಂಬುಧಾರಾಂ
ಹೃದಯಸರಸಿ ಧೃತಾ ಸದ್ಧೃಷೀಕೇಶಮೇಧಃ ।
ಭುವಿ ಸುಜನಸುಸಸ್ಯಾ ಸಂಪ್ರವೃದ್ಧ್ಯೈವವರ್ಷ
ಮುಮುದರಮೃತಸಿಕ್ತಾ ಜ್ಞಾನಿನೋ ಗ್ಲಾನಿಮುಕ್ತಾಃ ॥ ೨೫ ॥

ಶ್ರೀಮದಾನಂದತೀರ್ಥೀಯ ಸಂಪ್ರದಾಯಸ್ಯ ಪದ್ಧತಿಂ ।
ಶ್ರುತ್ವಾಚರಂತಿ ಯೇ ತೇಷಾಂ ಭಾರತೀಶೋ ಭವೇತ್ಪ್ರಿಯಃ ॥ ೨೬ ॥

ಅಣುಮಧ್ವಚರಿತ

ದ್ವಾಪರೇ ಭೀಮಸೇನೇನ ಹತೇಷು ಸುರಶತ್ರುಷು ।
ಮಣಿಮಾನ್ ಅವನೌ ಜಾತೋ ಯತಿರೂಪಃ ಕಲೌಯುಗೇ ॥ ೧ ॥

ಮಾಯಾಮತಂ ವಿನಿರ್ಮಾಯ ತತಃ ಸರ್ವಾನ್ ಅಮೋಹಯತ್ ।
ತದಾಽಽಜ್ಞಪ್ತೋ ಭಗವತಾ ವಾಯುಃ ಸಂಪ್ರಾರ್ಥಿತಃ ಸುರೈಃ ॥ ೨ ॥

ತ್ರಿಶತಾಬ್ದೋತ್ತರ ಚತುಸ್ಸಾಹ ಸ್ರಾಬ್ದೇಭ್ಯ ಉತ್ತರೇ ।
ಏಕೋನ ಚತ್ವಾರಿಂಶಾಬ್ದೇ ವಿಳಂಬಿ ಪರಿವತ್ಸರೇ ॥ ೩ ॥

ಆಶ್ವೀಜ ಶುಕ್ಲದಶಮ್ಯಾ ದಿವಸೇ ಭುವಿ ಪಾವನೇ ।
ಪಾಜಕಾಖ್ಯೇ ಶುಚಿಕ್ಷೇತ್ರೇ ದುರ್ಗಾಯಾ ಚಾಭಿವೀಕ್ಷಿತೇ ॥ ೪ ॥

ಜಾತೋ ಮಧ್ಯಾಹ್ನವೇಳಾಯಾಂ ಬುಧವಾರೇ ಮರುತ್ತನುಃ ।
ಭೂಸುರೇಂದ್ರೋಪನೀತೋ ಯಸ್ರತ ಏಕಾದಶಾಬ್ದಕೇ ॥ ೫ ॥

ಸೌಮ್ಯೇ ಜಗ್ರಾಹ ಭಗವಾಂಸ್ತುರೀಯಾಶ್ರಮಮುತ್ತಮಂ ।
ತತಃ ಸಮಾಸೇ ದಶಕೇ ದಿವಸಾನಾಂ ಗತೇ ಪರಾನ್ ॥ ೬ ॥

ಮಧ್ವನಾಮಾ ಜಿಗಾಯಾಯಂ ವಾದಿನೋ ವಾದಕೌಶಲೀ ।
ಗೀತಾಭಾಷ್ಯಂ ವಿಧಾಯಾಸೌ ದೃಷ್ಟ್ವಾಚ ಬದರೀತಟೇ ॥ ೭ ॥

ವೇದವ್ಯಾಸಸ್ಯ ಚಾದೇಶಾತ್ ಸೂತ್ರಭಾಷ್ಯಮಥಾಕರೋತ್ ।
ಪುನರ್ಗತ್ವಾ ಚ ಬದರೀಂ ವ್ಯಾಸಮಾನಮ್ಯ ಪೂರ್ಣ ಧೀಃ ॥ ೮ ॥

ಭಾಷ್ಯಾದಿಸೇವಾಂ ವಿಜ್ಞಾಪ್ಯ ರೂಪ್ಯಪೀಠಮಿದಂ ಪುನಃ ।
ಆಗತ್ಯ ಭಾರತಸ್ಯಾರ್ಥತಾತ್ಪರ್ಯಂ ಕರ್ಮನಿರ್ಣಯಂ ॥ ೯ ॥

ಏಕೋನ ಶೀತವರ್ಷಾಣಿ ನೀತ್ವಾ ಮಾನುಷದೃಷ್ಟಿಗಃ ।
ಪಿಂಗಲಾಬ್ದೇ ಮಾಘಶುದ್ಧನವಮ್ಯಾಂ ಬದರೀಂ ಯಯೌ ॥ ೧೦ ॥

ಪರಿಶಿಷ್ಟ - ೨

'ಮಧ್ವವಿಜಯ'ವನ್ನು ರಚಿಸಿದ ನಾರಾಯಣ ಪಂಡಿತಾಚಾರ್ಯರು ತಾವು ಗ್ರಂಥವನ್ನು ಸಿದ್ಧಮಾಡಲು ಅನುಸರಿಸಿದ ವಿಧಾನವನ್ನು ತಮ್ಮ 'ಭಾವಪ್ರಕಾಶಿಕೆ'ಯಲ್ಲಿ ನಿರೂಪಿಸಿದ್ದಾರೆ. ತಾವು ಆಚಾರ್ಯರನ್ನು ಪ್ರತ್ಯಕ್ಷವಾಗಿ ಕಾಣಲಿಲ್ಲವೆಂದೂ ಕಂಡವರಿಂದ ವಿವರಗಳನ್ನು ಸಂಗ್ರಹಿಸಿದರೆಂದೂ ಈ ಕೆಳಗೆ ಕಾಣಿಸಿರುವ ಉದ್ಧೃತ ಶ್ಲೋಕಗಳಿಂದ ಸ್ಪಷ್ಟವಾಗುತ್ತದೆ.

ಸ್ವಸಾಮರ್ಥ್ಯಾಂಶಾಂಶಮೇವಾತ್ರ ಪ್ರಾದುಶ್ಚಕ್ರೇ ಜಗದ್ಗುರುಃ ।
ತತ್ರಾಪ್ಯಮರ್ತ್ಯದೃಶ್ಯಾಂಶೋ ದೇವೈರೇವಾನ್ವಭೂಯತ ॥ ೧ ॥

ಚರ್ಯಾ ದೃಷ್ಟಾ ನರೈಃ ಕಾಶ್ಚಿದ್ವಿಸ್ಮೃತಾ ದೇವಮಾಯಯಾ ।
ಅವಿಸ್ಮೃತಾಶ್ಚ ಪುರುಷೈನಾಸ್ಮಾಭಿಃ ಸಕಲಾಃ ಶ್ರುತಾಃ ॥ ೨ ॥

ಶ್ರುತಾಶ್ಚ ಕಾಶ್ಚಿನ್ನೈವೋಕ್ತಾ ದೇವಗುಹ್ಯತ್ವನಿಶ್ಚಯಾತ್ ।
ಅನ್ಯಾಸ್ತಥೈವ ನ ಪ್ರೋಕ್ತಾ ಗ್ರಂಥಬಾಹುಳ್ಯಭೀತಿತಃ ॥ ೩ ॥

ಉಕ್ತಾಶ್ಚ ವಿಸ್ಮೃತಾ ನೈವ ತಸ್ಮಾದೇವಾತ್ರಕಾರಣಾತ್ ।
ಪ್ರಾಯೇಣ ನೈಕಮಾತ್ರೋಕ್ತಾಃ ಕಥಿತಾ ಇಹ ಸರ್ವಶಃ ॥ ೪ ॥

ಮಯಾ ದೃಷ್ಟ್ವಾಧ್ರುವಮಿತಿ ಪ್ರೋಕ್ತಾಃ ಪ್ರಾಯೇಣ ಪೂರುಷೈಃ।
ದ್ವಯೋರ್ವರ್ಕ್ತ್ರೋರ್ವಿರೋಧೇऽತ್ರ ಸ್ವೀಕೃತಾ ಪ್ರಬಲಸ್ಯ ಗೀಃ॥ ೫ ॥

ತುಲ್ಯಂ ತು ಸೂಕ್ಷ್ಮಂ ದೃಷ್ಟ್ವ್ಯಾದೌ ತು
ದೈವೇ ನೈವ ಪರೀಕ್ಷ್ಯತೇ।
ಕಾವ್ಯಶ್ರಿಯೈ ನಾ ಗುರುಕೀರ್ತಯೇ ವಾ
ಪ್ರೋಕ್ತಂ ಸ್ವಯೈವಾಪಿ ಮನೀಷಯೇತಿ ॥ ೬ ॥

ತಸ್ಮಾನ್ನಶಂಕ್ಯೇತ ಮಹಾಜನೇಸ್ಮಿನ್।
ಪುಂಸಾ ಕುಶಾಗ್ರೀಯಧಿಯಾಪ್ಯವಶ್ಯಂ॥ ೭ ॥

ಮಂದಪ್ರಬೋಧಜನತೋ ಪ್ರಕೃತಿಂ ವಿಧಿತ್ಸು—
ರ್ಮಧ್ವಪ್ರಸಂಗ ಪರಮೋತ್ಸವ ಲಂಪಟೋऽಸೌ।
ಕೃತ್ವಾಪಿ ಮಧ್ವವಿಜಯಂ ವ್ಯಧಿತಾಸ್ಯ ಕಿಂಚಿ—
ದ್ಭಾವಪ್ರಕಾಶನಮಿದಂ ಹರಯೇ ನಮೋऽಸ್ತು ॥ ೮ ॥

ತ್ರಿವಿಕ್ರಮ ವಿಪಶ್ಚಿತೋ ಗುಣನಿಧೇಃ ಸುಶಿಷ್ಯಾಃ ಸುತಾಃ।
ಸತಾಮಭಿಮತಾಸ್ತ್ರಯೋ ಯಸ್ತೃತೀಯೋऽತ್ರ ನಾರಾಯಣಃ।
ಸು ಮಧ್ವವಿಜಯಂ ವ್ಯಧಾದ್ಗುರುಗಿರಾ ಸದಾನಂದದಃ।
ಪ್ರಸೀದತು ತತಃ ಸದಾ ದಶಮತಿಃ ಸ ನಾರಾಯಣಃ॥ ೯ ॥

ವಿಜಯದಾಸರ ಶಿಷ್ಯರಾದ 'ಶ್ರೀ ಜಯವಿಜಯದಾಸಾರ್ಯ ನಿಜಗೂಢವರದ ಸುಂದರ ಶ್ರೀ ವೆಂಕಟೇಶದಾಸ'ರೆಂಬುವರು ಮಧ್ವವಿಜಯಕ್ಕೆ ಕನ್ನಡ ಷಟ್ಪದಿ ಪದ್ಯಗಳಲ್ಲಿ ಅನುವಾದ ಮಾಡಿದ್ದಾರೆ. (ಸಂಪಾದಕರು – ಹನುಮಂತರಾವ್ ಗೋರಾಬಾಳ, ಲಿಂಗಸೂಗೂರು, ಆರು ಸಂಪುಟಗಳಲ್ಲಿ). ಮೇಲಿನ ಮೊದಲ ನಾಲ್ಕು ಶ್ಲೋಕಗಳಿಗೆ ಅವರು ಮಾಡಿರುವ ಅನುವಾದ ಹೀಗಿದೆ :

ನರರು ಕೆಲ ತಮ ಚರಿತೆ
ಮರೆತುಬಿಟ್ಟರು ದೇವಮಾಯದಿ।
ಅರಿತು ಮರೆಯದ ಪುರುಷ ಕೆಲರಿಂ ನಾವು ಸಕಲವನು ॥ ೧ ॥

ತ್ವರಿತ ಕೇಳಲೆ ಇಲ್ಲ ಕೇಳಿದೆ
ಭರದಿ ಪೇಳಲೆ ಇಲ್ಲ ನಿಶ್ಚಯ
ವರಿತು ದೇವತೆ ಗುಹ್ಯವನ್ಯವು ಗ್ರಂಥಬಹುಭಯದಿ ॥ ೨ ॥

ಪೇಳಿದುದೆ ಮರೆಯದದು ಕಾರಣ
ಪೇಳಿದೆವು ಪ್ರಾಯೇಣ ಎಲ್ಲವ।
ಕೇಳಿದುದರಲಿ ಪೇಳಲಿಲ್ಲವೋ ಇಲ್ಲಿ ಸರ್ವ ವನು ॥ ೩ ॥

ಪೇಳುವರು ಕೆಲಪುರುಷ ಪ್ರಾಯಶ
ಮೇಲೆ ಎಮ್ಮಿಂ ನೋಡೆ ನಿಶ್ಚಯ
ಪೇಳ್ದ ಉಭಯ ವಿರಧವಿರೆ ಪ್ರಬಲೋಚನ ಸ್ವೀಕೃತವು ॥ ೪ ॥

ಪರಿಶಿಷ್ಟ - ೩

ಶ್ರೀ ಕೂರ್ಮ ಶಾಸನದ ಪೂರ್ಣಪಾಠ

ದೇವಃ ಶ್ರೀ ಕಮಳಾವಿಳಾಸಲಹರೀಪಾತ್ರಂ ಕಲಿ ಪ್ರೋಲ್ಲಸತ್
ಕ್ಲೇಶಕ್ಲಿಷ್ಟಜನೇಽಖಿಳಕ್ಷಿತಿತಲೇ ಸಂಲೀನ ಬೋಧೋದಯೇ।
ಸ್ವೀಯು ಶ್ರೀಪದ ಪಂಕಜೈಕಶರಣಾನ್ ಸಂರಕ್ಷಿತುಂ ಸನ್ಮುನಿಃ
ಜಾತಃ ಶ್ರೀ ಪುರುಷೋತ್ತಮಾಭಿಧಃ ಮಹಾತೀರ್ಥಃ ಸುಮತ್ಯಗ್ರಣೀಃ ॥ ೧ ॥

ಯನ್ಮುನಿಭಾಷಿತಭಾಷ್ಯಂ ಭೂಷ್ಯಂ ಕಿಲ ತೀರ್ಥಿಕಪ್ರವರ ಸಂಘೈಃ।
ಉನ್ಮದವಾದಿದ್ವಿರದ ಪ್ರತಿಕುಂಭಮಂಕುಶಂ ಭವತಿ ॥ ೨ ॥

ತಸ್ಯ ಜ್ಞಾನಕಲಾ ಕಲೋದಯ ಕಲೋ ವೈಯಾಸಿಕಂ ಗೋಗಣಂ
ಮಂದೈರ್ಭಿನ್ನಪಥಪ್ರದಾರಿತಮಲಂ ಸುವ್ಯಕ್ತಭೇದೇ ಪಥಿ।

ನೇತುಂ ಸುಧೃತದಂಡಮಂಡಿತ ಕರೋ ಯಃಪ್ರಾದುರಾಸೀನ್ಮುನಿ–
ವ್ರಾತ್ಯೈಃ ಸೇವ್ಯಪದಾರವಿಂದಯುಗಳಾದಾನಂದತೀರ್ಥೋ ಮುನಿಃ ॥ ೩ ॥

ಯನ್ಮುಖ ನಿಃಸೃತಭಾಷಾ ಲಲಿತಾ ಲಲಿತಪ್ರಕಾರ ಪದವಿನ್ಯಾಸಾ ।
ಕಮಲಾಪತಿ ಪದಕಮಲಂ ಭಜತೇ ಭಜಮಾನಭವ ಭಯಾರಾತಿಂ ॥ ೪ ॥

ಆನಂದತೀರ್ಥಭಗವತ್ಪಾದಾಚಾರ್ಯ ಸರಸ್ವತೀ ।
ಲೋಕೇಽತ್ರ ಹರಿಪಾದಾಬ್ಜಯುಗಳ ಪ್ರಾಪ್ತಯೇನು ಸಾ ॥ ೫ ॥

ತಸ್ಮಾಲ್ಲೋಕ ಸುರಕ್ಷಣಾತಿ ನಿಪುಣಾತ್ ಸಂಪ್ರಾಪ್ತಕರ್ತವ್ಯಧೀಃ
ದ್ವೇಧಾಽಮುತ್ರ ತಥಾತ್ರ ಯೋಽವತಿ ಜನಾನ್ ಕಾಳಿಂಗ ಭೂಸಂಭವಾನ್ ।
ಪಿತ್ರಾಚಾರ ಮುಪೈತಿ ಸೂನುರಿತಿ ಸನ್ನೀತಿಸ್ಥಿತೋ ಧರ್ಮತಃ
ಶತ್ರುಕ್ಷ್ಮಾಪತಿವರ್ಗದುರ್ಗ ನಿವಹನ್ ಭೀತಾನ್ ಅಭೀತಃ ಸ್ವಯಂ ॥ ೬ ॥

ಯಶ್ಚ ಶ್ರೀ ಕಮಠಾಧಿನಾಯಕ ಮಹಾಕಾರ್ಯೈಕ ಬದ್ಧವ್ರತಃ
ತಸ್ಯ ಪ್ರಚ್ಯುತಿವಾರಣಾಯ ಶಬರಾನೀಕಕ್ಷಿತಿ ಧ್ರಾಽಶನಿಂ ।
ಧತ್ತೇ ಸತ್ಕರವಾಲಮಸ್ಯ ತಟಿತಾ ಸಂತ್ಯಕ್ತಜೀವೇ ರಿಪೌ
ಹಂತವ್ಯಾನ್ ಅವಶೇಷಣಾನ್ ನಿಜವಿಧಿರ್ನೋ ಯಸ್ಯ ಬೋಧ್ಯಸ್ತರಾಂ ॥ ೭ ॥

ತೇನಾನೇನ ಶ್ರೀಮನ್ನರಿಹರಿತೀರ್ಥಾಖ್ಯಮುನಿವರೇಣ್ಯೇನ
ಕಲಿಸಮಯ ಪ್ರಹ್ಲಾದ ಪರಿತೋಷ್ಯ ನೃಹರಿರೂಪೇಣ ॥ ೮ ॥

ಸ್ವಸ್ತಿ ಶ್ರೀ ಶಕವತ್ಸರೇ ಹುತವಹವ್ಯೋಮದ್ವಯಕ್ಷ್ಮಾಯುತೇ
ಮೇಷೇ ಶುಕ್ಲಶಶಾಂಕಶೇಖರದಿನೇ ವಾರೇ ಚ ಸೌಮ್ಯೇವರೇ ।
ಪ್ರಾಸಾದಂ ಕಮಠಾಧಿಪಸ್ಯ ಪುರತೋ ನಿರ್ಮಾಯ ಶರ್ಮಪ್ರದೋ
ಯೋಗಾನಂದನೃಸಿಂಹ ಏಷ ಭಗವಾನ್ ಪ್ರೀತ್ಯಾ ಪ್ರತಿಷ್ಠಾಧಿಪಿತಃ ॥ ೯ ॥

⁂ ⁂ ⁂

ಎರಡನೆಯ ಪರಿಚ್ಛೇದ

ಕರ್ಮಭೂಮಿ

1. ತುಳುನಾಡು

ಕಾರ್ತವೀರ್ಯ-ಸಹಸ್ರಬಾಹು-ಅರ್ಜುನನೆಂಬುವನು ಹೈಹಯರಾಜ ; ಮಾಹಿಷ್ಮತಿಯು ಅವನ ರಾಜಧಾನಿ. ಒಮ್ಮೆ ಜಮದಗ್ನಿ ಋಷಿಯ ಆಶ್ರಮಕ್ಕೆ ಅವನು ಬಂದಾಗ ಋಷಿಯು ಅಲ್ಲಿರಲಿಲ್ಲ ; ಋಷಿಪತ್ನಿಯಾದ ರೇಣುಕೆಯು ಸುರಭಿಯ ನೆರವಿನಿಂದ ಅವನನ್ನು ಸತ್ಕರಿಸಿದಳು; ರಾಜನು ಹಿಂದಿರುಗುವಾಗ ಸುರಭಿಯನ್ನೂ ಎಳೆದೊಯ್ದನು. ಇದನ್ನು ತಿಳಿದ ಜಮದಗ್ನಿಯ ಮಗ ಪರಶುರಾಮನು ಸಿಟ್ಟಿಗೆದ್ದು ರಾಜಧಾನಿಗೆ ಹೋಗಿ ಕಾರ್ತವೀರ್ಯನನ್ನು ಸಂಹರಿಸಿದನು. ಇದಕ್ಕೆ ಪ್ರತೀಕಾರವಾಗಿ ಕಾರ್ತವೀರ್ಯನ ಮಕ್ಕಳು ಪರಶುರಾಮನಿಲ್ಲದಿದ್ದಾಗ ಆಶ್ರಮಕ್ಕೆ ಬಂದು ಜಮದಗ್ನಿಯನ್ನು ಕೊಂದುಹೋದರು ; ಸಾಧ್ವಿಯಾದ ರೇಣುಕೆಯು ಸಹಗಮನ ಮಾಡಿದಳು. ಪರಶುರಾಮನು ಆಶ್ರಮಕ್ಕೆ ಬಂದಾಗ ಕಾರ್ತವೀರ್ಯನ ಮಕ್ಕಳ ಅಪರಾಧಕ್ಕೆ ಅವರ ಇಡೀ ವಂಶ ವನ್ನೇ ನಿರ್ಮೂಲ ಮಾಡುವುದಾಗಿ ಶಪಥ ತೊಟ್ಟನು. ಇಪ್ಪತ್ತೊಂದು ಬಾರಿ ಭಾರತಭೂಮಿಯನ್ನೆಲ್ಲ ತಿರುಗಿ ಇದ್ದ ಎಲ್ಲ ಕ್ಷತ್ರಿಯರಾಜರನ್ನೂ ಸಂಹರಿಸಿದನು. ರಾಜನ್ಯರಿಲ್ಲದೆ ಅನಾಥೆಯಾದ ಧರಿತ್ರಿಯನ್ನು ಕಾಶ್ಯಪನಿಗೆ ದಾನಮಾಡಿಬಿಟ್ಟನು. ಆಗ ತನಗೇ ನಿಲ್ಲಲು ಸ್ಥಳವಿಲ್ಲದಿರಲು ಪಶ್ಚಿಮ ಸಮುದ್ರ ತೀರಕ್ಕೆ ಬಂದು ತನ್ನ ಕೊಡಲಿಯನ್ನು ತುಯ್ದು ಸಮುದ್ರದಲ್ಲಿ

ಎಸೆದನು ; ಈ ಕೊಡಲಿ ಬಿದ್ದ ಸ್ಥಳದವರೆಗೆ ಸಮುದ್ರ ಹಿಂದೆ ಸರಿಯಿತು. ಈ ಭೂಭಾಗವೇ ಪರಶುರಾಮಕ್ಷೇತ್ರವೆನಿಸಿಕೊಳ್ಳುತ್ತದೆ. ಇದು ಸ್ಕಂದ ಪುರಾಣದ 'ಸಹ್ಯಾದ್ರಿಕಾಂಡ'ದಲ್ಲಿ ಬರುವ ಕಥೆ. ಪರಶುರಾಮನು ಕೊಡಲಿಯನ್ನು ಸಾಗರದೊಳಗೆ ಎಸೆಯಲು ನಿಂತ ಸ್ಥಳವೇ ತೀರ್ಥಹಳ್ಳಿಯೆಂದು ನಿರ್ದೇಶಿಸುತ್ತಾರೆ. ಸಹ್ಯಾದ್ರಿಯ ಮೂಲೆಗೂ ಸಾಗರಕ್ಕೂ ನಡುವೆ ಮೇಲೆ ನಾಸಿಕದಿಂದ ಕೆಳಗೆ ಕನ್ಯಾಕುಮಾರಿಯ ವರೆಗೆ ಹಬ್ಬಿರುವ ಈ ಭೂಪ್ರದೇಶವೇ ಶೂರ್ಪಾರಕವೆನಿಸಿಕೊಳ್ಳುವ ಪರಶುರಾಮಕ್ಷೇತ್ರ. ಪರಶುರಾಮನು ಅನಂತರ ಈ ಪಶ್ಚಿಮ ತೀರ ಭೂಮಿಯನ್ನು ಏಳು ಪ್ರದೇಶಗಳಾಗಿ ವಿಭಾಗಮಾಡಿ ಸಪ್ತಕೊಂಕಣ ವನ್ನು ನಿರ್ಮಿಸಿದನಂತೆ. ಕೇರಳ, ತೌಳವ, ಹೈವ, ಸುರಾಷ್ಟ್ರ, ಕೊಂಕಣ, ಕರಹಾಟ, ಕರ್ಣಾಟಕ ಇವೇ ಸಪ್ತಕೊಂಕಣಗಳೆಂದು ಪ್ರತೀತಿ. **'ಕರಾಟಂ ಚ ವಿರಾಟಂ ಚ ಮರಾಟಂ ಕೊಂಕಣಂ ತಥಾ, ಹವ್ಯಗಂ ತೌಳವಂ ಚೈವ ಕೇರಳಂ ಚೇತಿ ಸಪ್ತಕಂ'** ಎಂದು ಇನ್ನೊಂದು ಪಾಠ.

ಹೀಗೆ ತುಳುನಾಡು ಪರಶುರಾಮಕ್ಷೇತ್ರಗಳಲ್ಲಿ ಒಂದು. ತುಳುನಾಡಿನ ಗಡಿಗಳನ್ನು ''ಉತ್ತರಕ್ಕೆ ಗಂಗೊಳ್ಳಿ ಹೊಳೆ, ದಕ್ಷಿಣಕ್ಕೆ ಮಲೆಯಾಳ, ಪೂರ್ವಕ್ಕೆ ಘಟ್ಟ, ಪಶ್ಚಿಮಕ್ಕೆ ಸಮುದ್ರ'' ಎಂದು ನಿರ್ದೇಶಿಸುವುದುಂಟು. ಐತಿಹಾಸಿಕವಾಗಿ ಗೋಕರ್ಣದಿಂದ ಪಯಸ್ವಿನೀ ನದಿಯವರೆಗೆ ತುಳುನಾಡು ಹಬ್ಬಿದ್ದಿತೆಂದು ತಿಳಿದು ಬರುತ್ತದೆ. ತುಳುನಾಡಿನ ಜನ ಚಂದ್ರವಂಶದ ಯಯಾತಿಯ ಮಗ ತುರ್ವಸು ಎಂಬ ರಾಜಕುಮಾರನು ಪಾತಾಳಲೋಕದಲ್ಲಿ ನಾಗಕನ್ನಿಕೆ ಯರಲ್ಲಿ ಪಡೆದವರೆಂದು 'ನಾಗರಾಜುಪಾರ್ದನ' ಹೇಳುತ್ತದೆ. ಈ ಪ್ರದೇಶದಲ್ಲಿ ಮೊದಲಿಗೆ ಇದ್ದವರು ಕೊರಗರೆನಿಸಿಕೊಳ್ಳುವ ಆದಿವಾಸಿಗಳು. ಅನಂತರ ಇಲ್ಲಿಗೆ ಬಂದು ನೆಲೆಸಿದವರು ದ್ರಾವಿಡ

ಜನರಾದ ಬಂಟರು, ಬಿಲ್ಲವರು, ಮೊಗೇರರು, ಕೆಲೆಸಿಗಳು, ನಾಡವರು ಮುಂತಾದವರು. ಪ್ರಮುಖವಾಗಿ ಇವರು ಒಕ್ಕಲುಮಕ್ಕಳು, ರೈತಾಪಿ ಜನ ; ನಾಡಿನ ಆಡಳಿತ ಇವರ ಕೈಸೇರಿದುದು ಸಹಜವೇ.

ಈಗಿನ ತೌಳವ ಬ್ರಾಹ್ಮಣರು ಮೂಲತಃ ತುಳುನಾಡವರಲ್ಲವೆಂಬುದು ಸ್ಪಷ್ಟವಾಗಿದ್ದರೂ ಅವರು ತುಳುನಾಡಿಗೆ ಬಂದುದು ಯಾವಾಗ, ಹೇಗೆ ಎಂಬುದು ಜಿಜ್ಞಾಸೆಗೆ ಎಡೆಕೊಟ್ಟಿದೆ. ಕದಂಬವಂಶದ ರಾಜ ಲೋಕಾದಿತ್ಯ–ಮಯೂರವರ್ಮನು ಬಾರಕೂರಿನಲ್ಲಿ ಕ್ರಿಸ್ತಾಬ್ಧ ೨೫೮ರ ಸುಮಾರಿಗೆ ಆಳುತ್ತಿದ್ದಾಗ ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆಸಿ ಅವರಿಗೆ ಕದಂಬಕಾನನ, ಗೋಕರ್ಣ, ಸ್ಕಂದಪುರ, ಗಜಪುರ, ಅಜಪುರ, ಅನಂತೇಶ, ನೇತ್ರಾವತೀ ದಂಡೆ ಇಲ್ಲಿ ಮೂವತ್ತೆರಡು ಗ್ರಾಮಗಳನ್ನು ದಾನಮಾಡಿದನೆಂದು ಒಂದು ವಿವರವಿದೆ. ಈ ಅಹಿಚ್ಛತ್ರವು ಯಾವುದೆಂಬುದೂ ಸ್ಪಷ್ಟವಾಗಿಲ್ಲ. ಗೋದಾವರೀ ತೀರದಲ್ಲಿ ಗಂಗರಾಜನಾದ ವಿಷ್ಣುಗುಪ್ತನ ರಾಜಧಾನಿಯೆಂದೂ, ಗಂಗಾನದಿಯ ಉತ್ತರ ತೀರದಲ್ಲಿ ಪಾಂಚಾಲರ ಪ್ರಾಚೀನ ಪಟ್ಟಣವೆಂದೂ ಊಹೆಗಳಿವೆ. ಮಯೂರಶರ್ಮನ ಮಗ ಚಿತ್ರಾಂಗದನು ಪಟ್ಟಕ್ಕೆ ಬರುವ ವೇಳೆಗೆ ಈ ಅಹಿಚ್ಛತ್ರದ ಬ್ರಾಹ್ಮಣರೆಲ್ಲ ಹಿಂದಿರುಗಿ ಹೋಗಿಬಿಟ್ಟಿದ್ದರೆಂದೂ ಅವನು ಮತ್ತೆ ಅಹಿಚ್ಛತ್ರಕ್ಕೆ ಹೋಗಿ ಬ್ರಾಹ್ಮಣರನ್ನು ಕರೆತಂದನೆಂದೂ 'ಗ್ರಾಮಪದ್ಧತಿ' ಹೇಳುತ್ತದೆ. ಈ ಬಾರಿ ಬಂದ ಬ್ರಾಹ್ಮಣರನ್ನೆಲ್ಲ ಹದಿನಾರು ಪೂರ್ವ ಗ್ರಾಮಗಳು (೭೩ ಮನೆಗಳು) ಹದಿನಾರು ಪಶ್ಚಿಮ ಗ್ರಾಮಗಳು (೨೦೬ ಮನೆಗಳು) ಎಂದು ವ್ಯವಸ್ಥೆ ಮಾಡಿದುದಲ್ಲದೆ ಅವರನ್ನು ಅಗ್ನಿಹೋತ್ರಿ, ಸ್ಮಾರ್ತ, ಭಟ್ಟ, ತಂತ್ರಿ, ಪಂಡಿತ, ಪಕ್ಷನಾಥ, ಬಲ್ಲಾಳ, ಗ್ರಾಮಣಿ, ಆದಿವಾಸಿಗಳೆಂದು ನಿಯೋಜಿಸಿದನು. ಸ್ಮಾರ್ತರು ವೈದಿಕ ಮಂತ್ರಗಳನ್ನು ಪಠಣಮಾಡುವವರು ; ಆಗಮೋಕ್ತ ನಿರ್ಣಯಮಾಡು

ವವರು ತಂತ್ರಿಗಳು ; ಪಂಚಾಯತಿಕ ನಡೆಸುವವರ ಭಟ್ಟರು ; ನ್ಯಾಯ ನಿರ್ಣಯಗಳನ್ನು ಮಾಡುವವರು ಪಂಡಿತರು ; ರಕ್ಷೆ-ಶಿಕ್ಷೆಗಳನ್ನು ನೋಡಿಕೊಳ್ಳುವವರು ಪಕ್ಷನಾಥರು ; ಬಲ್ಲಾಳರು ಆಡಳಿತಗಾರರು ; ಗ್ರಾಮಣಿಗಳು ವಿಚಾರಣೆ ನಡೆಸುವ ಮಂದಿ ; ವಾರ್ತಾವಿತರಣ ಮಾಡುವವರು, ಉಪದೇಶ ಮಾಡುವವರು ಆದಿವಾಸಿಗಳು. ಹೀಗೆ ಧಾರ್ಮಿಕ–ರಾಜಕಾರಣ ಕರ್ತವ್ಯಗಳನ್ನು ಬ್ರಾಹ್ಮಣರ ಪಾಲಿಗೆ ವಹಿಸಿದು ದರಿಂದ ಬ್ರಾಹ್ಮಣರು ತುಳುನಾಡಿನಲ್ಲಿ ನೆಲೆಸಲು ಅನುಕೂಲವಾಯಿತು. ಇದೂ '**ಗ್ರಾಮಪದ್ಧತಿ**'ಯ ವಿವರವೇ.

ಈ ಅಹಿಚ್ಛತ್ರದ ಬ್ರಾಹ್ಮಣರು ತುಳುನಾಡಿಗೆ ಬರುವ ಮೊದಲೇ ಹತ್ತಿರದ ನೆರೆನಾಡುಗಳಿಂದ ಬ್ರಾಹ್ಮಣರು ಹಲವರು ಬಂದು ಈ ಪ್ರಾಚೀನ ಸಂಸ್ಕೃತಿಯ ಮೇಲೆ ಆರ್ಯಧರ್ಮದ ವರ್ಚಸ್ಸನ್ನು ಮೂಡಿಸಲೆತ್ನಿಸಿದ್ದರು. ತುಳುನಾಡಿನಲ್ಲಿ ತುಂಬ ಹಿಂದಿನಿಂದ ಬಳಕೆಯಲ್ಲಿರುವ ಭೂತಾರಾಧನೆ, ನಾಗಪೂಜೆಗಳನ್ನು ಇವರು ವೈದಿಕ ಧರ್ಮದ ಕಟ್ಟಿನಲ್ಲೇ ಅಳವಡಿಸಿದರು. ಅಲ್ಲಿ ಶೈವಸಂಪ್ರದಾಯ ಬೆಳೆಯಲು ಬಹುಮಟ್ಟಿಗೆ ಈ ಶಿವಬ್ರಾಹ್ಮಣರೇ ಕಾರಣ. ನಾಗಾಲಯ ಗಳಲ್ಲಿ ಇವರೇ ಅರ್ಚಕರಾಗಿ ಆಡಳಿತಗಾರರಾಗಿ ನಿಂತುದರಿಂದ ಇವರಿಗೆ 'ನಾಗೇರ್' (ಎಂದರೆ ನಾಗಬ್ರಾಹ್ಮಣರು) ಎಂದೂ, ಸಾಮಾನ್ಯವಾಗಿ ದೇವಾಲಯಗಳಿಗೆಲ್ಲ ಇವರೇ ಅಧಿಕಾರಿಗಳಾಗಿದ್ದುದರಿಂದ 'ತಾನಿಕೆರ್' (ಎಂದರೆ ಸ್ಥಾನಿಕ ಬ್ರಾಹ್ಮಣರು) ಎಂದೂ ಹೆಸರುಗಳು ಬಿದ್ದುವು. ಕುಡುಪು, ಬಳ್ಳಮಂಜ, ಸುಬ್ರಹ್ಮಣ್ಯ ಮುಂತಾದೆಡೆಗಳಲ್ಲಿ ಇವರ ಪ್ರಭಾವವು ಹೆಚ್ಚಾಗಿದ್ದಿತು. ನಾಡನುಡಿಯಾದ ತುಳುವನ್ನು ಇವರು ಬಳಸಿದಿರೂ ತಮ್ಮ ಸಂಸ್ಕೃತವನ್ನು ಆದರಲ್ಲಿ ವಿಶೇಷವಾಗಿ ಪ್ರಯೋಗಿಸಿ 'ಬ್ರಾಹ್ಮಣತುಳು'ವಿನ ಉಗಮಕ್ಕೆ ದಾರಿಮಾಡಿದರು. ಕಾಲಕ್ರಮದಲ್ಲಿ

ಹಲವಾರು ಕಾರಣಗಳಿಂದ ಸಮಾಜದಲ್ಲಿ ಇವರ ಸ್ಥಾನ ದುರ್ಬಲವಾಗಿ ಇವರು ಅಪಾಂಕ್ತೇಯರೆಂದು ಪರಿಗಣಿತರಾದರು. ಆದರೂ ತೌಳವ ಧರ್ಮದಲ್ಲಿ ಆರ್ಯಸಂಸ್ಕೃತಿಯ ವರ್ಚಸ್ಸನ್ನು ಮೂಡಿಸಿದವರೇ ಇವರು ಎಂಬುದು ನಿರ್ವಿವಾದ.

ಅಹಿಚ್ಛತ್ರದ ಅಗ್ನಿಹೋತ್ರಿ ಬ್ರಾಹ್ಮಣರು ಮೂರು ತಂಡಗಳಲ್ಲಿ ವಲಸೆ ಬಂದರೆಂದೂ, ಮೂರನೆಯ ತಂಡದವರು ಕ್ರಿಸ್ತಾಬ್ಧ ಹನ್ನೊಂದನೆಯ ಶತಮಾನದಲ್ಲಿ ತುಳುನಾಡಿಗೆ ಬಂದು ತಾವು ಮೊದಲು ನಿಂತ ಗ್ರಾಮಗಳಿಂದಲೇ ನಿರ್ದಿಷ್ಟರಾದರೆಂದೂ ತಿಳಿದು ಬರುತ್ತದೆ. ಶಿವಳ್ಳಿಯವರು, ಕೋಟದವರು, ಕೋಟೇಶ್ವರದವರು, ಕುಂದಾವರದವರು, ಪಂಚಗ್ರಾಮದವರು ಎಂಬ ವ್ಯವಹಾರ ಇಂದಿಗೂ ವಾಡಿಕೆಯಲ್ಲಿದೆ. ಈ ಸಂದರ್ಭದಲ್ಲಿ ಸ್ವಾರಸ್ಯವಾದ ಒಂದು ವಿವರವೆಂದರೆ ಹೀಗೆ ವಲಸೆ ಬಂದ ಬ್ರಾಹ್ಮಣರು ಬರಿಯ ಗಂಡಸರೇ ಆಗಿದ್ದು ಇಲ್ಲಿ ಅವರು ಕೂಡಿ ಕೊಂಡ ಅಬ್ರಾಹ್ಮಣ ಹೆಂಗಸರಿಗೂ ಜಾತ್ಯುತ್ಕರ್ಷವಾದುದು. ಇದಕ್ಕೆ ಮಧ್ವಾಚಾರ್ಯರೇ ಕಾರಣಪುರುಷ ರೆಂದೂ ಪ್ರತೀತಿ (ನೋಡಿ : ಪಿ. ಗುರುರಾಜ ಭಟ್ಟರ 'ತುಳುನಾಡು', ಭವ್ಯವಾಣಿ ಪ್ರಕಾಶನ, ಉಡುಪಿ, ೧೭೯೩, ಪು. ೧೪೭-೧೪೮). ಇದು ಹೇಗಾದರೂ ಇರಲಿ. ವಲಸೆ ಬಂದ ಬ್ರಾಹ್ಮಣರಲ್ಲಿ ಶಿವಳ್ಳಿಯವರು ತುಂಬ ಪ್ರಬಲರಾದರು. ಮಧ್ವಾಚಾರ್ಯರೂ ಶಿವಳ್ಳಿ ಬ್ರಾಹ್ಮಣರು. ನಾಡಿನ ಹಲವು ಪ್ರಮುಖ ದೇವಾಲಯಗಳಲ್ಲಿ ಅರ್ಚನೆ-ಆಡಳಿತಗಳು ಇವರ ಕೈವಶವಾದವು.

ತುಳುನಾಡನ್ನು ಬಹುಕಾಲ ಆಲುಪರೆಂಬ ನಾಗವಂಶದ ಅರಸರು ಆಳುತ್ತಿದ್ದರು. ಆಲುಪ ಎಂಬ ಪದಕ್ಕೆ ಆಲುಕ (ಎಂದರೆ ಶೇಷ, ಅನಂತ, ನಾಗಾಧಿಪ) ಎಂಬುದು ಮೂಲವೆಂದು ಪರಿಣತರ ಮತ. ಈ

ಆಳುಪರಸರು ತುಳುನಾಡನ್ನು ಕ್ರಿಸ್ತಾಬ್ದ ಎರಡನೇ ಶತಮಾನದಿಂದ ಹದಿನಾಲ್ಕನೆಯ ಶತಮಾನದವರೆಗೆ ಆಳುತ್ತಿದ್ದಂತೆ ತಿಳಿದುಬರುತ್ತವೆ ; ಇವರ ರಾಜಧಾನಿ ಆಳ್ವಖೇಡವೆನಿಸಿದ್ದಿತು. ಇದರ ಉಲ್ಲೇಖವು ತಾಲೆಮಿಯ 'ಒಲೊಖ್ಖೊರ' ಎಂಬ ಗ್ರೀಕ್ ಶಬ್ದದಲ್ಲಿ ಕಾಣಬರುತ್ತದೆ. ಈ ಆಳುವರಸರ ಮನೆದೇವರು ಉಡುಪಿಯ ಬಳಿಯಿರುವ ಉದ್ಯಾವರದ ಶಂಭುಕಲ್ಲು ಭೈರವ ; ಇವರಿಗೆ ಶಂಭುಕಲ್ಲು ಬಟ್ಟಾರಕರೆಂದೇ ವ್ಯವಹಾರವಿದ್ದಿತು. ''ದಂಡ ವಿಭೂತ ವಿಸ್ತೀರ್ಣ ಪಿತಾಮಹಾವಲೋಕನ ಸಂವರ್ಧಿತಕುಲಾಭಿಮಾನ ಸಕಲ ಶ್ರೀಮತ್ ಆಳವರಸರ'' ರಾಜಧಾನಿಯು ಮೊದಲಿಗೆ ಉದ್ಯಾವರವೇ ಆಗಿದ್ದಿತು. ೧೧೫೫ರ ಸುಮಾರು ಬಾರಕೂರು (ಬಾರಹಕನ್ಯಾಪುರ) ರಾಜಧಾನಿಯಾಯಿತು. ಆ ಕಾಲದ ಶಾಸನವೊಂದು ''ಸಮಸ್ತಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಪರಮಭಟ್ಟಾರಕರಪ್ಪ ಶ್ರೀಮತ್ ಪಂಡ್ಯಚಕ್ರವರ್ತಿ ಭುಜಬಲಕವಿ—ಆಲುಪೇಂದ್ರದೇವರು ಬಾರಹಕನ್ಯಾಪುರದ ಅರಮನಯಲು ಸುಖಸಂಕಥಾವಿನೋದದಿಂ ರಾಜ್ಯಂ ಗೆಯ್ಯುತ್ತಿರೆ'' ಎಂದು ಆರಂಭವಾಗುತ್ತದೆ. ಈ ಶಾಸನದಲ್ಲಿ ಪ್ರಸ್ತಾಪಕ್ಕೆ ಬಂದಿರುವ ದೊರೆ (ಆಳ್ವಿಕೆ ೧೧೩೮-೧೧೫೫)ಯೇ ಆ ವಂಶದಲ್ಲಿ ತುಂಬ ಪ್ರಖ್ಯಾತನಾದವನು. ಅವನ ನಂತರ ಜಗದೇವರಸ (೧೧೫೫-೧೧೭೬), ಭುಜಬಲ ಕುಲಶೇಖರ ಆಲುಪೇಂದ್ರ ಮುಂತಾದವರು ರಾಜ್ಯಭಾರವನ್ನು ಬಾರಕೂರಿನಿಂದಲೇ ನಿರ್ವಹಿಸು ತ್ತಿದ್ದರು. ಇಮ್ಮಡಿ ಬಂಕಿದೇವನ ಕಾಲದಲ್ಲಿ, ಎಂದರೆ ೧೩೦೨ರ ಸುಮಾರಿಗೆ, ಮಂಗಳೂರು (ಮಂಗಳಾಪುರ) 'ಶ್ರೀಮತುರಾಜಧಾನಿ'ಯಾಯಿತು ; ಸೋಯಿದೇವ ಅರಸನ ಕಾಲದಲ್ಲಿ, (೧೩೧೫ರಲ್ಲಿ) ರಾಜಧಾನಿ ಮತ್ತೆ ಬಾರಕೂರೇ ಆಯಿತು. ಆಲುಪ ಅರಸರು ಶೈವರು, ನಾಗಾರಾಧಕರು.

ಒಂಬತ್ತನೆಯ ಶತಮಾನದ ಸುಮಾರಿಗೆ ಕಾರ್ಕಳದ ಶಾಂತರರು ತುಳು ನಾಡಿನ ಮೇಲೆ ತಮ್ಮ ಪ್ರಭಾವವನ್ನು ಬೀರಿದರು. ಪಟ್ಟಿಪೊಂಬುಚ್ಚಪುರ (ಈಗ ನಗರತಾಲ್ಲೂಕಿನ ಹುಂಚ)ವೇ ರಾಜಧಾನಿಯಾಗಿ ಇದ್ದ ಈ ಚಾಂತ (ಶಾಂತರ)ರು ಉಗ್ರವಂಶದ ಜೈನರು ; ಆಲೂಪ ಅರಸರಿಗೆ ಸೇರಿದ್ದ ಪಟ್ಟಿಪೊಂಬುಚ್ಚಪುರವನ್ನು ಇವರ ಮನೆದೇವರು ಪದ್ಮಾವತಿ-ಯಕ್ಷಿಣಿ. ಜಾಕಲ ಮಹಾದೇವಿ (೧೨೪೬-೧೨೭೦) ಮತ್ತು ಕಾಳಲ ಮಹಾದೇವಿ (೧೨೭೦-೧೨೮೧) ಎಂಬ ಇಬ್ಬರು ರಾಣಿಯರಿಂದ ಪ್ರವರ್ತಿತವಾದ ಈ ರಾಜವಂಶದಲ್ಲಿ ರಾಯಬಲ್ಲಾಳ ದೇವ (೧೨೮೪-೧೩೫೨), ವೀರಪಾಂಡ್ಯದೇವ (೧೩೫೨-೧೩೫೭), ಭೈರಸ ಒಡೆಯರು (೧೪೮೯ರ ಸುಮಾರು), ವೀರಪಾಂಡ್ಯದೇವ (೧೪೩೨ರ ಸುಮಾರು) ಮುಂತಾದ ಅರಸರು ಬಂದರು. ಇವರೆಲ್ಲ ಜೈನಧರ್ಮದ ಪಕ್ಷಪಾತಿಗಳು.

ತುಳುನಾಡ ಇತಿಹಾಸದಲ್ಲಿ ತುಂಬ ಪ್ರಸಿದ್ಧನಾದ, ಪ್ರಭಾವಶಾಲಿಯಾದ ವ್ಯಕ್ತಿಯೆಂದರೆ ಭೂತಾಳುಪಾಂಡ್ಯ. ಗ್ರಾಮಪದ್ಧತಿಯೂ, ಪಾಡ್ದನಗಳೂ, ಬಳಕೆಯಲ್ಲಿರುವ ಅಳಿಯಸಂತಾನಕಟ್ಟೂ (ಹದಿನಾಲ್ಕು ಕಟ್ಟು, (ಹದಿನಾರು ಕಟ್ಟಳೆಗಳು) ಇವನ ಪ್ರತಿಭೆಯನ್ನು ಹೇಳುತ್ತವೆ. ಕುಂಡೋದರನೆಂಬ ಭೂತವನ್ನು ಆರಾಧಿಸಿ ಇವನು ಬಾರಕೂರು ರಾಜ್ಯವನ್ನು ಪಡೆದನಂತೆ. ಹನ್ನೆರಡು ಮಂದಿ ಜೈನ ಕನ್ನಿಕೆಯರನ್ನು ಮದುವೆಯಾಗಿ ಅವರಿಂದ ಹನ್ನೆರಡು ಮಂದಿ ಮಕ್ಕಳನ್ನು ಪಡೆದನಂತೆ. ತೋಲಾರ, ಚೌಟ, ಸಾವಂತ, ಬಂಗ, ಅಜಿಲ, ಕೊಂನ, ದಂಬಿ, ಕುಂಬಳ, ಬಿನ್ನಾಣ, ಹೆಗ್ಗಡೆ, ಮುದ್ಯ, ಕುಂದ ಎಂಬ ಈ ಹನ್ನೆರಡು ಮಂದಿಯೂ ಮುಂದೆ ಬೇರೆ ಬೇರೆ ಅರಸೊತ್ತಿಗೆಗಳನ್ನು ಸ್ಥಾಪಿಸಿದರೆಂದು ಪ್ರತೀತಿ. ಇವರಲ್ಲಿ ಕುಂಬಳೆ ಅರಸರೂ, ಅಜಿಲರೂ, ಚೌಟರೂ

ಪ್ರಖ್ಯಾತರು. ಅಂತೂ ಹನ್ನೆರಡು ಕನ್ನಿಕೆಯರನ್ನು ಪಾಂಡ್ಯರಾಜನು ಮದುವೆಯಾದ ನೆನಪಿಗಾಗಿ ಊರ ಹೆಸರು ಜಯಂತಿಕಾಪುರವೆಂದು ಇದ್ದುದು ಬಾರಹಕನ್ಯಾಪುರ ('ಬಾರಹ' ಎಂಬುದು 'ದ್ವಾದಶ'ಕ್ಕೆ ಅರ್ಧಮಾಗಧಿರೂಪ) ಅಥವಾ ಬಾರಕೂರು ಆಯಿತೆಂದು ಹೇಳುತ್ತಾರೆ. ಪಶ್ಚಿಮತೀರ ಪ್ರದೇಶದಲ್ಲೆಲ್ಲ ಪ್ರಚಲಿತವಾಗಿದ್ದ ಅಳಿಯಸಂತಾನಕಟ್ಟೆಂಬ ವ್ಯವಸ್ಥೆ ಈ ಭೂತಾಳುಪಾಂಡ್ಯರಾಜನಿಂದಲೇ ಆಯಿತೆಂದು ಪ್ರತೀತಿ. ತುಳುದೇಶದಲ್ಲಿ ತಲೆಯೆತ್ತಿಕೊಂಡ ಅರಸೊತ್ತಿಗೆಗಳಿಗೆಲ್ಲ ಭೂತಾಳು ಪಾಂಡ್ಯನೇ ಮೂಲಪುರುಷನೆಂದೂ ನಂಬಿಕೆಯುಂಟು.

೨. ಧರ್ಮಸಂಗಮ

ನಾಗಪೂಜೆ

ತುಳುನಾಡಿನಲ್ಲಿ ತುಂಬ ಪ್ರಾಚೀನವಾದ ಧರ್ಮವೆಂದರೆ ನಾಗಪೂಜೆ ; ಇದರ ಹಿಡಿತ ಇಂದಿಗೂ ಸಡಿಲವಾಗಿಲ್ಲ. ಮನೆಮನೆಗಳಲ್ಲಿ ನಾಗಬನ (ಕಾವು)ಗಳಲ್ಲದೆ ನಾಗಾರಾಧನೆಗೇ ಮೀಸಲಾದ ಸುಬ್ರಹ್ಮಣ್ಯ, ಮಂಜೇಶ್ವರ, ಕುಡುಪು, ಬಳ್ಳ ಮಂಜ, ಕುಮಾರ ಮಂಗಳ, ಕಾಟುಕುಕ್ಕೆ ಮುಂತಾದ ಕ್ಷೇತ್ರಗಳು ತುಳುನಾಡಿನಲ್ಲಿ ಪ್ರಸಿದ್ಧವಾಗಿವೆ. ಈ ದೇಶದ ಬ್ರಹ್ಮಸ್ಥಾನಗಳಲ್ಲಿ ಕೂಡ ನಾಗನನ್ನೇ ಬ್ರಹ್ಮನೆಂದು ಬಗೆದು ನಾಗಬ್ರಹ್ಮನು ಸೃಷ್ಟಿಕರ್ತನೆಂಬ ಕಲ್ಪನೆಗೆ ಎಡೆಕೊಟ್ಟಿರುವುದು ಸ್ಪಷ್ಟವಾಗುತ್ತದೆ. ಆಳುವರಸರ ಕಾಲದಲ್ಲಿ ನಾಗಾರಾಧನೆ ವಿಶೇಷವಾಗಿ ಪ್ರಚಾರಕ್ಕೆ ಬಂದಿತಾದರೂ ಬ್ರಾಹ್ಮಣರು ತುಳುನಾಡಿಗೆ ಬಂದಂದಿನಿಂದ ನಾಗನು ಸ್ಕಂದನೆನ್ನುವ ಕಲ್ಪನೆ ಮೂಡಿಬಂದಿತು. ಶಿವನ ಮಗನಾದ ಸುಬ್ರಹ್ಮಣ್ಯನನ್ನು ಸರ್ಪರೂಪದಲ್ಲಿ ಪೂಜಿಸುವ ಪದ್ಧತಿ ತುಳುನಾಡಿಗೆ

ವಿಶಿಷ್ಟವಾದುದೆನ್ನುತ್ತಾರೆ. ತುಳುಪಾಡ್ದನಗಳಲ್ಲಿ 'ಕುಕ್ಕೆ ಸುಬ್ರಾಯ ದೇವರ್' ಎನ್ನುವ ಮಾತು ಬರುತ್ತದೆ ; 'ಕುಕ್ಕೆ'ಯೆಂದರೆ ತುಳುಭಾಷೆಯಲ್ಲಿ 'ಮಗು', 'ಮಗ'ನೆಂದೂ 'ಕುಕ್ಕೆ' ಎಂಬುದು ಸ್ಕಂದನ 'ಕುಮಾರ'ವೆಂಬ ಹೆಸರಿನ ಅಚ್ಚ ತುಳುಭಾಷೆಯ ರೂಪವೆಂದೂ ಮಂಜೇಶ್ವರದ ಗೋವಿಂದ ಪೈಗಳ ವಾದ. ಸ್ಕಂದ ಷಷ್ಠಿಗೆ ಈ ಕಡೆ 'ಕುಕ್ಕೆ ಸಟ್ಠಿ'ಯೆಂದೇ ಹೆಸರಿರುವುದಂತೆ. ಅಂತೂ ಇಲ್ಲಿ ಸುಬ್ರಹ್ಮಣ್ಯನೆಂದೂ ಪೂಜಿಸುವ ಸ್ಥಳಗಳಲ್ಲೆಲ್ಲ ನಾಗಕಲ್ಲುಗಳೇ ವಿಗ್ರಹಗಳು. ಸಹ್ಯಾದ್ರಿಯ ತಪ್ಪಲಿನಲ್ಲಿ ಪುತ್ತೂರು ತಾಲೂಕಿಗೆ ಸೇರಿರುವ ಸುಬ್ರಹ್ಮಣ್ಯ ಕ್ಷೇತ್ರವು ದಕ್ಷಿಣ ದೇಶದಲ್ಲೆಲ್ಲ ಪ್ರಸಿದ್ಧವಾದುದಷ್ಟೆ ; ಅದಕ್ಕೆ 'ಕುಮಾರ ಗಿರಿ' ಯೆಂಬ ಹೆಸರೂ ಉಂಟು. ವಾಸುಕಿಯು ಇಲ್ಲಿನ ಗುಹೆಯಲ್ಲಿ ವಾಸಿಸುತ್ತಿದ್ದಾನೆಂದೂ ಗುಹಾದ್ವಾರದಲ್ಲಿ ತಾನೇ ಶಿವಲಿಂಗವೊಂದನ್ನು ಪ್ರತಿಷ್ಠೆ ಮಾಡಿದನೆಂದೂ ಸ್ಥಳಪುರಾಣ ಹೇಳುತ್ತದೆ. ಸ್ಕಂದನ ಕಲಾಂಶ ಇದರಲ್ಲಿ ಸನ್ನಿಹಿತವಾಗಿದೆಯೆಂದು ಪ್ರತೀತಿ. ವರ್ಷಕ್ಕೊಮ್ಮೆ ಗರ್ಭಗೃಹದಲ್ಲಿರುವ ಹಾವಿನ ದೊಡ್ಡ ಹುತ್ತವೊಂದರಿಂದ ಮಣ್ಣನ್ನು ತೆಗೆದುಕೊಂಡು ಬರುವುದೇ ಇಲ್ಲಿನ ವಿಶೇಷ. ಕಾರ್ಕಳ ತಾಲ್ಲೂಕಿನ ಕೊಕ್ಕರಾಡಿ ಸುಬ್ರಹ್ಮಣ್ಯ ದೇವಾಲಯ, ಕಜಕ್ಕಾರು ಷಣ್ಮುಖ ದೇವಸ್ಥಾನ ಇವೂ ಪ್ರಸಿದ್ಧವಾದ ಸರ್ಪಾಲಯಗಳೇ. ಹಲವೆಡೆ ಸರ್ಪವಿಗ್ರಹ ಗಳೊಂದಿಗೆ ಸ್ಕಂದನ ಮೂರ್ತಿಗಳೂ ಇರುತ್ತವೆ.

ಭೂತಾರಾಧನೆ

ನಾಗಪೂಜೆಯಂತೆಯೇ ಭೂತಾರಾಧನೆಯೂ ತುಳುನಾಡಿನಲ್ಲಿ ಪ್ರಾಚೀನವಾದ ಧರ್ಮ. ಕಲ್ಕುಡ, ಕಲ್ಲುರ್ಟಿ, ಕೋಟೆ-ಚೆನ್ನಯರು, ಕಾಂತಾಬಾರೆ-ಬೂದಾಬಾರೆ, ಬೊಬ್ಬರ್ಯೆ, ಕೋಟಿಪೂಂಜ, ಕಂಬೆರ್ಲು ಮುಂತಾದವರ ಪ್ರೇತಗಳೂ, ಚಾಮುಂಡಿ, ಜುಮಾದಿ (ಧೂಮಾವತಿ),

ಲೆಕ್ಕೆಸಿರಿ (ರಕ್ತೇಶ್ವರಿ), ಮಹಮ್ಮಾಯೆ, ಭಗವತಿ, ಕನ್ಯಾಕುಮಾರಿ, ವನಗುರ್ಗಿ ಮುಂತಾದ ದೈವೀ ಶಕ್ತಿಗಳೂ, ಮಲ್ಲರಾಯಿ, ಉಳ್ಳಾಳ್ತಿ ಕೊಡುಮಣುತಾಯಿ ಮುಂತಾದ ಅಂಶಗಳೂ, ಪಿಲಿಚಾವುಂಡಿ (ಹುಲಿ), ಪಂಜುರ್ಳಿ (ಹಂದಿ) ಮುಂತಾದ ಪಾಶವೀಶಕ್ತಿಗಳೂ ಭೂತ ಗಳೆಂದು ನಿಂತು ನಾಡಿನಾದ್ಯಂತ ವಿಶೇಷವಾದ ಪೂಜೆ-ಪುನಸ್ಕಾರಗಳನ್ನು ಕೊಳ್ಳುತ್ತಿವೆ. ತುಳುವರು ಇವನ್ನು ದೈವ (ದೈಯ್ಯೊಂ)ಗಳೆನ್ನುತ್ತಾರೆ ; ಇವುಗಳಿಗೆ ಕೋಲ, ನೇಮಗಳನ್ನು ಸಲ್ಲಿಸುತ್ತಾರೆ ; ಸಾನ (ಸ್ಥಾನ)ಗಳನ್ನು ಕಟ್ಟಿಸುತ್ತಾರೆ ; ಪಾಡ್ದನ (ಪ್ರಾರ್ಥನೆ)ಗಳನ್ನು ಹಾಡುತ್ತಾರೆ. ನಾಗ, ನಂದಿ, ಲೆಕ್ಕೆಸಿರಿ ಬೆರ್ಮರ್ (ಬ್ರಹ್ಮ), ಕ್ಷೇತ್ರಪಾಲ ಇವು ಪಂಚದೈವಗಳೆನಿಸಿ ಕೊಳ್ಳುತ್ತವೆ. ಬ್ರಾಹ್ಮಣರ ಪ್ರಭಾವದಿಂದ ಆಲೆಡೆ (ನಾಗಾಲಯ)ಗಳು ಬ್ರಹ್ಮಸ್ಥಾನಗಳಾದಂತೆಯೇ ದೈವಸಾನಗಳು ದೇವಸ್ಥಾನಗಳಾದುವು, ದೈವಗಳು ಶಿವನ ಭೂತಗಣಗಳಲ್ಲಿ ಸೇರಿದುವು. ಮಕರಂತಾಯಿ ಮಹಾಘೋರಾದೇವಿಯಾದಳು, ಕಲ್ಲುರ್ಟಿಯು ಕರಾಳಿಯಾದಳು, ಬೈಕಾಡ್ತಿಯು ಭೈರವಿಯಾದಳು, ಪಂಜುರ್ಳಿಯು ವರಾಹಾವತಾರವಾ ಯಿತು. ಭೂತದ ಗರಡಿಗಳಲ್ಲಿಯೂ ಕೊಟ್ಟಿಗೆಗಳಲ್ಲಿಯೂ ಸಾನಗಳ ಲ್ಲಿಯೂ ಅಬ್ರಾಹ್ಮಣರೇ ಪೂಜಾರಿಗಳಾದರೂ ಬ್ರಹ್ಮಸ್ಥಾನದಲ್ಲಿ ಬ್ರಾಹ್ಮಣರೇ ಪೂಜೆಮಾಡುವ ಪದ್ಧತಿಯಿದೆ. ಹೀಗೆ ಭೂತಾರಾಧನೆಯನ್ನೂ ವೈದಿಕ ಚೌಕಟ್ಟಿನಲ್ಲೇ ಅಡಗಿಸಿರುವುದು ಇಲ್ಲಿ ಕಾಣುತ್ತದೆ. ದೇಶಮಂಗಲದಲ್ಲಿ ರುವ ಕುಕ್ಷಿಶಾಸ್ತಾರ (ಕುಟ್ಟಿಜಾತ)ನ ಗುಡಿ, ಮಂಟಮೆಯ ಬಳಿಯಿರುವ ಪುತ್ತೂರು ಕೊಟ್ಟಿಗೆ ದೂಮಾವತಿ ದೈವದ ಗುಡಿ, ಮಾಯಪ್ಪಾಡಿ ಶಾಸ್ತಾರನ ಗುಡಿ, ಕಾನತ್ತೂರಿನ ದೈವಗಳ ಭಂಡಾರ, ಅಡೂರ ಹತ್ತಿರ ಕವಡಿಂಕಾನದ ಲೆಕ್ಕೇರಿಸಿ ದೈವದ ಗುಡಿ, ಕಾಟುಕುಕ್ಕೆ ಸುಬ್ರಹ್ಮಣ್ಯದ ಅರುಣಕುಂಜಮಾಡದಲ್ಲಿರುವ ಪಿಲಿ ಭೂತಸ್ಥಾನ, ಅಗಲ್ಪಾಡಿಯ

ಜಟಾಧಾರಿದೈವದ ಕೊಟ್ಟಿಗೆ, ಕುಡುಮ (ಧರ್ಮಸ್ಥಳ)ದ ಅಣ್ಣಪ್ಪಭೂತನ ಸಾನ ಮುಂತಾದುವು ಪ್ರಸಿದ್ಧವಾದ ಭೂತಾಲಯಗಳು. ಈ ದೈವಗಳು ತುಂಬ ಕಾರಣಿಕವುಳ್ಳವೆಂದು ಪ್ರತೀತಿ.

ಶೈವಸಂಪ್ರದಾಯ

ಪ್ರಾಚೀನವಾದ ನಾಗಪೂಜೆ, ಭೂತಾರಾಧನೆಗಳ ಮೇಲೆ ಬ್ರಾಹ್ಮಣರು ತಂದ ಶೈವ ಸಂಪ್ರದಾಯದ ಅಲೆ ಬೀಸಿದಾಗ ನಾಡಿನಲ್ಲಿ ಒಂದು ಸಮುಚ್ಚಯ ಧರ್ಮ ರೂಪ ತಳೆಯಿತು. ಆಲುಪ ಅರಸರು ಶೈವ ಪಕ್ಷಪಾತಿಗಳು. ಇವರ ಕಾರ್ಯದಲ್ಲಿ ಕೋಟ, ಪುತ್ತಿಗೆ, ಬ್ರಹ್ಮಾವರ, ನಿರುವಾರ, ಕೊಲ್ಲೂರು, ಗೋಕರ್ಣ ಮುಂತಾದ ಶೈವಕ್ಷೇತ್ರಗಳು ಬೆಳಕಿಗೆ ಬಂದವು. ವೀರಪಾಂಡ್ಯದೇವ ಆಲುಪೇಂದ್ರನ 'ಪಟ್ಟದ ಪಿರಿಯರಸಿ ಬಳ್ಳಮಹಾದೇವಿ'ಯು ಬಾರಕೂರಿನ 'ಸ್ಥಿರಸಿಂಹಾಸನ'ವನ್ನು ೧೨೭೭ರಲ್ಲಿ ಏರಿದಂದು ಉಡುಪಿ ತಾಲ್ಲೂಕಿನ ನೀಲಾರುವಾರದ ಭಗವತಿ ಮಹಿಷಾಸುರಮರ್ದಿನಿಗೆ ನೂರು ಹೊನ್ನು ದಾನಮಾಡಿದಳು ; ಅವಳ ಮಗ ನಾಗದೇವರಸನು ಬಸರೂರಿನ ನಖರೇಶ್ವರ ದೇವರಿಗೆ ನಂದವನವನ್ನು ಬಿಟ್ಟುಕೊಟ್ಟನು. ಈ ವಂಶದವರಿಂದ ಮಂಗಳೂರು ಕದರಿಯ ಮಂಜುನಾಥ, ಬಾರಕೂರು ಮಾಣಿಕಗೇರಿಯ ಸೋಮನಾಥ, ಉಡುಪಿ ತಾಲ್ಲೂಕು ಕೋಟದ ಮಹಾಲಿಂಗೇಶ್ವರ, ಬ್ರಹ್ಮಾವರದ ಮಹಾಲಿಂಗೇಶ್ವರ, ಮೂಡಬಿದ್ರೆಯ ದುರ್ಗಾದೇವಿ, ನೆಟ್ಟಣಿಗೆಯ ಮಹತೋಭಾರ ಮಹಾಲಿಂಗೇಶ್ವರ, ಅಗಲ್ವಾಡಿಯ ದುರ್ಗಾ ಪರಮೇಶ್ವರಿ, ಗೋಸಾಡದ ಮಹಿಷಮರ್ದಿನಿ, ದೇಲಂಪಾಡಿಯ ಮಹಾಲಿಂಗೇಶ್ವರ ಮುಂತಾದ ದೇವಾಲಯಗಳು ಊರ್ಜಿತವಾದುವು.

ತುಳುನಾಡಿನ ಸಪ್ತಕ್ಷೇತ್ರಗಳೂ ಶೈವಸ್ಥಳಗಳೇ. ಶಿವಬೆಳ್ಳಿ (ಈಗಿನ ಉಡುಪಿ)ಯ ಅನಂತೇಶ್ವರ, ಕುಂಭಾಸಿ (ಈಗಿನ ಕೋಟ)ಯ

ಕುಂಭೇಶ್ವರ, ಕುಮಾರಾದ್ರಿಯ (ಈಗಿನ ಸುಬ್ರಹ್ಮಣ್ಯದ) ಸುಬ್ರಹ್ಮಣ್ಯೇಶ್ವರ, ಧ್ವಜೇಶ್ವರ (ಈಗಿನ ಕೋಟೇಶ್ವರ)ದ ಕೋಟೇಶ್ವರ, ಕ್ರೋಡದ (ಕೋಡಂಗಿಯ) ಶಂಕರನಾರಾಯಣ ಲಿಂಗ, ಕೊಟಶೈಲದ (ಈಗಿನ ಕೊಲ್ಲೂರಿನ) ಮೂಕಾಂಬಿಕೆ, ಮತ್ತು ಗೋಕರ್ಣದ ಮಹಾಬಲೇಶ್ವರ ಇವುಪ ಸಪ್ತಕ್ಷೇತ್ರಗಳು. ಆಲುಪರ ರಾಜಧಾನಿಯಾದ ಬಾರಕೂರಿನಲ್ಲೇ 'ಕೋಟೆಯ ಕೇರಿಯ ಮೂಲಸ್ಥಾನ ಮಾರ್ಕಂಡೇಶ್ವರದ ಪಂಚಲಿಂಗೇಶ್ವರ ದೇವರಸನ್ನಿಧಿ'ಯಿದ್ದಿತು ; ಮೂಡುಕೇರಿಯಲ್ಲಿ ಸೋಮೇಶ್ವರ ದೇವಾಲಯವೂ ಮಣಿಗಾರಿಕೇರಿಯಲ್ಲಿ ಸೋಮನಾಥ ದೇವಾಲಯವೂ ಇದ್ದುವು. ಉಡುಪಿಯ ಅನಂತೇಶ್ವರ, ಬ್ರಹ್ಮಾವರದ ಮಹಾಲಿಂಗೇಶ್ವರ, ಕುಂದಾಪುರದ ಕುಂದೇಶ್ವರ, ಬಾರಕೂರಿನ ಪಂಚಲಿಂಗೇಶ್ವರ, ಕೋಟೇಶ್ವರದ ಕೋಟಿಲಿಂಗೇಶ್ವರ ಈ ಐದೂ ಪಾಂಡವರ ಪ್ರತಿಷ್ಠೆಯೆಂದು ಪ್ರತೀತಿ. 'ಶ್ರೀಮತು ದುರ್ವಾಸ ಮುನೀಂದ್ರವಂಶತಿಲಕ'ನೆನಿಸಿದ ಈಶಾನಶಿವನೆಂಬ ಕಾಳಾಮುಖ ಗುರುವಿನ 'ಸಂತತಿಸಂಜಾತರಪ್ಪ ಶ್ರೀಮತ್ ಗಗನಶಿವಾಚಾರ್ಯರಿಗೆ ದತ್ತಾಳ್ಪೇಂದ್ರ ಶ್ರೀಮಾರ ಒಡ್ಡಮದೇವೀಗಳು ಬಾರಹಕನ್ಯಾಪುರದ ಪಿರಿಯ ಅರಮನೆಯಲು ಹೊತ್ತುಕ್ತೇರಿಯ ಹಲರು ಮುಂತಾಗಿ ಕಾರ್ಕಳದ ಕದುರಬೆಳಂಬೆಟ್ಟಿನ ತಮ್ಮ ಬ್ರಹ್ಮದಾಯದ ವೃತ್ತಿ'ಯನ್ನು ಕೊಟ್ಟ ಶಾಸನ ಕ್ರಿಸ್ತಾಬ್ದ ೯೫೯ ರಲ್ಲಿ ಸಿದ್ಧವಾಯಿತು.

ಜೈನರ ಪ್ರಭಾವ

ಆಳುವರಸರು ಪಟ್ಟಿಪೊಂಬುಚ್ಚದ ಜೈನ ಶಾಂತರರೊಂದಿಗೆ ವೈವಾಹಿಕ ಅಸಂಬಂಧ ಬೆಳೆಸಲು ಆರಂಭಿಸಿದಾಗ ಇವರೂ ಜೈನ ಧರ್ಮದ ಪ್ರಭಾವಕ್ಕೆ ಒಳಗಾದರು. ಮುಮ್ಮಡಿ ಕುಲಶೇಖರದೇವನಂತೂ 'ಶ್ರೀಮತ್‌ಚಾರುಕೀರ್ತಿ ದಿವ್ಯ ಶ್ರೀಪಾದಪದ್ಮಾರಾಧಕ'ನೆಂದು ಪ್ರಶಸ್ತಿಯನ್ನು ಹೆಮ್ಮೆಯಿಂದ ಹೊತ್ತು ಮೂಡಬಿದ್ರೆಯ ಅಮ್ಮನವರ

ಬಸದಿಯನ್ನೂ ತುಳುನಾಡಿನ ಹಲವೆಡೆ ಜೈನ ಮಂದಿರಗಳನ್ನೂ ನಿರ್ಮಿಸಿದನು. ಕ್ರಿಸ್ತಾಬ್ಧ ಮೂರು ನಾಲ್ಕನೆಯ ಶತಮಾನಗಳಷ್ಟು ಹಿಂದೆಯೇ ಜೈನಧರ್ಮವು ತುಳುನಾಡನ್ನು ಮುಟ್ಟಿದ್ದಂತೆ ತಿಳಿದು ಬರುತ್ತದೆ. ನಾಡವರಾಗಿದ್ದ ಬಂಟರು ಬಹುಸಂಖ್ಯೆಯಲ್ಲಿ ಜೈನರಾದರು ; ಇಂದಿಗೂ ಬಂಟರಲ್ಲಿ ಹತ್ತು ಸಾವಿರಕ್ಕೂ ಮೀರಿ ಜೈನರಿದ್ದಾರಂತೆ. ಹೊಯ್ಸಳ ರಾಜರ ಕಾಲದಲ್ಲಿ ಭೈರಸ ಒಡೆಯರು ಮೈಸೂರು ಸೀಮೆಯ ಪಟ್ಟೆಹೊಂಬುಚ್ಚದಿಂದ ತುಳುನಾಡಿನ ಕಾರ್ಕಳಕ್ಕೆ ತಮ್ಮ ರಾಜಧಾನಿಯನ್ನು ಮಾರ್ಪಡಿಸಿಕೊಂಡಂದು ಅಲ್ಲಿ ಜೈನಧರ್ಮ ವಿಶೇಷವಾಗಿ ಬೆಳೆಯತೊಡಗಿತು. ಇದು ಮಧ್ವಾಚಾರ್ಯರ ಕಾಲಕ್ಕೆ ಸ್ವಲ್ಪ ಮುಂಚೆ ಎನ್ನಬಹುದು. ತುಳುನಾಡಿನಲ್ಲಿ ಒಟ್ಟು ೧೮೦ ಜೈನ ಬಸದಿಗಳಿವೆಯೆಂದು ಹೇಳುತ್ತಾರೆ. ಮೂಡಬಿದ್ರೆ, ಕಾರ್ಕಳ, ಬಂಟವಾಳ ಹಾಡುವಳ್ಳಿ, ಗೇರುಸೊಪ್ಪೆ, ವೇಣೂರು, ಮೂಲ್ಕಿ, ಹೊಸಂಗಡಿ, ನಂದಾವರ, ಉಲ್ಲಾಳ, ಶ್ರೀರಾಡಿ, ಪಂಜ, ಕನ್ನರಪಾಡಿ ಇವೆಲ್ಲ ಜೈನರ ಮುಖ್ಯಸ್ಥಳಗಳೇ. ಹದಿನೆಂಟು ಬಸದಿಗಳೂ ಧವಳಾ, ಜಯಧವಳಾ ಮುಂತಾದ ದಿಗಂಬರಸಿದ್ಧಾಂತ ಗ್ರಂಥಗಳೂ ಇರುವುದರಿಂದ ಮೂಡಬಿದ್ರೆಯನ್ನು ಜೈನಕಾಶಿಯೆಂದೇ ವ್ಯವಹರಿಸುತ್ತಾರೆ. ಮಂಜೇಶ್ವರ ಗೋವಿಂದಪೈಗಳು ತುಳುನಾಡಿನಲ್ಲಿ ಜೈನಧರ್ಮದ ಉಗಮವನ್ನು ಕ್ರಿಸ್ತಾಬ್ಧ ನಾಲ್ಕನೆಯ ಶತಮಾನದಷ್ಟು ಹಿಂದಕ್ಕೆ ನೂಕಿದರೆ ಸಾಲೆತೂರ್ರರು ಒಂಬತ್ತನೆಯ ಶತಮಾನದ ನಂತರವೇ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಇದು ಹೇಗಿದ್ದರೂ ಮಧ್ವಾಚಾರ್ಯರ ಕಾಲಕ್ಕೆ ತುಳುನಾಡಿನಲ್ಲೆಲ್ಲ ಜೈನಧರ್ಮವು ಪ್ರಬಲವಾಗಿದ್ದಿತೆನ್ನುವುದರಲ್ಲಿ ಸಂಶಯವಿಲ್ಲ. ಉಡುಪಿಯಲ್ಲಿಯೇ ಅನಂತೇಶ್ವರ ಮತ್ತು ಚಂದ್ರೇಶ್ವರ ದೇವಾಲಯ

ಗಳು ಮೊದಲಿಗೆ ಅನಂತನಾಥ, ಚಂದ್ರನಾಥ ತೀರ್ಥಂಕರರ ಬಸದಿಗಳಾಗಿದ್ದುವೆಂದು ತಿಳಿದು ಬರುತ್ತದೆ.

ಮಂಗಳಾದೇವಿ

ಆಲುಪರಾಜರಲ್ಲಿ ಪ್ರಸಿದ್ಧನಾದ ಇಮ್ಮಡಿ ಕುಂದವರ್ಮನು ನಾಥಪಂಥಕ್ಕೆ ಪರಿವರ್ತಿತನಾಗಿದ್ದನಂತೆ. ಒಂಬತ್ತು-ಹತ್ತನೆಯ ಶತಮಾನಗಳಲ್ಲಿ ಪ್ರವರ್ತಿತವಾದ ಈ ಪಂಥಕ್ಕೆ ಆಚಾರ್ಯಪುರುಷನೆನಿಸಿದ ಮತ್ಸ್ಯೇಂದ್ರನಾಥನು (ಸುಮಾರು ೯೫೦) ಕೇರಳದೇಶಕ್ಕೆ ಬಂದಿದ್ದನೆಂದೂ, ಅವನ ಧರ್ಮಕ್ಕೆ ಮನಸೋತ ಪ್ರೇಮಳೆಯೆಂಬ ಕೇರಳ ರಾಜಪುತ್ರಿ ಅವನೊಂದಿಗೆ ನಾಸಿಕಕ್ಕೆ ಹೊರಟಳೆಂದೂ, ದಾರಿಯಲ್ಲಿ ಈಗಿನ ಮಂಗಲೂರಿನಲ್ಲಿರುವ ಬೋಲಾರು ಬಳಿ ಗೋರಿಯ ದಂಡೆ ಎಂಬಲ್ಲಿ ತಂಗಿದ್ದಾಗ ಅಲ್ಲಿನ ನಿಸರ್ಗಸೌಂದರ್ಯವನ್ನು ಮೆಚ್ಚಿಕೊಂಡು ಅಲ್ಲಿಯೇ ಇರಲು ಮನಸ್ಸು ಮಾಡಿದಳೆಂದೂ, ಕುಂದವರ್ಮ ಆಲುಪೇಂದ್ರನು ಆಕೆಗಾಗಿ ಅಲ್ಲಿಯೇ ಆಲಯವೊಂದನ್ನು ಕಟ್ಟಿಸಿಕೊಟ್ಟನೆಂದೂ ಕಥೆಯಿದೆ. ಪ್ರೇಮಳೆಗೆ ಮಂಗಳಾದೇವಿಯೆಂದೂ ಹೆಸರಿದ್ದಿತು. ಈ ಮಂಗಳಾದೇವಿಯ ಆಲಯ ನಿರ್ಮಾಣವಾದುದು ಕ್ರಿಸ್ತಾಬ್ಧ ೯೬೮ರಲ್ಲಿ. ಮಂಗಳೂರಿನ ಹೆಸರಿಗೆ ಈಕೆಯೇ ಕಾರಣ. ಈಕೆಯೊಂದಿಗೆ ಮಂಗಳೂರಿನ ಕದರಿಯಲ್ಲಿ ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥ ಇಬ್ಬರೂ ತಪಸ್ಸಿಗೆ ನಿಂತರೆಂದು ಪ್ರತೀತಿ. ಅದು ಇಂದಿಗೂ ಜೋಗಿಮಠವೆಂದು ಪ್ರಸಿದ್ಧವಾಗಿದೆ. ಒಂದು ಕಾಲಕ್ಕೆ ಈ ಪ್ರದೇಶದಲ್ಲಿ ಹನ್ನೆರಡು ಜೋಗಿ ಮಠಗಳಿದ್ದುವಂತೆ. ಕದರಿಯ ಮಠವಲ್ಲದೆ ಕುಂಬಳೆಯ ಬಲಿ ಪೋಶೋದಿಗುಂಪೆ ಎಂಬಲ್ಲಿಯೂ, ವಿಟ್ಲದ ಜೋಗಿಮಠದಲ್ಲಿಯೂ ಕೋಟೇಶ್ವರದಲ್ಲಿಯೂ ಸೋದೆಯಲ್ಲಿಯೂ ಜೋಗಿಗಳು ಇರುತ್ತಿದ್ದರೆನ್ನಲು ಅವರ ಅಗ್ನಿಕುಂಡಗಳ

ಅವಶೇಷಗಳಿವೆ. ಈಗಲೂ ಕದರಿಯ ಮಠವು ಜೋಗಿಗಳ ಆಡಳಿತದಲ್ಲಿಯೇ ಇದೆ.

ಬೌದ್ಧರ ದೇವಾಲಯಗಳು

ಇಲ್ಲಿನ ಮಂಜುನಾಥನಗುಡಿಯಲ್ಲಿ ಲೋಕೇಶ್ವರನ ಕಾಂಸ್ಯ ಮೂರ್ತಿ ಯೊಂದಿದೆ ; ಜಟಾಧಾರಿಯಾದ ಈ ಮೂರ್ತಿಯ ಶಿರೋಭಾಗದಲ್ಲಿ ಮತ್ಸ್ಯೇಂದ್ರನಾಥನ (ದಿಟವಾಗಿ ಧ್ಯಾನಿಬುದ್ಧನ) ಬಿಂಬವೊಂದನ್ನು ಕಡೆದಿರುವುದನ್ನು ಕಾಣಬಹುದು. ಪ್ರಭಾವಳಿಯಲ್ಲೂ ಇದೇ ರೀತಿಯ ಬದ್ಧಪದ್ಮಾಸನಸ್ಥಯೋಗಿಯ ಬಿಂಬವಿದೆ. ಲೋಕೇಶ್ವರ ನೇನೋ ಅವಲೋಕಿತೇಶ್ವರನೇ, ಬೌದ್ಧಧರ್ಮದ ದೇವತೆಯೇ. ಈ ವಿಗ್ರಹವಿರುವ ಕದರಿಯನ್ನು ಆ ವಿಗ್ರಹದ ಪಾದಪೀಠದಲ್ಲೇ ಮೂಡಿಸಿರುವ ಶಾಸನ 'ವಿಹಾರ'ವೆಂದು ವ್ಯವಹರಿಸುತ್ತದೆ (ಶ್ರೀಮತ್ ಕದರಿಕಾನಾಮ್ನಿ ವಿಹಾರೇ ಸುಮನೋಹರೇ). ಆದರೆ ಅದನ್ನು ೧೦೬೮ರ ಮಾಘ ಶುದ್ಧ ನವಮಿಯಂದು ಪ್ರತಿಷ್ಠೆ ಮಾಡಿದ ಕುಂದವರ್ಮ — ಆಳುಪೇಂದ್ರನನ್ನು ಇದೇ ಶಾಸನವು ಶೈವನೆಂದು ನಿರ್ದೇಶಿಸುತ್ತದೆ (ಪಾದಾರವಿಂದ ಭ್ರಮರೋ ಬಾಲಚಂದ್ರಶಿಖಾಮಣೇಃ) ಎಂದರೆ ಬೌದ್ಧದೇಗುಲದ ಅವಶೇಷದ ಮೇಲೆ ತಾಂತ್ರಿಕ ಶೈವಪಕ್ಷಪಾತಿಯಾದ ನಾಥ ಪಂಥವು ಬೆಳೆಯಿತೆನ್ನಬಹುದು.

ಕದರಿಯಲ್ಲೇ ಮಂಜುಶ್ರೀ — ಅವಲೋಕಿತೇಶ್ವರರ ಮೂರ್ತಿಗಳು ಉಪಲಬ್ಧವಾಗಿವೆ. ಮಹಾಯಾನ ಬೌದ್ಧಪಂಥ ಇಲ್ಲಿಗೆ ಬಂದಿದ್ದಿತು. ಕದರಿಯ ಮಂಜುನಾಥನು ಬೌದ್ಧರ ಮಂಜುಶ್ರೀ ಬೋಧಿ ಸತ್ತ್ವನ ರೂಪಾಂತರವೆಂಬುದರಲ್ಲಿ ಸಂಶಯವಿಲ್ಲ. ಬೌದ್ಧರು ತುಳುನಾಡಿನಲ್ಲಿ ಪ್ರಭಾವಶಾಲಿಗಳಾಗಿದ್ದರೆಂದೂ ಅವರ ನಿಗ್ರಹಕ್ಕೆಂದು

ಶಂಕರಾಚಾರ್ಯರು ಅವತರಿಸಿದರೆಂದೂ 'ಮಣಿಮಂಜರಿ'ಯಿಂದ ಧ್ವನಿತವಾಗುತ್ತದೆ.

ಶಂಕರಾಚಾರ್ಯರು

ಎಂಟನೆಯ ಶತಮಾನದಲ್ಲಿ ಪ್ರಖ್ಯಾತ ದಾರ್ಶನಿಕರಾಗಿ ಮೆರೆದ ಶಂಕರಾಚಾರ್ಯರು ಪರಶುರಾಮಕ್ಷೇತ್ರದವರೇ ; ಸಪ್ತಕೊಂಕಣಗಳಲ್ಲಿ ಒಂದಾದ ಕೇರಳದವರು ; ತುಳುನಾಡಿನ ನೆರೆನಾಡವರು. ಅವರು ತುಳುನಾಡಿನ ಕ್ಷೇತ್ರಗಳಲ್ಲೆಲ್ಲ ಓಡಾಡಿದ್ದರೆಂದು ಪ್ರತೀತಿಯಿದೆ. ಕೊಲ್ಲೂರಿನಲ್ಲಿ ಮೂಲಸ್ಥಾನದ ಲಿಂಗದ ಹಿಂಬದಿಯಲ್ಲಿ ಶ್ರೀ ಚಕ್ರಯಂತ್ರವನ್ನು ಬರೆದು ಅದರ ಮೇಲೆ ಮೂಕಾಂಬಿಕೆಯ ಮೂರ್ತಿಯನ್ನು ಪ್ರತಿಷ್ಠ ಮಾಡಿದವರು ಶಂಕರಾಚಾರ್ಯರೇ. ಕೊಲ್ಲೂರಿನ ಬಳಿ ಚಂದ್ರಮೌಳೇಶ್ವರ ದೇವಾಲಯವೊಂದನ್ನೂ ಶಂಕರಾಚಾರ್ಯರೇ, ನಿರ್ಮಿಸಿದರೆಂದು ಹೇಳುತ್ತಾರೆ. 'ಗ್ರಾಮಪದ್ಧತಿ'ಯು ಶಂಕರಾಚಾರ್ಯರಿಗೂ ಮಂಡನಮಿಶ್ರರಿಗೂ ವಾಕ್ಯಾರ್ಥ ನಡೆದುದನ್ನು ಉಲ್ಲೇಖಿಸುತ್ತದೆ. ಮಯೂರವರ್ಮನು ಮಾರ್ಕಂಡೇಯ ಮುನಿಯ ಆದೇಶದಂತೆ ತುಳುನಾಡಿನಲ್ಲೆಲ್ಲ ದೇವಾಲಯಗಳನ್ನು ಕಟ್ಟಿಸಿದಮೇಲೆ ಶಾಂಕರ ಸಂಪ್ರದಾಯದಂತೆ ಅಲ್ಲಿನ ಪೂಜಾವಿಧಾನಗಳು ನಡೆಯುವಂತೆ ವ್ಯವಸ್ಥೆ ಮಾಡಿದನೆಂದೂ ವಿವರವಿದೆ. ಇಲ್ಲಿನ ಎಡನೀರು ಮಠದ ಮೂಲ ಪುರುಷರು ಶಂಕರಾಚಾರ್ಯರ ಸಾಕ್ಷಾತ್ ಶಿಷ್ಯರಾದ ತೋಟಕಾಚಾರ್ಯರೆಂದು ಹೇಳುತ್ತಾರೆ. ಅವರ ಇನ್ನೊಬ್ಬ ಸಾಕ್ಷಾತ್ ಶಿಷ್ಯರಾದ ಹಸ್ತಾಮಲಕರು ತುಳುನಾಡಿಗೆ ಬಂದು ಉಡುಪಿಯ ಕೃಷ್ಣನನ್ನು ಪ್ರತಿಷ್ಠೆ ಮಾಡಿದರೆಂದು ಆನಂದಗಿರಿಯ 'ಶಂಕರದಿಗ್ವಿಜಯ' ಹೇಳುತ್ತದೆ.

ಹಸ್ತಾಮಲಕಸ್ತು ಭೂಮಧ್ಯಾತ್ ಪಶ್ಚಿಮಖಂಡ ದಿಗ್ವಿಜಯಮ್ ಕೃತ್ವಾ... ರಜತಪೀಠಾದಿಸ್ಥಲೇಷು ಕೃಷ್ಣಾದಿ ದೇವತಾಪ್ರತಿಮಾಂ ಕೃತ್ವಾ... . ಉಡುಪಿಯಲ್ಲಿ ಅನಂತನಾಥ ಜಿನನ ಬಸದಿಯನ್ನು ಅನಂತೇಶ್ವರಾಲಯ ವನ್ನಾಗಿ ಮಾರ್ಪಡಿಸಿದವರು ಶಂಕರಾಚಾರ್ಯರೇ ಎಂದು ತಿಳಿದು ಬರುತ್ತದೆ. (ಪಿ. ಗುರುರಾಜಭಟ್ಟರ 'ತುಳುನಾಡು', ಪು. ೧೬೩) ಹೀಗೆ ತುಳುನಾಡಿನಲ್ಲಿ ಶಂಕರಾಚಾರ್ಯರ ಪ್ರಭಾವವು ವಿಸ್ತೃತವಾಗಿದ್ದಿತು.

ಮುಸಲ್ಮಾನರು-ಕ್ರೈಸ್ತರು

ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲೇ ಅರಬ್ಬಿ ಜನ ವ್ಯಾಪಾರಕ್ಕೆಂದು ಕಾರವಾರಕ್ಕೆ (ಕಡೇವಾಡಿಗೆ) ಬಂದಿದ್ದರು. ಇವರ ಪ್ರಭಾವ ಜನದ ಮೇಲೆ ಬಿದ್ದುದು 'ಬೊಬ್ಬೆರ್ಯೆಪಾಡ್ದನ'ದಿಂದ ತಿಳಿಯುತ್ತದೆ. ಸಮುದ್ರತೀರದ 'ಮುರಡೇಶ್ವರ'ವೆಂಬ ಗ್ರಾಮದ ಮಾಪ್ಳ ನಾವಿಕನೊಬ್ಬನು ಬೊಬ್ಬರ್ಯೆಯೆಂಬ ಭೂತವಾದ ಕಥೆಯಿದು. ಮಾಲಿಕ್ ಮೆದಿನ ಎಂಬ ವ್ಯಾಪಾರಿ ತನ್ನೊಂದಿಗೆ ಹಲವು ಮುಸಲ್ಮಾನ ಗುರುಗಳನ್ನೂ ಇಲ್ಲಿಗೆ ಕರೆತಂದನಂತೆ. ಒಂಬತ್ತನೆಯ ಶತಮಾನದ ಸುಮಾರಿಗೆ ಕಾರವಾರದ ಸದಾಶಿವಗಡದಲ್ಲಿ ಷಾ ಕರೀಮುದ್ದೀನ್ ಎಂಬ ಹೆಸರಾಂತ ಸಂತನು ವಾಸಿಸುತ್ತಿದ್ದ ಉಲ್ಲೇಖವಿದೆ. ಮುಸಲ್ಮಾನ ರಂತೆಯೇ ಕ್ರೈಸ್ತರೂ ತುಂಬ ಹಿಂದೆಯೇ ಈ ಕಡೆ ವಲಸೆ ಬಂದಿದ್ದರು. ಕ್ರಿಸ್ತಾಬ್ಧ ೫೨೨ರಲ್ಲಿ ದಕ್ಷಿಣ ಭಾರತದಲ್ಲಿ ತಿರುಗಾಡಿದ ಅಲೆಗ್ಸಾಂಡ್ರಿಯದ ಕಾಸ್ಮೊಸ್ ಇಂಡಿಕೊ ಪ್ಲಯ್‌ಸ್ಟಸ್ ಎಂಬಾತನು ತನ್ನ 'ಟೋಪೋಗ್ರಾಫಿಕ ಕ್ರಿಸ್ಟಿಯಾನ' ಎಂಬ ಗ್ರಂಥದಲ್ಲಿ ಕ್ವಿಲಾನ್ ನಗರದಲ್ಲಿ ನೆಸ್ಟೋರಿಯನ್ ಚರ್ಚೊಂದನ್ನು ಕಂಡೆನೆಂದು ಬರೆದಿದ್ದಾನೆ. ಏಳೆಂಟನೆಯ ಶತಮಾನದ ಸುಮಾರಿಗೇ ಪಶ್ಚಿಮ ತೀರದಲ್ಲೆಲ್ಲ ಕ್ರೈಸ್ತಧರ್ಮ ಹರಡಿದ್ದಿತೆಂಬುದು ನಿರ್ವಿವಾದ. ಕ್ರಿಸ್ತಾಬ್ಧ ೭೭೪ರಲ್ಲಿ

ಮಲಬಾರಿನ ಕ್ರಿಸ್ತಜನರಿಗಾಗಿ ಮಾಡಿದ ತಾಮರದಾನಪತ್ರಗಳು ದೊರೆತಿವೆ. ೧೧೯೩ರಲ್ಲಿ ಇಲ್ಲಿಗೆ ಬಂದಿದ್ದ ಮಾರ್ಕೋಪೋಲೋ ಎಂಬ ಯಾತ್ರಿಕನು ಸೇಂಟ್ ಥಾಮಸ್ ದಿಬ್ಬದ ಮೇಲೆ ಕ್ರೈಸ್ತಜನರ ಬೀಡೊಂದನ್ನು ಕಂಡಿದ್ದನು. ಹದಿನೈದನೆಯ ಶತಮಾನದ ಸುಮಾರಿಗೆ ಗೋವೆಯ ಆರ್ಚ್‌ಬಿಷಪ್‌ನ ಆಡಳಿತಕ್ಕೆ ತುಳುನಾಡಿನ ಇಪ್ಪತ್ತೇಳು ಚರ್ಚುಗಳು ಸೇರಿದ್ದುವಂತೆ. ಈ ಪ್ರದೇಶವನ್ನು ಆಕ್ರಮಿಸಿಕೊಂಡ ಇಕ್ಕೇರಿನಾಯಕರು ಎಂಬತ್ತು ಸಾವಿರ ಮಂದಿ ಕೊಂಕಣದ ಕ್ರೈಸ್ತರನ್ನು ತುಳುನಾಡಿಗೆ ಕರೆಸಿ ಅವರಿಗೆ ವಸತಿ ಕಲ್ಪಿಸಿಕೊಟ್ಟಂತೆ ತಿಳಿದು ಬರುತ್ತದೆ.

ಹೀಗೆ ತುಳುನಾಡಿನಲ್ಲಿ ವಿವಿಧ ಧರ್ಮಗಳ ಸಮಾವೇಶವಿದ್ದರೂ ಪ್ರಾಚೀನವಾದ ಭೂತಾರಾಧನೆ — ನಾಗಪೂಜೆಗಳು ಬಲವಾಗಿ ಬೇರೂರಿ ನಿಂತಿವೆ. ತಮ್ಮ ಸಂಪರ್ಕಕ್ಕೆ ಬಂದ ಧರ್ಮಗಳನ್ನು ತಮ್ಮ ಗೋತ್ರಕ್ಕೇ ಪರಿವರ್ತಿಸಿಕೊಳ್ಳುವ ಶಕ್ತಿಯು ಈ ಪ್ರಾಚೀನ ಸಂಪ್ರದಾಯಕ್ಕಿದ್ದಿತು. ಶಕ್ತಿಪೂಜೆಯ ದುರ್ಗಿಯು ದೂಮಾವತಿ–ದುಗ್ಗಿಲ್ಲಾಯ ಭೂತಗಳಾದುವು ; ಈಶ್ವರನು ಬೀರದೈವವಾದನು. ಭಾಗವತಪಂಥದ ನರಸಿಂಹನು ವಿಷ್ಣುಮೂರ್ತಿಭೂತನಾದನು ; ಅರಬ್ಬೀ ಜನರ ಪ್ರಭಾವವು ಬೊಬ್ಬರ್ಯೆಭೂತದಲ್ಲಿ ಪರ್ಯವಸಾನವಾಯಿತು. ಮನೆಮನೆಗಳಲ್ಲಿ ಕಾವು (ಆಲೆಡೆ)ಗಳು ಉಳಿದೇ ಉಳಿದುವು ; ದೈವಸ್ಥಾನಗಳು ಇಂದಿಗೂ ನಿಂತಿವೆ. ಘಟ್ಟದಿಂದ ಬಂದ ಸುಬ್ರಹ್ಮಣ್ಯನು ಸರ್ಪರೂಪದಲ್ಲೇ ನಿಲ್ಲಬೇಕಾಯಿತು. ಬಿಲ್ವ ಮಂಗಲ ಋಷಿಯಂಥವನು ಅನಂತಪುರದಲ್ಲಿ ವೀರಭದ್ರನ ನೆಲೆಯನ್ನಾಗಲೀ, ಲೆಕ್ಕೇಸಿರಿಯ ಕಟ್ಟೆಯನ್ನಾಗಲೀ, ಮೂವತ್ತೊಂಬತ್ತು ದೈವಗಳ ಭಂಡಾರವನ್ನಾಗಲೀ, ತಪ್ಪಿಸಲಾಗಲಿಲ್ಲ. (ಕಣ್ವಪುರಕ್ಕೆ ಮೂರುಮೈಲಿ ಪೂರ್ವಕ್ಕೆ ನೀರಿನ ನಡುವೆ ಇರುವ ಸುಂದರ ದೇವಳ ಇದು).

೩. ಕುಂಬಳೆಸೀಮೆ

ತುಳುನಾಡಿನ ತೆಂಕುಗಡಿಯಲ್ಲಿ ಉತ್ತರಕ್ಕೆ ಸೀರೆಹೊಳೆ, ದಕ್ಷಿಣಕ್ಕೆ ಪಯಸ್ವಿನೀ ನದಿ, ಪಶ್ಚಿಮಕ್ಕೆ ಸಮುದ್ರ, ಪೂರ್ವಕ್ಕೆ ಅಡೂರು— ಈ ಗಡಿಗಳ ನಡುವೆ ಇರುವ ಪ್ರದೇಶವನ್ನು ಕುಂಬಳೆಸೀಮೆಯೆಂದು ವ್ಯವಹರಿಸುತ್ತಿದ್ದರು. ಬಾರಕೂರಿನ ದ್ವಾದಶರಾಜಪುತ್ರರಲ್ಲಿ ಒಬ್ಬನ ಸಂತತಿಯವರಾದ ಕುಂಬಳೆ ಅರಸರು ಕದಂಬ ವಂಶದ ಮಯೂರವರ್ಮನ ಅನುವಂಶೀಕರೆಂದು ಕರೆದುಕೊಂಡು 'ಶ್ರೀಮತ್— ಬನವಸೆಪುರವರಾಧೀಶ್ವರ — ಸೂರ್ಯಕುಲ ತಿಲಕ — ಸಾಹಸದ ಸಂಜಯ — ಸತ್ಯರತ್ನಾಕರ — ಸರಸ್ವತಿ — ಕರ್ಣಕುಂಡಲಾಭರಣ — ಶ್ರೀಮದನೇಶ್ವರ ಪಾದ ಪದ್ಮಾರಾಧಕ — ಶ್ರೀ ವೀರಪ್ರತಾಪ — ಕುಂಬಳೆ ಧರ್ಮಸಿಂಹಾಸನದ ಕವಿಸಿಂಹ — ಅರಸ'ರೆಂಬ ಪ್ರಶಸ್ತಿಯನ್ನು ಹೊತ್ತಿದ್ದರು. ಕದಂಬಮಯೂರವರ್ಮನ ಮಗ ಚಿತ್ರಾಂಗದನೆಂಬ ರಾಜನು ತನ್ನ ಮಗಳು ಸುಶೀಲೆಗೆ ನೇತ್ರಾವತಿಯಿಂದ ಪಯಸ್ವಿನೀ ನದಿಯವರೆಗೆ ಮೂವತ್ತೆರಡು ಗ್ರಾಮಗಳನ್ನು ಬಳುವಳಿಯಾಗಿ ಕೊಟ್ಟನೆಂದೂ ಈ ಸುಶೀಲೆಯು ಮುಂದೆ ಕುಂಬಳೆ ಸೀಮೆಯೆನಿಸಿಕೊಂಡ, ಆ ಪ್ರದೇಶಕ್ಕೆ ರಾಣಿಯಾದಳೆಂದೂ ಐತಿಹ್ಯವಿದೆ. ಸುಶೀಲಾರಾಜ್ಞಿಯ ಗಂಡ ಬ್ರಾಹ್ಮಣನೊಬ್ಬನು. ಇವರ ಮಗನೇ ಪ್ರಖ್ಯಾತನಾದ ಜಯಸಿಂಹರಾಜ. ಪಾಂಡ್ಯರಾಜನನ್ನೂ ಸಮರದಲ್ಲಿ ಸೆಣಸಿದ ಈ ರಾಜನು ವೇದಾಭ್ಯಾಸ — ಶಸ್ತ್ರಾಭ್ಯಾಸ ಎರಡರಲ್ಲೂ ನಿಪುಣನಾಗಿದ್ದನು. ಸುಬ್ರಹ್ಮಣ್ಯಕ್ಷೇತ್ರಕ್ಕೆ ಬಂದು ಅಲ್ಲಿ ಆದಿ ಗುಹೆಯ ಬಿಲದ್ವಾರದಲ್ಲಿ ಅಂಗುಷ್ಠದ ಮೇಲೆ ಒಂದು ವರ್ಷಕಾಲ ತಪಸ್ಸನ್ನು ಮಾಡಿ ಕುಮಾರಸ್ವಾಮಿಯನ್ನು ಒಲಿಸಿಕೊಂಡಿದ್ದ

ನಂತೆ. ಬೇಳಗ್ರಾಮದ ಕುಮಾರಮಂಗಲದ ದೇವರು ಅವನ ನಿತ್ಯಾರ್ಚನೆಯಲ್ಲಿದ್ದಿತು. ಮಧ್ವಾಚಾರ್ಯರ ಕಾಲದಲ್ಲಿದ್ದವನು ಈ ರಾಜನ ವಂಶಿಕನಾದ ಇಮ್ಮಡಿ ಜಯಸಿಂಹನೆಂದು ತಿಳಿದುಬರುತ್ತದೆ. ಇವರ ಸಂತತಿಯಲ್ಲಿ ರಾಮಂತರಸು, ಬೋಳದೇಸಿಂಗರಾಯ, ಪ್ರೌಢರಾಯ, ವೀರನರಸಿಂಹರಾಯ ಮುಂತಾದ ಎಂಟೊಂಬತ್ತು ಜನ ಅರಸರ ಹೆಸರುಗಳು ಉಳಿದುಬಂದಿವೆ. ಇವರ ರಾಜ್ಯವು ಕುಂಬಳೆ, ಆಡೂರು, ಪೆರಡಾಲ, ಅಂಗಡಿ ಮೊಗರು, ಕಾಸರಗೋಡು, ಮೊಗರಾಳ ಮಾಗಣೆಗಳನ್ನೊಳಗೊಂಡಿದ್ದಿತು. ಮಯೂರವರ್ಮನು ಸುಶೀಲಾರಾಜ್ಞಿಗಾಗಿ ಕಟ್ಟಿಸಿದ ಕೊಟ್ಟೇಕಾರವೆಂಬ ಕೋಟೆ ಕುಂಬಳೆಗೆ ಒಂದು ಮೈಲಿಯಷ್ಟು ಪೂರ್ವದಲ್ಲಿ ಇಂದಿಗೂ ಭಗ್ನಾವಶೇಷವಾಗಿ ನಿಂತಿದೆ. ಈ ಅರಸೊತ್ತಿಗೆಯವರು ಅಳಿಯಸಂತಾನ ಕಟ್ಟನ್ನು ಪಾಲಿಸುತ್ತಿದ್ದರು ; ಕೇರಳದೊಂದಿಗೆ ವಿಶೇಷವಾದ ಸಂಬಂಧವನ್ನು ಬೆಳೆಸಿಕೊಂಡಿದ್ದರು. ಕುಂಬಳೆಯಲ್ಲಿ ಆಳುತ್ತಿದ್ದ ಅರಸರು ಹದಿನೇಳನೆಯ ಶತಮಾನದ ಸುಮಾರಿಗೆ ಇಕ್ಕೇರಿ ನಾಯಕರ ಹಾವಳಿಯಿಂದಾಗಿ ಕುಂಬಳೆಯನ್ನು ಬಿಟ್ಟು ಮಾಯಾಪ್ಪಾಡಿಗೆ ಬಂದು ನೆಲೆಸಿದರು ; ಕೃಷ್ಣರಾಯಕವಿಸಿಂಹರಸನ ಕಾಲದಲ್ಲಿ ನಡೆದ ಮಾರ್ಪಾಡು ಅದು. ಇಂದಿಗೆ ಈ ಅರಸೊತ್ತಿಗೆ ಅಳಿದು ಆ ವಂಶೀಕರು ಮಾಯಪ್ಪಾಡಿ, ಬೇಳ, ಪೆರಡಾಲಗಳಲ್ಲಿ ಉಳಿದುಕೊಂಡಿದ್ದಾರೆ. ಕುಂಬಳೆಯು ಇಂದು ಐದಾರು ಸಾವಿರ ಜನರಿರುವ ಸಣ್ಣಹಳ್ಳಿ ; ಕೊಯಿಪಾಡಿ ಹೋಬಳಿ ಎನಿಸಿಕೊಳ್ಳುತ್ತದೆ.

ಕುಂಬಳೆಸೀಮೆಯಲ್ಲಿ ಆಡೂರು ಮಹಾಲಿಂಗೇಶ್ವರ, ಮಧೂರು ಶ್ರೀಮದನಂತೇಶ್ವರ — ಸಿದ್ಧಿವಿನಾಯಕ (ಮೂಡಪ್ಪ), ಕಾವು (ಮುಜಂಗಾವು) ಪಾರ್ಥಸಾರಥಿ, ಕಣ್ವಪುರದ (ಕಣಿಯೂರಿನ) ಗೋಪಾಲಕೃಷ್ಣ ಇವು ಪ್ರಸಿದ್ಧ ದೇವರುಗಳು. ಈ ಸೀಮೆಯ ದೈವಗಳ

ಮಾತುಕಟ್ಟಿನಲ್ಲಿ ''ಆಡೂರು–ಮಧೂರು–ಕಾವು–ಕಣಿಯಾರ'' ಎಂದು ಹೇಳುತ್ತಾರೆ. ಕಣ್ವಪುರದ ಬಾಲಗೋಪಾಲ ಕೃಷ್ಣಮೂರ್ತಿಯನ್ನು ಕಣ್ವ ಋಷಿಗಳು ಪ್ರತಿಷ್ಠೆ ಮಾಡಿದರೆಂದು ಪ್ರತೀತಿಯಿದೆ. ತಾವು ಕುಂಭದಿಂದ ದೇವರಿಗೆ ಅಭಿಷೇಕಮಾಡಲು ಅದು ಅಕ್ಷಯವಾಗಿ ಹೊಳೆಯಾಗಿ ಹರಿಯಿತಂತೆ ; ಈ ಕಾರಣದಿಂದಲೇ ಆ ಸೀಮೆಗೆ ಕುಂಬ — ಹೊಳೆ (ಕುಂಬಳೆ) ಎಂಬ ಹೆಸರು ಬಿದ್ದಿತೆಂದು ಹೇಳುತ್ತಾರೆ. ಕಣ್ವಪುರದ ಗೋಪಾಲಕೃಷ್ಣನು ಕುಂಬಳೆ ಅರಸರಿಗೆ ಮನೆದೇವರು. ಪೈಕ, ಬೆದರಡ್ಕ, ಅಂಬಲಕ್ಕ ಮತ್ತು ಪುತ್ತಿಗೆ ಈ ಸ್ಥಳಗಳಲ್ಲಿರುವ ಭೂತಾಲಯಗಳು ಕುಂಬಳೆಸೀಮೆಯಲ್ಲೇ ಪ್ರಸಿದ್ಧವಾದುವು. ವಿಷ್ಣುಮಂಗಲ, ಕುಮಾರ ಮಂಗಲ, ಶಿವಮಂಗಲಗಳೆಂಬ ಕ್ಷೇತ್ರಗಳೂ ಇವೆ. ಮಹಾವಿಷ್ಣುವಿನ ದೇವಾಲಯವಿರುವ ವಿಷ್ಣುಮಂಗಲದಲ್ಲಿ ಮಧ್ವಾಚಾರ್ಯರು ವಾಸ ಮಾಡಿದ್ದರು ; ಅಲ್ಲಿಯೇ, ಕೂಡಲು ಎಂಬಲ್ಲಿ, ಅವರಿಗೂ ತ್ರಿವಿಕ್ರಮ ಪಂಡಿತಾಚಾರ್ಯರಿಗೂ ವಾಕ್ಯಾರ್ಥ ನಡೆಯಿತು. ಕಾಸರಗೋಡಿಗೆ ಎರಡು ಮೈಲಿ ದೂರದಲ್ಲಿರುವ ಹಳ್ಳಿ ಇದು. ಕುಮಾರಮಂಗಲ (ಬೇಳ)ದ ಬಳಿಯಿರುವ ಕುಕ್ಕಂಗೋಡ್ಲು ಸುಬ್ರಹ್ಮಣ್ಯದೇವಾಲಯವೂ ವಿಷ್ಣುಮಂಗಲದ ದೇವಾಲಯದಂತೆ ಪ್ರಾಚೀನವಾದುದು. ವಿಷ್ಣುಮಂಗಲದಿಂದ ಒಂದು ಮೈಲಿ ದೂರದಲ್ಲಿರುವ ಶಿವಮಂಗಲವೂ ಒಂದು ಕಾಲಕ್ಕೆ ತುಂಬ ಪ್ರಸಿದ್ಧವಾಗಿದ್ದ ಕ್ಷೇತ್ರ. ಕೂಡಲ ಬಳಿ ಶಂಕರಾಚಾರ್ಯರೇ ಸ್ಥಾಪಿಸಿದ ಶಿವಾಲಯವೊಂದಿದೆ. ಕಾಸರಗೋಡು ಬಳಿಯಿರುವ ಮಂಜೇಶ್ವರವು ಮೊದಲಿನಿಂದಲೂ ಪ್ರಮುಖವಾದ ಸ್ಥಳ. ಸಮುದ್ರ ತೀರದಲ್ಲಿ ಮಂಜೇಶ್ವರದಿಂದ ಎರಡು ಮೈಲಿ ದೂರದಲ್ಲಿರುವ ಕಣ್ವತೀರ್ಥವೆಂಬ ಸಣ್ಣ ಹಳ್ಳಿಯಲ್ಲಿಯೇ ಮಧ್ವಾಚಾರ್ಯರು ಉಡುಪಿ ಅಷ್ಟಮಠದ ಯತಿಗಳಿಗೆ ಆಶ್ರಮವನ್ನಿತ್ತರು. ಇಲ್ಲಿಯೇ ಪೇಜಾವರ ಮಠದ ಹಿರಿಯರಾದ ವಿಜಯಧ್ವಜತೀರ್ಥರ ಬೃಂದಾವನವಿದೆ.

'ಮಧ್ವವಿಜಯ'ವನ್ನು ಬರೆದ ನಾರಾಯಣ ಪಂಡಿತಾಚಾರ್ಯರು ಕುಂಬಳೆ ಸೀಮೆಯವರು ; ಅವರ ತಂದೆ ತ್ರಿವಿಕ್ರಮಪಂಡಿತಾಚಾರ್ಯರು ಕುಂಬಳೆಯ ಅರಸ ಇಮ್ಮಡಿ ಜಯಸಿಂಹನ ಆಸ್ಥಾನದಲ್ಲಿ ಪಂಡಿತರಾಗಿದ್ದವರು. ಕೂಡಲು ಬಳಿಯಿರುವ ಕಾವುಮಠವೆಂಬಲ್ಲಿ ತ್ರಿವಿಕ್ರಮಪಂಡಿತಾಚಾರ್ಯರ ಮತ್ತು ನಾರಾಯಣ ಪಂಡಿತಾಚಾರ್ಯರ ಬೃಂದಾವನಗಳಿವೆ. ಇಬ್ಬರೂ ಸಂನ್ಯಾಸಿಗಳಾದರೆಂದು ಒಂದು ವಿವರವಿದೆ.

ಮೂರನೆಯ ಪರಿಚ್ಛೇದ

೧. ಅವತಾರಕ್ಷೇತ್ರ

ತುಳುನಾಡಿನ ಸಪ್ತಪುಣ್ಯಕ್ಷೇತ್ರಗಳಲ್ಲಿ ಶಿವಬೆಳ್ಳಿ (ಶಿವಳ್ಳಿ) ಒಂದು. ಇದೇ ಈಗ ಉಡುಪಿಯೆನಿಸಿಕೊಂಡಿರುವುದು. ನಾರಾಯಣ ಪಂಡಿತಾಚಾರ್ಯರು ತುಳುವಿನ ಶಿವಬೆಳ್ಳಿಯನ್ನು ಸಂಸ್ಕೃತ ಮಾಡಿ ಶಿವರೂಪ್ಯವೆಂದು ಕರೆದಿದ್ದಾರೆ ; ವಾದಿರಾಜ ಸ್ವಾಮಿಗಳೂ ಮಹೇಶ ರಜತಗ್ರಾಮವೆಂದು ವ್ಯವಹರಿಸಿದ್ದಾರೆ. ಕ್ರಿಸ್ತಾಬ್ದ ೭೩೦ರಷ್ಟು ಹಿಂದೆಯೇ ಪೃಥ್ವೀಸಾಗರನೆಂಬ ರಾಜನೊಬ್ಬನ ಶಾಸನದಲ್ಲಿ ಶಿವಳ್ಳಿಯು ವಾರಾಣಸಿಯಷ್ಟು ಪವಿತ್ರವಾದ ಸ್ಥಳವೆಂಬ ನಿರೂಪಣೆ ಕಾಣಬರುತ್ತದೆ. ಈ ಊರಿಗೆ ಶಿವಬೆಳ್ಳಿ ಅಥವಾ ರಜತಪೀಠವೆಂಬ ಹೆಸರು ಹೇಗೆ ಬಂದಿತೆಂದು ಸ್ಥಳ ಮಾಹಾತ್ಮ್ಯೇ ಒಂದು ಕಥೆಯನ್ನು ಹೇಳುತ್ತದೆ. ಪರಶುರಾಮನು ಸಾಗರದಿಂದ ಸೆಳೆದುಕೊಂಡಷ್ಟು ಭೂಭಾಗವನ್ನು ರಾಮಭೋಜನೆಂಬ ರಾಜನ ವಶಕ್ಕೆ ವಹಿಸಿದನಂತೆ. ಈ ರಾಜನು ಒಮ್ಮೆ ಅಶ್ವಮೇಧಯಾಗ ನಡೆಸುವ ಸಂಕಲ್ಪ ಮಾಡಿ ಪರಶುರಾಮನನ್ನೇ ಅಧ್ವರ್ಯುವಾಗಿ ಆಹ್ವಾನಿಸಿದಂತೆ. ಪರಶುರಾಮನು ಕೂಡಲು ವಿಶಾಲವಾದ ಬೆಳ್ಳಿಯ ಮಣೆ (ರಜತಪೀಠ)ಯೊಂದನ್ನು ನಿರ್ಮಿಸಿದನಂತೆ. ಯಾಗವಾದ ನಂತರ ಪೀಠವು ಪಾತಾಳಕ್ಕಿಳಿದು ಮರೆಯಾಯಿತೆಂದೂ ಆ ಪೀಠವಿದ್ದ ಸ್ಥಳವೇ ಶಿವಬೆಳ್ಳಿಯೆಂದೂ ಈ ಕಥೆ ವಿವರಿಸುತ್ತದೆ. ಪರಶುರಾಮನು ಕುಳಿತು ಯಾಗ ಮಾಡಿಸಿದ ಪೀಠವು ಮರೆಯಾದರೂ ಆ ಪೀಠದ

ಮಧ್ಯದಿಂದ ಲಿಂಗಾಕಾರದ ಶಿಲೆಯೊಂದು ಆವಿರ್ಭೂತವಾಯಿತೆಂದೂ ಅದರಲ್ಲಿ ಪರಶುರಾಮನ ಸಾನ್ನಿಧ್ಯವಿರುವುದಾಗಿ ಪ್ರಕಟವಾಯಿತೆಂದೂ ಇದೇ ಕಥೆ ಹೇಳುತ್ತದೆ. ಈ ಲಿಂಗವೇ ಅನಂತೇಶ್ವರನೆಂದು ಪ್ರತೀತಿ. ರಜತಪೀಠದ ಮಧ್ಯದಲ್ಲೇ ಭಂಗಾರದ ಸರ್ಪಾಸನವಿದ್ದಿತೆಂಬ ವಿವರವೂ, ಅಶ್ವಮೇಧಕ್ಕೆ ಮುಂಚೆ ರಾಮ ಭೋಜರಾಜನು ನೇಗಿಲಿನಿಂದ ಭೂಶೋಧನೆ ಮಾಡುತ್ತಿದ್ದಾಗ ನೇಗಿಲಿನ ತುದಿಗೆ ಹಾವೊಂದು ಸಿಕ್ಕು ಸತ್ತಿತೆಂದೂ ಈ ಹತ್ಯೆಯ ಪ್ರಾಯಶ್ಚಿತ್ತಕ್ಕಾಗಿ ಯಜ್ಞ ಮುಗಿದೊಡನೆ ರಾಜನು ಸರ್ಪದ ತೂಕದಷ್ಟು ಭಂಗಾರವನ್ನು ದಾನ ಮಾಡಿದನೆಂಬ ವಿವರವೂ ಈ ಸ್ಥಳ ಮಾಹಾತ್ಮ್ಯೆಯಿಂದ ತಿಳಿದುಬರುತ್ತದೆ. ಅನಂತೇಶ್ವರನು ಹೀಗೆ ಸರ್ಪಸ್ವರೂಪನೆಂಬ ಕಲ್ಪನೆಯಿದ್ದರೂ ಮಾಧ್ವರ ಮಟ್ಟಿಗೆ ಅನಂತಾಸನ (ರಜತಪೀಠದ ನಡುವೆ ಇದ್ದ ಸರ್ಪಾಸನ)ನೆಂಬ ನಿರ್ದೇಶನ ಪ್ರಚಲಿತವಾಗಿದೆ.

ಉಡುಪಿಯೆಂಬ ಹೆಸರೂ ಜಿಜ್ಞಾಸೆಗೆ ಬಂದಿದೆ. ಚಂದ್ರ (ಉಡುಪ)ನು ಇಲ್ಲಿನ ಅಬ್ಜಾರಣ್ಯದಲ್ಲಿ ತಪಸ್ಸು ಮಾಡಿ ರಜತಪೀಠದಲ್ಲಿ ಸನ್ನಿಹಿತನಾದ ಅನಂತೇಶ್ವರನನ್ನು ಒಲಿಸಿಕೊಂಡುದೇ ಈ ಊರಿಗೆ ಉಡುಪಿಯೆಂದು ಹೆಸರು ಬರಲು ಕಾರಣವೆಂದು ಕಥೆಯಿದೆ. ಉಡುಪನೆಂದರೆ ನಕ್ಷತ್ರ (ಉಡು)ಗಳಿಗೆ ಒಡೆಯ (ಪ)ನೆಂದೂ ಅವನಿಂದ ಪ್ರಸಿದ್ಧವಾದ ಕ್ಷೇತ್ರ ಉಡುಪಿಯೆಂದೂ ವಿವರಣೆಯಿದೆ. ಆದರೆ ಹಳೆಯ ಶಾಸನಗಳಲ್ಲಿ 'ಉಡುಪು' ಎಂಬ ಪ್ರಯೋಗವು ಕಂಡುಬರುತ್ತದೆ. ''ಶಿವಳಿಯ ಮೂಡೆಲನಿಡಂಬೂರು ಗ್ರಾಮದ ಮಧ್ಯದ ಉಡುಪಿನ ಸ್ಥಾನದ ಶ್ರೀಕೃಷ್ಣ ದೇವರಿಗೆ....'', ''ಉಡುಪಿಯ ಶ್ರೀ ಮಹಾದೇವರು', ಇತ್ಯಾದಿ ಇತ್ಯಾದಿ. ನಾರಾಯಣ ಪಂಡಿತಾಚಾರ್ಯರೂ ತಮ್ಮ ಮಧ್ವವಿಜಯಭಾವಪ್ರಕಾಶಿಕೆಯಲ್ಲಿ

''ರಜತಪೀಠಪುರಂ ಒಡಿಪು ಇತ್ಯಪಭ್ರಷ್ಟಭಾಷಾಯಾಂ'' ಎಂದರೆ ಈ ಊರಿಗೆ ತುಳುವಿನಲ್ಲಿ ಒಡ್ಪು ಎಂಬ ಹೆಸರಿದ್ದಿತೆಂದು ಹೇಳಿದ್ದಾರೆ. ಈಗಿನ ಮಲ್ಪಿಗೆ ಮುಂಚೆ ಮಲಪು ಎಂಬ ಹೆಸರಿದ್ದಂತೆ.

ಒಡ್ಪು ಅಥವಾ ಉಡುಪು ಎಂಬ ಪದವು 'ಒಡೆ' ಧಾತುವಿನ ಭಾವ ನಾಮ ; ಒಡ್ಪು ಎಂದರೆ ಒಡೆಯುವುದು ಎಂದರ್ಥ. ಮಧ್ವಾಚಾರ್ಯರು ಸಮುದ್ರತೀರದಿಂದ ಗೋಪೀಚಂದನದ ಗೆಡ್ಡೆಯನ್ನು ಹೊತ್ತು ತರುತ್ತಿದ್ದಾಗ ಅದು ಒಡೆದು ಅದರೊಳಗಿಂದ ಕೃಷ್ಣವಿಗ್ರಹವು ಹೊರಗೆ ಕಾಣಿಸಿಕೊಂಡಿತೆಂಬ ಕಥೆ ಮುಂದೆ ಬರುತ್ತದೆ. ಈ ಒಡೆತವೇ ಒಡ್ಪುವಿನಲ್ಲಿ ಅಡಗಿರುವುದೆಂದು ಹೇಳುತ್ತಾರೆ. ನೀರಿನಿಂದ ಊರಿಗೆ ಗೋಪೀಚಂದನ ಗೆಡ್ಡೆಯನ್ನು ತರುತ್ತಿದ್ದಾಗ ದಾರಿಯಲ್ಲಿ ಕೇಕುಣ್ಣಾಯ ಕೃಷ್ಣದೇವಾಲಯದಲ್ಲೇ ಈ ಒಡೆತ ಆಯಿತಂತೆ ; ಆದುದರಿಂದಲೇ ಈ ಮಾರ್ಗಮಧ್ಯದ ದೇವಸ್ಥಾನವನ್ನು 'ಆದಿಉಡುಪಿ'ಯೆಂದು ಇಂದಿಗೂ ವ್ಯವಹರಿಸುತ್ತಾರೆ. ಅಲ್ಲಿ ಒಡೆದು ಕಾಣಿಸಿಕೊಂಡ ಕೃಷ್ಣನನ್ನು ತಂದು ಈಗ ಉಡುಪಿಯೆನಿಸಿಕೊಳ್ಳುವಲ್ಲಿ ಆಚಾರ್ಯರು ಪ್ರತಿಷ್ಠೆ ಮಾಡಿದರು ಎಂಬ ವಿವರವಿದೆ.

ಮಧ್ವಾಚಾರ್ಯರು ಕೃಷ್ಣವಿಗ್ರಹವನ್ನು ಪ್ರತಿಷ್ಠೆಮಾಡಿದ ನಂತರವೇ, ಎಂದರೆ ಕ್ರಿಸ್ತಾಬ್ಧ ೧೨೭೦ರ ಸುಮಾರಿಗೆ, ಈ ಊರಿಗೆ ಉಡುಪು ಅಥವಾ ಉಡುಪಿಯೆಂಬ ಹೆಸರು ಪ್ರಸಿದ್ಧವಾಯಿತೆನ್ನ ಬಹುದು. ಆ ಮುಂಚೆ ಶಿವಬೆಳ್ಳಿಯೆಂಬ ಹೆಸರೇ ಪ್ರಚಲಿತವಾಗಿದ್ದಂತೆ ತೋರುತ್ತದೆ. ಉಪಲಬ್ಧವಿರುವ ಶಾಸನಗಳಲ್ಲಿಯೂ ಬಹುಮಟ್ಟಿಗೆ ಉಡುಪಿನ ಕೃಷ್ಣದೇವರ ಪ್ರಸ್ತಾಪವಿದೆಯೇ ವಿನಾ ಉಡುಪಿನ ಅನಂತೇಶ್ವರನೆಂಬುದಿಲ್ಲ. ಅನಂತೇಶ್ವರನೇ ಊರಿನ ಪ್ರಮುಖದೇವ

ರಾಗಿದ್ದುದು ತಪ್ಪಿ ಕೃಷ್ಣ ಮುಖ್ಯನಾದದಂದೇ ಶಿವಬೆಳ್ಳಿಯು ಉಡುಪಿ ಯಾಯಿತು. ಮಧ್ವಾಚಾರ್ಯರ ಕಾಲದಲ್ಲಿಯೂ ಅನಂತೇಶ್ವರ ದೇವಾಲಯವೇ ಗ್ರಾಮದ ಜೀವನಾಡಿಯಾಗಿದ್ದಿತು. ಅವರು ಕೃಷ್ಣಮಂದಿರವನ್ನು ನಿರ್ಮಿಸಿದನಂತರವೂ ತಮ್ಮ ಪಾಠ ಪ್ರವಚನಗಳನ್ನೆಲ್ಲ ಅನಂತೇಶ್ವರನ ಗುಡಿಯಲ್ಲಿಯೇ ನಡೆಸುತ್ತಿದ್ದರು ; ಕಡೆಗೆ ಅವರು ಮರೆಯಾದುದೂ ಅನಂತೇಶ್ವರನ ಗುಡಿಯ ಒಳ ಕಟ್ಟೆಯ ಮೇಲೆಯೇ. ಮಧ್ವನವಮಿಯಂದು ಈ ಕಟ್ಟೆಗೇ ಪೂಜೆ ನಡೆಯುತ್ತದೆ. 'ಅದೃಶ್ಯೋಽಸೌ ರೌಪ್ಯಪೀಠೇ ದೃಶ್ಯೋಽಸ್ತಿ ಬದರೀತಟೇ' ಎನ್ನುವ ಮಾತು ನಿಂತಿದೆಯಷ್ಟೆ. ಈ ಮಾತಿನಲ್ಲಿ ರೌಪ್ಯಪೀಠವೆಂದರೆ ಶಿವಬೆಳ್ಳಿಯ ಅನಂತೇಶ್ವರನ ಸನ್ನಿಧಿಯೆಂದರ್ಥ. ಇಂದಿಗೂ ಪರ್ಯಾಯದ ಉತ್ಸವದಲ್ಲಿ ಪಟ್ಟವೇರುವ ಸ್ವಾಮಿಗಳು ಮೊದಲು ಅನಂತೇಶ್ವರನ ದರ್ಶನವನ್ನು ಮಾಡಿ ಅನಂತರ ಕೃಷ್ಣನ ಗುಡಿಗೆ ಬರಬೇಕೆಂಬ ನಿಯಮವಿದೆ. ಮಧ್ವಾಚಾರ್ಯರ ಕಾಲ ದಲ್ಲಿಯೂ ಅನಂತರವೂ ಕೃಷ್ಣನ ಗುಡಿಯು ಮಠವೆಂದೇ ಪರಿಗಣಿಸ ಲ್ಪಡುತ್ತಿದ್ದಿತು. ೧೪೩೭ರಲ್ಲಿಯೂ 'ಉಡುಪಿನ ಶ್ರೀಕೃಷ್ಣದೇವರ ಮಠ' ವೆಂದೇ ವ್ಯವಹಾರವಿದ್ದಿತೆಂದು ವಾದಿರಾಜತೀರ್ಥರ ಶಿಷ್ಯ ವೇದವೇದ್ಯತೀರ್ಥರ ಕಾಲದ ಶಾಸನವೊಂದರಿಂದ ತಿಳಿದು ಬರುತ್ತದೆ.

ಅನಂತೇಶ್ವರನ ಗುಡಿ

ಊರಿಗೆ ಗುಡಿಯೆಂದರೆ ಅನಂತೇಶ್ವರನ ಗುಡಿಯೇ. ಈಗಿನ ಮಧ್ವ ಸರೋವರವೂ ಮೊದಲಿಗೆ ಅನಂತಸರಸ್ಸೆಂದೇ ಪ್ರಸಿದ್ಧವಾಗಿದ್ದಿತು.

ಈ ಅನಂತೇಶ್ವರನ ಗುಡಿಯ ಹಿನ್ನೆಲೆಯೇನೆಂಬುದು ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಮಂಜೇಶ್ವರದ ಗೋವಿಂದಪೈಗಳು ಈ ಗುಡಿಯು ಮೊದಲು ಅನಂತನಾಥ ತೀರ್ಥಂಕರನ ಬಸದಿಯಾಗಿದ್ದಿತೆಂದೂ,

"ಕ್ರಮೇಣ ಜೈನರು ಉಡುಪಿಯನ್ನು ಬಿಟ್ಟು ಹೋಗಿಯೋ ಅಥವಾ ಅನ್ಯಥಾ ಕ್ಷೀಣವಾಗಿಯೋ, ಹೇಗೋ ಯಾವೊಂದೊಮ್ಮೆ ಹಾಳುಬಿದ್ದು ಆ ಬಸದಿಯನ್ನು ಸನಾತನ ಧರ್ಮಿಗಳು ಅಳಿದು ಹೋಗಗೊಡದೆ ಅಲ್ಲಿ ಅದೇ ಹೆಸರಿನ ಶಿವಲಿಂಗವನ್ನು ಪ್ರತಿಷ್ಠಿಸಿ ಅದನ್ನು ಅನಂತೇಶ್ವರ ಎಂದು ಕರೆದಿರಬೇಕು" ಎಂದೂ ಅಭಿಪ್ರಾಯ ಪಟ್ಟಿದ್ದಾರೆ ('ತೆಂಕನಾಡು' ೧೯೪೭, ತುಳುನಾಡು ಪೂರ್ವಸ್ಮೃತಿ. ಪು. ೨೬). ವಾದಕ್ಕೆ ಪೋಷಕವಾಗಿ ಇಂದಿಗೂ ಅನಂತೇಶ್ವರ ಗುಡಿಯ ಮುಂದಿರುವ ಮಾನಸ್ತಂಭವನ್ನು ತೋರಿಸುತ್ತಾರೆ. ಸನಾತನ ಧರ್ಮದ ದೇವಾಲಯಗಳ ಮುಂದೆ ಇಂಥ ಮಾನಸ್ತಂಭ ಗಳನ್ನು ನಿಲ್ಲಿಸುವುದಿಲ್ಲ; ಜೈನರ ಚೈತ್ಯಾಲಯಗಳಿಗೇ ವಿಶಿಷ್ಟವಾದುವು ಇವು. ಅಲ್ಲದೆ, ಅನಂತ ನೆಂಬ ಹೆಸರು ಸಾಂಪ್ರದಾಯಿಕವಾಗಿ ಶಿವನಿಗೆ ಸಲ್ಲದು ; ಜೈನರ ಹದಿನಾಲ್ಕನೆಯ ತೀರ್ಥಂಕರನಿಗೂ ಶೇಷನಿಗೂ ಒಮ್ಮೊಮ್ಮೆ ವಿಷ್ಣು ವಿಗೂ ಒಪ್ಪುವ ಹೆಸರು ಇದೆಂದು ಹೇಮಚಂದ್ರನ ಅನೇಕಾರ್ಥಸಂಗ್ರಹ ದಿಂದ ತಿಳಿದುಬರುತ್ತದೆ (ಅನಂತಸ್ತೀರ್ಥಕೃದ್ಭಿದಿ ವಿಷ್ಣೌಶೇಷೇ). ಈ ವಾದವನ್ನು ನಿರಾಕರಿಸುವುದು ಕಷ್ಟ. ತುಳುನಾಡಿ ನಲ್ಲಿ ಹಲವೆಡೆ 'ಶ್ರೀಮದನಂತತೀರ್ಥೇಶ್ವರರ ಚೈತ್ಯಾಲಯ'ವಿದ್ದುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಅಲ್ಲೆಲ್ಲ ಒಂದು ಕಾಲಕ್ಕೆ ಜೈನಧರ್ಮ ಪ್ರಬಲವಾಗಿ ದ್ದುದೂ ನಿಜವೇ. ಅನಂತೇಶ್ವರ ಗುಡಿಯ ಮಗ್ಗುಲಲ್ಲಿರುವ ಚಂದ್ರಮೌಳೀಶ್ವರ ದೇವಾಲಯವೂ ಹೀಗೆಯೇ ಚಂದ್ರಪ್ರಭ ತೀರ್ಥಂಕರನ ಚೈತ್ಯಾಲಯವಾಗಿದ್ದಿತೆಂದೂ ಮುಂದೆ ಶೈವಧರ್ಮದ ಸಂಸ್ಕಾರದಿಂದ ಚಂದ್ರಮೌಳೀಶ್ವರ ದೇವಾಲಯವಾಯಿತೆಂದೂ ಹೇಳುತ್ತಾರೆ. ಈ ಕಡೆ ಚಂದ್ರನಾಥ ಬಸದಿಗಳೂ ಹಲವಾರು ಇವೆ. ನಾಡವರಲ್ಲಿ ಇಂದಿಗೂ ಜೈನಧರ್ಮ ಬಹುಮಟ್ಟಿಗೆ ಪ್ರಚಲಿತವಾಗಿದೆ.

ಜೈನಧರ್ಮ ಈ ಪ್ರದೇಶಕ್ಕೆ ಬರುವುದಕ್ಕೂ ಮುಂಚೆ ಕ್ರಿಸ್ತಶಕೆಯ ಶೈಶವದಲ್ಲೇ ಬೌದ್ಧ ಧರ್ಮವು ಇಲ್ಲಿ ನೆಲೆಸಿದ್ದಿತಷ್ಟೆ. ಇದರ

ಪ್ರಭಾವವನ್ನೂ ಮೂಡಿಸಿಕೊಂಡು ಈಗಿನ ಅನಂತೇಶ್ವರಗುಡಿ ಆಗಲೂ ಇದ್ದಿತ್ತೆನ್ನಲು ಇಂದು ಅನಂತೇಶ್ವರ ದೇವಾಲಯದ ಒಳಗೇ ಇರುವ, ದಿನಂಪ್ರತಿ ಪೂಜೆಗೊಳ್ಳುವ, ಶಾಸ್ತಾವು (ಶಾಸ್ತಾವೇಶ್ವರನ) ಗುಡಿಯೇ ಸಾಕ್ಷಿ. ತುಳುನಾಡಿನಲ್ಲೆಲ್ಲ ಶಾಸ್ತಾವು ಪೂಜೆ ಪ್ರಚಲಿತವಾಗಿದೆ. ಅದರಲ್ಲೂ ಉಡುಪಿ ತಾಲ್ಲೂಕಿನಲ್ಲಿ ಒಂದೊಂದು ದೇವಾಲಯದಲ್ಲೂ ಶಾಸ್ತಾವು ಗುಡಿಯಿರುವುದು ಕಾಣಬರುತ್ತದೆ. ಪ್ರಮುಖವಾದ ಶಾಸ್ತಾವು ಗುಡಿಗಳೆಂದರೆ ಉಡುಪಿಯ ಅನಂತೇಶ್ವರನ ದೇವಾಲಯದಲ್ಲಿರುವು ದೊಂದು, ಉಡುಪಿಯ ಹತ್ತಿರ ಕೊಡವೂರು ಎಂಬಲ್ಲಿ ಇನ್ನೊಂದು, ಪುತ್ತೂರಿನ ಬಳಿಯಿರುವ ಕೋಡಿಪಾಡಿ ಎಂಬಲ್ಲಿ ಮತ್ತೊಂದು. ಶಾಸ್ತಾರನೆನ್ನುವುದು ಬುದ್ಧನ ಹೆಸರುಗಳಲ್ಲೊಂದು. ಜೈನರು ಅನಂತನಾಥಬಸದಿಯನ್ನು ಕಟ್ಟುವ ಸ್ಥಳದಲ್ಲೇ ಪ್ರಾಚೀನವಾದ ಶಾಸ್ತಾವುಗುಡಿಯಿದ್ದಿತೆಂದೂ ಅದರ ಕಾರಣಿಕವನ್ನು ಮೆಚ್ಚಿಕೊಂಡು ಅದನ್ನು ಸ್ಥಳಾಂತರಗೊಳಿಸದೆ ಅದರ ಸನ್ನಿಧಿಯಲ್ಲೇ ತಮ್ಮ ಚೈತ್ಯಾಲಯವನ್ನು ನಿರ್ಮಿಸಿದರೆಂದೂ ಊಹಿಸಿಕೊಳ್ಳಬಹುದು.

ದುರ್ಗಾ ಮಂದಿರಗಳು

ಇದು ಹೇಗಾದರೂ ಇರಲಿ. ಉಡುಪಿಯ ಸುತ್ತ ನಾಲ್ಕು ದುರ್ಗಾಮಂದಿರಗಳೂ ನಾಲ್ಕು ನಾಗಾಯತನಗಳೂ ಪ್ರಸಿದ್ಧವಾಗಿವೆ. ಇವನ್ನು ರಜತ ಪೀಠದ ಅಷ್ಟಬಂಧಗಳೆನ್ನುತ್ತಾರೆ. ಪುತ್ತೂರು, ಕುಂಜಾರು, ಕಣ್ಣರಪಾಡಿ ಮತ್ತು ಇಂದ್ರಾಣಿ ಈ ಸ್ಥಳಗಳಲ್ಲಿ ಪರಶುರಾಮನೇ ನಿರ್ಮಿಸಿದನೆನ್ನಲಾದ ದುರ್ಗಾಲಯಗಳಿವೆ. ಪುತ್ತೂರು ಉಡುಪಿಗೆ ಉತ್ತರ ದಿಕ್ಕಿನಲ್ಲಿ ಕೆಲವು ಮೈಲಿ ದೂರದಲ್ಲಿದೆ ; ಇಲ್ಲಿನ ದುರ್ಗಾಭಗವತೀ ದೇವಾಲಯವು ಪ್ರಸಿದ್ಧವಾದುದು. ಕುಂಜಾರು (ವಿಮಾನಗಿರಿ) ಎಂಬ

ಬೆಟ್ಟವು ಉಡುಪಿಗೆ ಆಗ್ನೇಯದಲ್ಲಿ ಏಳೆಂಟು ಮೈಲಿ ದೂರದಲ್ಲಿದೆ. ಇಲ್ಲಿ ಪರಶುರಾಮನ ತಾಯಿ ರೇಣುಕಾದೇವಿಯ ದೇವಾಲಯವಿದೆ ; ಪರಶುರಾಮನೇ ನಿರ್ಮಿಸಿದನೆನ್ನಲಾದ ಪರಶುತೀರ್ಥ, ಗದಾತೀರ್ಥ, ಧನುಷ್ತೀರ್ಥ ಮತ್ತು ಶರಬಾಣತೀರ್ಥಗಳೆಂಬ ನಾಲ್ಕು ಕೊಳಗಳಿವೆ. ಮಧ್ವಾಚಾರ್ಯರು ಹುಟ್ಟಿದ ಹಳ್ಳಿಗೆ ಹತ್ತಿರದಲ್ಲೇ ಇದ್ದ ಈ ಬೆಟ್ಟದ ಮೇಲೆ ಅವರು ಎಳೆತನದಲ್ಲೇ ಓಡಾಡಿ ಈ ಕೊಳಗಳಲ್ಲಿ ಮೀಯುತ್ತಿದ್ದರಂತೆ. ಕೆಲವರು ಈ ದಿಕ್ಕಿನ ದುರ್ಗಾಲಯವು ಕುಂಜಾರಲ್ಲವೆಂದೂ ಬೈಲೂರೆಂಬ ಸ್ಥಳವೆಂದೂ ಹೇಳುತ್ತಾರೆ. ಕಣ್ಣರಪಾಡಿ ಉಡುಪಿಗೆ ದಕ್ಷಿಣಕ್ಕಿದೆ. ಉಡುಪಿಗೆ ಪೂರ್ವದಿಕ್ಕಿನಲ್ಲಿ ಮೂರು ಮೈಲಿದೂರವಿರುವ ಇಂದ್ರಾಣಿ (ಇಂದ್ರಳ್ಳಿ) ಯಲ್ಲಿಯೂ ಬೆಟ್ಟವೊಂದಿದ್ದು ಅದರ ಮೇಲೆ ದುರ್ಗಾಪರಮೇಶ್ವರಿಯ ಗುಡಿಯಿದೆ. ಶಚೀದೇವಿಯು ಇಲ್ಲಿ ತಪಸ್ಸು ಮಾಡಿದಳೆಂದು ಈ ಸ್ಥಳಕ್ಕೆ ಇಂದ್ರಾಣಿಯೆನ್ನುತ್ತಾರೆ. ಕೆಲವರು ಇಂದ್ರಾಣಿಯು ಉಡುಪಿಯ ಅಷ್ಟಬಂಧಗಳಲ್ಲಿ ಸೇರಿಲ್ಲವೆಂದೂ ಈಶಾನ್ಯಕ್ಕೆ ಮುಕ್ಕಾಲು ಮೈಲಿ ದೂರದಲ್ಲಿರುವ ಕೊಡಿಯಾಳಿ ಎಂಬಲ್ಲಿನ ದುರ್ಗಾಪರಮೇಶ್ವರಿ ದೇವಾಲಯವು ನಾಲ್ಕನೆಯ ದುರ್ಗಾಲಯವೆಂದೂ ಹೇಳುತ್ತಾರೆ. ಅಂತೂ ಉಡುಪಿಯ ಸುತ್ತಮುತ್ತ ದುರ್ಗಾರಾಧನೆಯು ಪ್ರಬಲವಾದ ಪಂಥವಾಗಿದ್ದಿತು.

ತುಳುನಾಡಿನ ದುರ್ಗೆಯು ಮಹಾಯಾನ ಬೌದ್ಧಪಂಥದ ತಾರಾಭಗವತಿಯ ಛಾಯೆಯೆಂದು ಬಲ್ಲವರು ತಿಳಿಸುತ್ತಾರೆ. ಮಂಗಳೂರು ಕದರಿಯ ವಿಹಾರದಲ್ಲಿ ಲೋಕೇಶ್ವರದೊಂದಿಗೆ ತಾರಾಭಗವತಿಯೂ ಪೂಜೆಗೊಳ್ಳುತ್ತಿದ್ದಳು. ಕ್ರಿಸ್ತಾಬ್ಧ ೧೦೬೫ರ ಶಾಸನವೊಂದು ಮಹಾ ಪ್ರಧಾನ ದಂಡನಾಯಕ ರಸಭಟ್ಟಯ್ಯನೆಂಬುವನು ಅಲ್ಲಿ ತಾರಾಭಗವತಿಯ ಪೂಜಾವಸರಗಳಿಗೆ ವ್ಯವಸ್ಥೆಮಾಡಿದುದನ್ನು ಪ್ರಸ್ತಾಪಿಸುತ್ತದೆ.

ಕುಂಬಳೆ ಅರಸರು ಈಗ ವಾಸಮಾಡುವ ಮಾಯಾಪ್ರಾಡಿಯಲ್ಲಿ ಶಾಸ್ತಾರನ ಗುಡಿಯೂ ಇದೆ. ದುರ್ಗೆಯ ಗುಡಿಯೂ ಇದೆ. ಮಂಗಳೂರಿನ ಮಂಗಳಾದೇವಿಯನ್ನು ಆದಿದೇವಿ (ತಾರಾಭಗವತಿ) ಯೆನ್ನುತ್ತಾರೆ ; ಮಂಗಳಾದೇವಿಯ ದೇವಾಲಯವಿರುವ ಪ್ರದೇಶಕ್ಕೆ ಮಾಯಿಕಳ್ (ಮಾಯಾಕಳ) ಎಂಬುದು ಪ್ರಾಚೀನವಾದ ಹೆಸರೆಂದೂ, ಮಾಯಾ ಎಂಬುದು ಮಂಗಳಾದೇವಿಗೆ ಮತ್ತೊಂದು ಹೆಸರೆಂದೂ ಇದು ಬೌದ್ಧಧರ್ಮದ ಪ್ರಭಾವವನ್ನು ಸ್ಪಷ್ಟಪಡಿಸುವುದೆಂದೂ ಭಾಸ್ಕರ ಆನಂದ ಸಾಲೆತ್ತೂರರ ಅಭಿಪ್ರಾಯ. ಅವರ ಪ್ರಕಾರ ಉಡುಪಿಯ ಅಷ್ಟಬಂಧಗಳ ಲ್ಲಿನ ದುರ್ಗಾಲಯಗಳೆಲ್ಲ ಒಂದು ಕಾಲಕ್ಕೆ ಬೌದ್ಧದೇವಳಗಳು ; ಶೈವ ಧರ್ಮದ ಗಾಳಿ ಬಲವಾಗಿ ಬೀಸಿದಾಗ ಇವು ದುರ್ಗಾ ಮಂದಿರಗಳಾದುವು.

ನಾಲ್ಕು ನಾಗಾಯತನಗಳು ಅರಿತೋಡು, ತಾಂಗೋಡು, ಮಾಂಗೋಡು, ಮುಚ್ಚಲಗೋಡು ಎಂಬ ಸ್ಥಳಗಳಲ್ಲಿವೆ. ಇವು ನಾಲ್ಕೂ ಉಡುಪಿಯ ಸುತ್ತ ಇರುವ ಹಳ್ಳಿಗಳು, ರಾಮಭೋಜರಾಜನು ಅಶ್ವಮೇಧಯಾಗ ಮಾಡುವಾಗ ಅಧ್ವರ್ಯುವಾದ ಪರಶುರಾಮನನ್ನು ಕೂರಿಸಲು ಸಿದ್ಧಪಡಿಸಿದ ರಜತಪೀಠದ ನಾಲ್ಕು ಕಾಲುಗಳು ಊರಿದ ಸ್ಥಳಗಳಂತೆ ಇವು ; ಅನಂತನ ನಾಲ್ಕು ಹೆಡೆಗಳಂತೆ. ನಾಗಾಲಯ ಗಳೆಂದರೆ ಸ್ಕಂತ ಕ್ಷೇತ್ರಗಳೂ ಹೌದು. ಹಾವಿನ ಹುತ್ತವಿರಲಿ, ಗರ್ಭಗುಡಿ ಯಲ್ಲಿ ಸರ್ಪವಿಗ್ರಹವಿರಲಿ, ಶಿವಕುಮಾರನಾದ ಸುಬ್ರಹ್ಮಣ್ಯ (ಸುಬ್ಬರಾಯ) ನೆಂಬ ಕಲ್ಪನೆಯಿಂದಲೇ ಪೂಜೆ ನಡೆಯುವುದು ತುಳುದೇಶದ ವೈಶಿಷ್ಟ್ಯ. ದುರ್ಗಾರಾಧನೆಯಂತೆಯೇ ಅನಂತ-ಸುಬ್ರಹ್ಮಣ್ಯನ ಪೂಜೆಯು ಈ ಕಡೆ ತುಂಬ ಪ್ರಚಲಿತವಾಗಿದ್ದಿತು. ಕುಂಬಳ ಸೀಮೆಗೆ ಸೇರಿದ ಪುತ್ತಿಗೆ, ಮುಗು, ಕಿದೂರು, ಬೇಳ-ಕುಮಾರ ಮಂಗಲ, ಕಾಟುಕುಕ್ಕೆ, ಕುಕ್ಕಂಗೋಡ್ಲು ಮುಂತಾದ ಗುಡಿಗಳಲ್ಲಿ ಸುಬ್ರಹ್ಮಣ್ಯನೇ

ಮುಖ್ಯದೇವರು. ಕೆಲವು ಕಡೆ, ಕಾಸರಗೋಡಿನ ಬಳಿಯಿರುವ ಪಾಂಗೋಡಿನಲ್ಲಿದ್ದಂತೆ, ದುರ್ಗಾಪರಮೇಶ್ವರಿಯೂ ಸುಬ್ರಹ್ಮಣ್ಯನೂ ಒಟ್ಟಿಗೆ ಇರುವುದೂ ಉಂಟು.

ಕ್ರಿಸ್ತಾಬ್ಧ ೧೪೩೭ರಲ್ಲಿ ಕೆಳದಿವೆಂಕಟಪ್ಪನಾಯಕನು ತುಳುರಾಜ್ಯ ಮಲೆರಾಜ್ಯವನ್ನು ಆಳುತ್ತಿದ್ದಾಗ ಉಡುಪಿಯ ಕೃಷ್ಣನ ಪ್ರತಿಮಾಚಲನೆ ಯಾಗಿದ್ದು ಪುನಃ ಪ್ರತಿಷ್ಠೆ ಮಾಡುವ ಸಂದರ್ಭದಲ್ಲಿ ಹೂವಿನಕೆರೆ ಗ್ರಾಮವನ್ನು ಕೃಷ್ಣನಿಗೆ ಬಿಡುವಾಗ "ಮುರು(ಗೇ)ಶ್ವರನ ಸಂನ್ನಿಧಿಯಲ್ಲಿ ಸಹಿರಂಣೋದಕ ದಾನ ಧಾರಾಪೂರ್ವಕವಾಗಿ...." ಎಂಬ ಮಾತು ಬರುವುದು ಗಮನಾರ್ಹ. ಇದನ್ನು ಹೇಳುವ ಶಾಸನವು ಉಡುಪಿಯ ಕೃಷ್ಣಮಠದಲ್ಲಿಯೇ ಇದೆ (AR No. 109 of 1901). ಇಲ್ಲಿ ಮುರುಗೇಶ್ವರನೆಂದರೆ ಸುಬ್ರಹ್ಮಣ್ಯನೇ. ಅಂತೂ ಉಡುಪಿಯ ನಾಲ್ಕು ದಿಕ್ಕುಗಳಲ್ಲಿರುವ ನಾಲ್ಕು ನಾಗಾಲಯಗಳಲ್ಲಿಯೂ ಸುಬ್ರಹ್ಮಣ್ಯನ ವಿಗ್ರಹಗಳೇ ಇವೆ, ಅದೂ ಒಂದೇ ತೆರನಾದ ಮೂರ್ತಿಗಳು.

ಅಂತೂ ನಾಲ್ಕು ದುರ್ಗಾಲಯಗಳು ನಾಲ್ಕು ನಾಗಾಯತಗಳ ನಡುವೆ ಇದ್ದ ಉಡುಪಿಯು ಮೂಡೆಲ (ಮೂದಿಲ್ಲವರು) ನಿಡಂಬೂರು ಗ್ರಾಮದ ಬಲ್ಲಾಳರ ಆಡಳಿತದಲ್ಲಿದ್ದಿತು. ಉಡುಪಿಯಲ್ಲಿ ಉಪಲಬ್ಧವಿರುವ ಪ್ರಾಚೀನ ಶಾಸನಗಳಲ್ಲೆಲ್ಲ "ಶಿವಳಿಯ ಮೂಡೆಲ ನಿಡಂಬೂರು ಗ್ರಾಮದವರ ಒಪ್ಪು" ಎಂಬ ಒಕ್ಕಣೆ ಕಂಡು ಬರುತ್ತದೆ. ನಿಡಂಬೂರು (ಅಂಬಲಪಾಡಿ) ಬಲ್ಲಾಳರ ನೆರವಿನಿಂದಲೇ ಮಧ್ವಾಚಾರ್ಯರು ಕೃಷ್ಣನಿಗೆ ಮಂದಿರವನ್ನು ಕಟ್ಟಿಸಿದರು. ವಾದಿರಾಜ ಸ್ವಾಮಿಗಳ ಕಾಲದಲ್ಲೂ ಈ ಬಲ್ಲಾಳರೇ ಪ್ರಮುಖರಾಗಿದ್ದರೆನ್ನಲು ಸ್ವಾಮಿಗಳು ಅವರಿಗೆ ಆಂಜನೇಯ ಪ್ರತಿಮೆಯನ್ನು ಅನುಗ್ರಹಿಸಿದುದೂ ಪರ್ಯಾಯವೇರುವ ಮುನ್ನ ಅಷ್ಟಮಠದ ಯತಿಗಳು ಈ ಬಲ್ಲಾಳರ

ಮನೆಗೆ ಬಂದು ಪ್ರತಿಮಾದರ್ಶನ ಮಾಡಿಕೊಂಡು ಹೋಗಬೇಕೆಂಬ ಕಟ್ಟುಮಾಡಿದುದೂ ನಿದರ್ಶನಗಳು.

ಆಳುಪ ಅರಸರಿಗೆ ಮೊದಲು ರಾಜಧಾನಿಯಾಗಿದ್ದ ಉದ್ಯಾವರವು ಉಡುಪಿಗೆ ಎರಡೂವರೆ ಮೈಲಿಯಷ್ಟೇ ದೂರದಲ್ಲಿದ್ದಿತು ; ಅನಂತರ ರಾಜಧಾನಿಯಾದ ಬಾರಕೂರು ಉಡುಪಿಯಿಂದ ಹತ್ತು ಮೈಲಿ ದೂರವಷ್ಟೆ. ಈ ಸಾಮೀಪ್ಯದಿಂದಾಗಿ ಆಳುಪರ ಅರಸೊತ್ತಿಗೆ ಇದ್ದಷ್ಟು ದಿನವೂ ಉಡುಪಿಯು ಮಹತ್ವದ ಗ್ರಾಮವಾಗಿದ್ದಿತು. ಅಹಿಚ್ಛತ್ರದಿಂದ ಬ್ರಾಹ್ಮಣರು ತುಳುದೇಶಕ್ಕೆ ವಲಸೆ ಬಂದಾಗಲೂ ಶಿವಳ್ಳಿಯ (ಉಡುಪಿಯ) ಬಳಿ ನೆಲೆಸಿದ ಮನೆತನಗಳ ಸಂಖ್ಯೆ ಮೂರು ಸಾವಿರ ವಂತೆ ! ಅನಂತೇಶ್ವರನ ಸನ್ನಿಧಿಯೇ ಈ ಜನಪ್ರಿಯತೆಗೆ ಕಾರಣವಿದ್ದಿರ ಬಹುದು. ತುಳುನಾಡಿನಲ್ಲೆಲ್ಲ ಅತಿ ಪುಣ್ಯಕ್ಷೇತ್ರವಾಗಿದ್ದಿತೆನ್ನುವುದರಲ್ಲಿ ಅಡ್ಡಿಯಿಲ್ಲ.

೨. ಬಾಲ್ಯ

ಆಚಾರ್ಯರ ಹಿರಿಯರು ಹೊರನಾಡಿನಿಂದ ತುಳುದೇಶಕ್ಕೆ ಬಂದು ಅಲ್ಲಿ ನೆಲೆಸಿದ್ದವರು. ಕದಂಬ ಮಂಡಲದಿಂದ ಬಂದ ಬ್ರಾಹ್ಮಣ ರೆಂದು ಒಂದು ಊಹೆ. ತುಳುನಾಡಿನಲ್ಲಿ ಬ್ರಾಹ್ಮಣ್ಯವನ್ನುಳಿಸಿಕೊಳ್ಳಲು ಅಲ್ಲಿನ ಅರಸರು ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರೆಯಿಸಿಕೊಂಡರೆಂಬ ವಿಚಾರ ಮೊದಲೇ ಪ್ರಸ್ತಾಪಿಸಿದ್ದೇನೆ. ಹೇಗೆ ಬಂದವರು ಮೂವತ್ತೆರಡು ಗ್ರಾಮಗಳಲ್ಲಿ (ಹದಿನಾರು ಪೂರ್ವಗ್ರಾಮಗಳು, ಹದಿನಾರು ಪಶ್ಚಿಮ ಗ್ರಾಮಗಳು) ಬೀಡುಬಿಡುವ ವ್ಯವಸ್ಥೆಯಿದ್ದಿತಂತೆ. ತಾವು ನೆಲೆಸಿದ ಗ್ರಾಮಗಳಿಂದಲೇ ಈ ಬ್ರಾಹ್ಮಣರು ಮುಂದೆ ನಿರ್ದಿಷ್ಟರಾದರು. ಶಿವಳ್ಳಿ

ಯವರು, ಕೋಟದವರು, ಕೋಟೇಶ್ವರದವರು, ಕುಂದಾವರದವರು, ಪಂಚಗ್ರಾಮದವರು ಎಂದು ಮುಂತಾಗಿ ನಿರ್ದೇಶಿಸಿಕೊಳ್ಳುವ ವ್ಯವಹಾರ ಇಂದಿಗೂ ಉಳಿದಿದೆ. ಹದಿನಾರು ಪಶ್ಚಿಮ ಗ್ರಾಮಗಳಲ್ಲಿ ಒಟ್ಟು ಇನ್ನೂರಾರು ಮನೆಗಳು ; ಇವುಗಳಲ್ಲಿ ಶಿವಳ್ಳಿ (ಶಿವಬೆಳ್ಳಿ)ಯವರದ್ದೇ ನೂರಿಪ್ಪತ್ತು ಮನೆಗಳು. ಇವರಲ್ಲಿ ಪ್ರಥಮ, ಮಧ್ಯಮ, ಅಧಮ ದಶಕಗಳೆಂಬ ವರ್ಗೀಕರಣ ವ್ಯವಸ್ಥೆಯೂ ಇದ್ದಿತು. ಪ್ರಥಮ ದಶಕದಲ್ಲಿ ಅಲೆವೂರಾಯ, ಸರಳಾಯ, ತೆಂಕಿಲ್ಲಾಯ ಮುಂತಾದವರಿದ್ದಂತೆ ನಡುವಂತಿಲ್ಲಾಯ (ನಡ್ಡಂತಿಲ್ಲಾಯ, ನಡ್ವಂತಿಲ್ಲಾಯ) ಎನಿಸಿಕೊಳ್ಳುವ ಮನೆಯೂ ಇದ್ದಿತು. ಇದೇ ಮಧ್ವಾಚಾರ್ಯರ ಮನೆತನ.

ತುಳುಭಾಷೆಯಲ್ಲಿ ನಡುವಂತಿಲ್ಲಾಯ (ನಡುವ+ತಿಲ್ಲ+ಆಯ) ಎಂಬ ಪದಕ್ಕೆ ನಡುವಣ ಮನೆಯಲ್ಲಿ ಇರುವವನೆಂದರ್ಥ. ಊರಿನ ನಡುವೆ ಇದ್ದ ಮನೆಗೆ ಈ ನಿರ್ದೇಶನವಿದ್ದಿರಬಹುದು. ಹೀಗೆಯೇ ದಿಕ್ಕುಗಳನ್ನು ಹೊಂದಿಕೊಂಡ ಬಡಗಿಲ್ಲಾಯ, ಪಡ್ಡಿಲ್ಲಾಯ, ತೆಂಕಿಲ್ಲಾಯ, ಮುಡ್ಡಿಂತಿಲ್ಲಾಯ ಮುಂತಾದ ಹೆಸರುಗಳು ಈ ಕಡೆ ಬಳಕೆಯಲ್ಲಿವೆ. ನಡುವಂತಿಲ್ಲಾಯರು ಭಟ್ಟಜನವೆಂದು ಎಣಿಕೆ ; ಅವರ ಮನೆಗೆ ಭಟ್ಟತಿಲ್ಲವೆಂದೇ ಹೆಸರಿದ್ದಿತು. ತೌಳವ ಬ್ರಾಹ್ಮಣರ ವರ್ಗೀಕರಣ ದಲ್ಲಿ ಭಟ್ಟರೆಂದರೆ ಗ್ರಾಮದಲ್ಲಿ ಪಂಚಾಯತಿಕೆ ನಡೆಸುವ ಅಧಿಕಾರವುಳ್ಳ ವರು ; ಊರಿನ ವಿವಾದಗಳನ್ನು ಬಗೆಹರಿಸುವ ಭಾರ ವಹಿಸಿದವರು.

ಮಧ್ವಾಚಾರ್ಯರ ತಂದೆ ನಡುವಂತಿಲ್ಲಾಯರು. ತುಳುವಿನ ಈ ಮಾತನ್ನೇ ಸಂಸ್ಕೃತ ಮಾಡಿ 'ಮಧ್ಯಗೇಹಕುಲಮೌಳಿಮಣಿ'ಯೆಂದು ಮಧ್ವವಿಜಯಕಾರರು ಹೇಳಿದ್ದಾರೆ. ಇವರು ಭಟ್ಟಜನರೆಂಬುದನ್ನೂ 'ಮಧ್ವವಿಜಯ'ವೇ ಸ್ಪಷ್ಟಪಡಿಸುತ್ತದೆ ('ಯಂ ಭಟ್ಟ ಇತ್ಯಭಿವದಂತಿ ಜನಾ ವಿನೀತಂ'). ಇದು ಮನೆತನದ ಹೆಸರಾಯಿತು, ಉದ್ಯೋಗದ

ಹೆಸರಾಯಿತು. ಅವರ ವೈಯಕ್ತಿಕವಾದ ಹೆಸರೇನೆಂಬುದು ತಿಳಿದು ಬಂದಿಲ್ಲ. ಸಂಪ್ರದಾಯಪದ್ಧತಿಯನ್ನು ಬರೆದ ಹೃಷೀಕೇಶತೀರ್ಥರೂ ಆಚಾರ್ಯರ ಮನೆತನವನ್ನು ಪ್ರಸ್ತಾಪಿಸುತ್ತ 'ಶ್ರೀಮನ್ಮಧ್ಯಗೃಹಾಖ್ಯ-ವಿಪ್ರಗೃಹಜಃ' ಎಂದಷ್ಟೇ ಹೇಳಿದ್ದಾರೆ. ಈ ನಡುಮನೆಯವರಾದ ಭಟ್ಟರು '**ಭಾರತ ಪುರಾಣಮಹಾರಹಸ್ಯ**'ವನ್ನು ತಿಳಿದಿದ್ದವರೆಂದು ಮಧ್ವವಿಜಯ ದಲ್ಲಿ ನಿರ್ದೇಶನವಿದೆ ; '**ಗೋವಿಂದಸುಂದರಕಥಾಸುಧೆ**'ಯಿಂದ ಜನರನ್ನು ಸಂತೋಷಪಡಿಸುತ್ತಿದ್ದರೆಂಬ ವರ್ಣನೆಯಿದೆ. ಪ್ರತಿದಿನವೂ ಅನಂತೇಶ್ವರನ ದೇವಾಲಯದಲ್ಲಿ ಕಥಾನಿರ್ವಚನ ಮಾಡುತ್ತಿದ್ದರಂತೆ. ಆಚಾರ್ಯರ ತಾಯಿಯ ಹೆಸರೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ ; ವೇದವತಿಯೆಂದು ಸಂಪ್ರದಾಯದ ವಿವರವೇನೋ ಇದೆ.

ಇವರು ಶಿವಬೆಳ್ಳಿ (ಉಡುಪಿ)ಯ ಬಳಿ, ಆಗ್ನೇಯದಿಕ್ಕಿನಲ್ಲಿ ಏಳುಮೈಲಿ ದೂರದಲ್ಲಿರುವ, ಬೆಳ್ಳೆ ಎಂಬ ಹಳ್ಳಿಯಲ್ಲಿ ವಾಸವಾಗಿದ್ದರು. ಇದು ಪಾಜಕಕ್ಷೇತ್ರವೆಂದು ಪ್ರಸಿದ್ಧವಾಗಿದ್ದಿತು. ಇದಕ್ಕೆ ಎರಡು ಮೈಲಿ ದೂರದಲ್ಲಿ ಕುಂಜಾರು (ವಿಮಾನಗಿರಿ) ಎಂಬಲ್ಲಿ ಪರಶುರಾಮನೇ ಪ್ರತಿಷ್ಠೆಮಾಡಿದ ದುರ್ಗಾಲಯವಿದ್ದಿತು, ಇದೆ. ಪಾಜಕಕ್ಷೇತ್ರದಲ್ಲಿಯೇ ಆಚಾರ್ಯರು ಅವತರಿಸಿದುದು. ಈ ಕಾರಣದಿಂದಲೇ ಅದು ಹಿಮಾಲಯಕ್ಕಿಂತ ಪವಿತ್ರವಾದ ಸ್ಥಳವೆಂದು ಹೃಷೀಕೇಶ ತೀರ್ಥರು ಪ್ರಶಂಸಿಸಿದ್ದಾರೆ ; ಹಿಮಾಲಯವಾದರೆ ಜಡವಾದ ಗಂಗಾನದಿಗೆ ಉಗಮಸ್ಥಾನ, ಪಾಜಕವೋ ಚೇತನಸ್ವರೂಪರಾದ ಸೌಖ್ಯತೀರ್ಥ (ಮಧ್ವಾಚಾರ್ಯ)ರಿಗೆ ಮೂಲಸ್ಥಳವಷ್ಟೆ.

ಇಲ್ಲಿರುತ್ತಿದ್ದ ನಡುಮನೆಯ ಭಟ್ಟರು ಅಷ್ಟೇನು ಅನಕೂಲಸ್ಥರಾಗಿ ದ್ದಂತೆ ತಿಳಿದುಬರುವುದಿಲ್ಲ. ಪೌರಾಣಿಕವೃತ್ತಿಯ ಜತೆಗೆ ಬೇಸಾಯವನ್ನೂ ಹಿಡಿದಿದ್ದರೆಂಬ ಪ್ರತೀತಿಯಿದೆ. ಕಕ್ರಮನೆತನದ ಬಂಟ ಜಮೀನುದಾರ

ನೊಬ್ಬನ ಬಳಿ ಇವರು ಭೂಮಿಯನ್ನು ಗುತ್ತಿಗೆಗೆ ತೆಗೆದುಕೊಂಡಿದ್ದರೆಂದೂ ಈ ಮನೆಯವರು ಇಂದಿಗೂ ಇದ್ದಾರೆಂದೂ ದಕ್ಷಿಣ ಕನ್ನಡದ ಜಿಲ್ಲಾ ಮ್ಯಾನುಯಲ್‌ನ ಪರಿಶಿಷ್ಟ ಗ್ರಂಥ ಹೇಳುತ್ತದೆ. ಭಟ್ಟರಿಗೆ ಎತ್ತೊಂದನ್ನು ಮಾರಿದವನೊಬ್ಬನು ಸುಮಾರು ಕಾಲವಾದರೂ ಹಣ ಪಡೆಯದಿರಲು, ತನಗೆ ಆಗಲೇ ಹಣ ಸಲ್ಲಲೇಬೇಕೆಂದು ಅವರ ಮನೆಯ ಬಾಗಿಲ ಮುಂದೆ ತಗಾದೆ ಮಾಡಿದ ವಿವರ ಮಧ್ವವಿಜಯದಲ್ಲಿ ಬರುತ್ತದೆ. ಭಟ್ಟರ ಬಲಿ ಹಣವಿರಲಿಲ್ಲವಂತೆ, ಮಗುವಾಗಿದ್ದ ಆಚಾರ್ಯರು ಹಣವೆಂದು ಹುಣಸೇ ಬೀಜಗಳನ್ನೇ ಆತನಿಗೆ ಕೊಡಲು ಅದನ್ನೇ ಅವನು ಪರಿಗ್ರಹಿಸಿ ತೃಪ್ತನಾದನಂತೆ.

ಈ ಭಟ್ಟರ ಮನೆಯನ್ನು ಈಗಲೂ ಬೆಳ್ಳೆಯಲ್ಲಿ ತೋರಿಸುತ್ತಾರೆ. ಅಷ್ಟಮಠಗಳಲ್ಲಿ ಒಂದಾದ ಸೋದೆಮಠದ ಸ್ವಾಮಿಗಳೊಬ್ಬರು ಈಗ್ಗೆ ಸುಮಾರು ಐನೂರು ವರ್ಷಗಳಷ್ಟು ಹಿಂದೆ ಈ ಮನೆಯಲ್ಲಿ ಮದ್ವಾಚಾರ್ಯರ ಪ್ರತೀಕವನ್ನು ಪ್ರತಿಷ್ಠೆ ಮಾಡಿರೆಂದು ಐತಿಹ್ಯವಿದೆ ; ಇದನ್ನು ಮಾಡಿದವರು ವಾದಿರಾಜಸ್ವಾಮಿಗಳೇ ಎಂದೂ ಹೇಳುತ್ತಾರೆ. ಈಗ ಈ ಮನೆಯ ಅಷ್ಟಮಠಗಳಲ್ಲಿ ಇನ್ನೊಂದಾದ ಕಾಣಿಯೂರು ಮಠದವರ ವಶದಲ್ಲಿದೆ ; ಈ ಮಠದ ಆದ್ಯ ಗುರುಗಳಾದ ಶ್ರೀರಾಮ ತೀರ್ಥರು ಆಚಾರ್ಯರ ಮೂಲ ಶಿಷ್ಯರೆಂದು ಪ್ರತೀತಿ. ಮನೆಯ ಆವರಣದಲ್ಲೇ ಹಿಂದೆ ಕೊಳವೊಂದಿದೆ ; ಇದನ್ನು ವಾಸುದೇವತೀರ್ಥವೆನ್ನುತ್ತಾರೆ. ತಮ್ಮ ತಾಯಿಯ ನಿತ್ಯದ ಸ್ನಾನಕ್ಕೆಂದು ಆಚಾರ್ಯರೇ ಇದನ್ನು ನಿರ್ಮಿಸಿದರೆಂದು ಪ್ರತೀತಿ. ಆದರೆ ಹೃಷೀಕೇಶತೀರ್ಥರು ತಮ್ಮ 'ಸಂಪ್ರದಾಯ ಪದ್ಧತಿ'ಯಲ್ಲಿ ಆಚಾರ್ಯರು ವಟುವಾಗಿದ್ದಾಗ ಜೊತೆಗಿಲ್ಲದೆ ದೂರದ ನೀರಿನಲ್ಲಿ ಸ್ನಾನಕ್ಕೆ ಹೋಗಬಾರದೆಂದು ತಾಯಿ ತಡೆಯಲು ಆಗ ಈ ಸರಸ್ಸನ್ನು ನಿರ್ಮಿಸಿದರೆಂದು ಹೇಳಿದ್ದಾರೆ

(ಆತ್ಮಜನನೀವಾಚಾ ಯದಾ ವಾರಿತಃ, ಸ್ನಾನಾರ್ಥಂ ತ್ವಮೃತೇ ಸಹಾಯಮಧುನಾ ನೋ ಯಾಹಿ ತಾತೇತ್ಯಸೌ ; ತತ್ಕಾಲೇ ವ್ಯತನೋದ್ಗೃಹಾಂತಿಕಗತಂ ಸ್ವಾಖ್ಯಾಯುತಂ ಸತ್ವರಃ). ಅಂತೂ ಇದು ಆಚಾರ್ಯರು ಹುಟ್ಟಿ ಬೆಳೆದ ಮನೆ. ಅದನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದು ಅವರ ಅನುಯಾಯಿಗಳ ಶ್ರದ್ಧೆಗೆ ಸಾಕ್ಷಿ.

ಆಚಾರ್ಯರ ಜನ್ಮದಿನದ ವಿಚಾರವಾಗಿ ಪ್ರಸ್ತಾಪ ಆಗಲೇ ಬಂದಿದೆ. ಹೃಷೀಕೇಶತೀರ್ಥರ ಎಣಿಕೆಯಂತೆ ಕ್ರಿಸ್ತಾಬ್ಧ ೧೨೩೮ರ ಸೆಪ್ಟೆಂಬರ್ ತಿಂಗಳ ಇಪ್ಪತ್ತನೆಯ ತಾರೀಖು (ವಿಳಂಬಿಯ ಆಶ್ವೀಜ ಶುಕ್ಲ ದಶಮಿ) ಆಚಾರ್ಯರು ಅವತರಿಸಿದ ದಿನ. ಆಚಾರ್ಯರು ಹುಟ್ಟುವ ಮೊದಲೇ ಭಟ್ಟರಿಗೆ ಮೂವರು ಮಕ್ಕಳಿದ್ದು ಇಬ್ಬರು ತೀರಿಕೊಂಡಿದ್ದರೆಂದೂ ಇದ್ದವಳು ಮಗಳೊಬ್ಬಳೆಂದೂ ಹೇಳುತ್ತಾರೆ. ಗಂಡುಮಕ್ಕಳಿಲ್ಲವೆಂಬ ಚಿಂತೆ ಭಟ್ಟರನ್ನು ಬಹುವಾಗಿ ಕಾಡುತ್ತಿದ್ದಿತು. ತಮ್ಮ ಕುಲದೇವತೆಯಾದ ಅನಂತೇಶ್ವರನ (ರಜತಪೀಠಪುರಾಧಿವಾಸನ) ಬಳಿ ಹನ್ನೆರಡು ವರ್ಷಕಾಲ ತಪಸ್ಸನ್ನು ಆಚರಿಸಿದರಂತೆ. ಇದರ ಫಲವಾಗಿ ಆಚಾರ್ಯರು ಅವರ ಮಗನಾಗಿ ಅವತರಿಸಿದರೆಂಬ ವಿವರವಿದೆ. ಅವರ ಅವತಾರಕ್ಕೆ ಮುನ್ಸೂಚನೆಯಾಗಿ ಒಂದು ಪ್ರಸಂಗ ನಡೆಯಿತು. ಉಡುಪಿಯ ಅನಂತೇಶ್ವರನ ಗುಡಿಯ ಅಂಗಳದಲ್ಲೊಂದು ದಿನ (ಅಯನ ಸಂಕ್ರಾಂತಿ ಉತ್ಸವದ ಸಂದರ್ಭದಲ್ಲಿ) ಜನ ನೆರೆದಿದ್ದಾಗ ಒಬ್ಬನ ಮೈಮೇಲೆ ದೈವವು ಬಂದು, ಆವಿಷ್ಟನಾದ ಅವನು ದೇವರ ಎದುರಿಗಿದ್ದ ಧ್ವಜಸ್ತಂಭವನ್ನು ಸರಸರನೆ ಹತ್ತಿ ಅದರ ಮೇಲೆ ನಿಂತು, (ಅದು ಮಾನಸ್ತಂಭವಾದುದರಿಂದ ಮೇಲೆ ನಿಲ್ಲಲು ಜಾಗವಿದೆ) ಕುಣಿಯಲಾರಂಭಿಸಿದನಂತೆ ; ಕೈಗಳನ್ನೆತ್ತಿ ಗಟ್ಟಿಯಾಗಿ ''ಇನ್ನು ಕೆಲವೇ ದಿನಗಳಲ್ಲಿ ಸರ್ವಜ್ಞನೊಬ್ಬನು ನಮ್ಮ ನಡುವೆ ಹುಟ್ಟುತ್ತಾನೆ'' ಎಂದು

ಕೂಗಿ ಹೇಳಿದನಂತೆ. ಜನಗಳ ಕೋಲಾಹಲದೊಂದಿಗೆ ಕುತೂಹಲವೂ ಬೆರೆತು ಬಂದಿತು. ಈ ಪ್ರಸಂಗ ಜರುಗಿದ ತರುಣದಲ್ಲೇ ಆಚಾರ್ಯರು ಅವತರಿಸಿದರಾಗಿ ಅವರು ಭಗವತ್ಕಾರ್ಯಸಾಧಕರೆಂಬ ವಿಶ್ವಾಸವು ಮಂದಿಯಲ್ಲಿ ಮೂಡಿಬಂದಿತು.

ಅಂತೂ ಹೀಗೆ ಹುಟ್ಟಿದ ಮಗುವಿಗೆ ವಾಸುದೇವನೆಂದು ಹೆಸರಿಟ್ಟರೆಂಬ ವಿವರವಿದೆ. ಮಗು ಹುಟ್ಟುವಾಗ ಭಟ್ಟರು ಮನೆಯಲ್ಲಿರಲಿಲ್ಲವಂತೆ ; ಕುಲದೇವರಾದ ಅನಂತೇಶ್ವರನ ದರ್ಶನಕ್ಕೆಂದು ಉಡುಪಿಗೆ ಹೋಗಿದ್ದರಂತೆ. ಹಿಂದಿರುಗಿ ಬರುವಷ್ಟರಲ್ಲಿ ಮನೆಯ ಮುಂದೆ ದುಂದುಭಿನಾದ ಮೊಳಗುತ್ತಿದ್ದು ತಮಗೆ ಪುತ್ರೋತ್ಸವವಾದ ವಾರ್ತೆ ಮುಟ್ಟಿತಂತೆ. ತಾವು ಅನಂತೇಶ್ವರನ ಸನ್ನಿಧಿಯಲ್ಲಿ ಹನ್ನೆರಡು ವರ್ಷಗಳ ಕಾಲ ಮಾಡಿದ ಸೇವೆಯ ಫಲವಾಗಿಯೇ, ಅನಂತೇಶ್ವರನ ಅನುಗ್ರಹದಿಂದಲೇ, ಈ ಮಗು ಹುಟ್ಟಿತೆಂದು ಅವರ ನಂಬಿಕೆ ; ಊರವರಿಗೂ ಇದೇ ನಂಬಿಕೆ ಹಿಡಿಸಿತು. ಹೀಗಾಗಿ ಆಚಾರ್ಯರು ಅವತರಿಸುವಾಗಲೇ ದೈವಾನುಗ್ರಹದ ಕೀರ್ತಿಯು ಹರಡಿ ಮುಂದೆ ಅವರ ವ್ಯಕ್ತಿತ್ವಕ್ಕೆ ಹಿರಿಮೆಯನ್ನು ಒದಗಿಸಿತು.

ಭಟ್ಟರು ಬಡವರಾದುದರಿಂದ ಹುಟ್ಟಿದ ಮಗುವಿಗೆ ಹಾಲುಣಿಸಲು ಹಸು ಇದ್ದಿತೋ ಇಲ್ಲವೋ. ಮೂಡಿಂತಿಲ್ಲಾಯ (ಪೂರ್ವಾಲಯ, ಪೂರ್ವದಿಕ್ಕಿನ ಮನೆಯವರು) ಎಂಬ ಗೃಹಸ್ಥನೊಬ್ಬನು ಭಟ್ಟರಿಗೆ ಹಸುವೊಂದನ್ನು ದಾನಮಾಡಿದನೆಂಬ ವಿವರವಿದೆ. ಮೂಡಿಂತಿಲ್ಲಾಯ ಮನೆತನದವರೂ ಶಿವಳ್ಳಿ ಬ್ರಾಹ್ಮಣರು ; ಆದರೆ ಪಕ್ಷನಾಥರು, ಎಂದರೆ ಶಿಕ್ಷಿಸುವ, ರಕ್ಷಿಸುವ ಹೊಣೆ ಹೊತ್ತವರು. ಊರಿಗೆ ಪ್ರಮುಖರಾದುದರಿಂದ ಶ್ರೀಮಂತರಾಗಿದ್ದಿರಬಹುದು. ಭಟ್ಟರಿಗೆ ಗೋದಾನವನ್ನು ಮಾಡಿ ಪುಣ್ಯವನ್ನಾರ್ಜಿಸಿದ ಈತನು ಅದೇ

ಮನೆತನದಲ್ಲಿ ಮುಂದೆ ತನ್ನ ಮೊಮ್ಮಗನೇ ಆಗಿ ಹುಟ್ಟಿ ಆಚಾರ್ಯ ರಿಂದಲೇ ತಾರಕವಾದ ಜ್ಞಾನವನ್ನು ಪಡೆದನಂತೆ. 'ದಾನಂ ಧ್ರುವಂ ಫಲತಿ ಪಾತ್ರ ಗುಣಾನುಕೂಲ್ಯಾತ್' ಎಂದು ನಾರಾಯಣ ಪಂಡಿತಾ-ಚಾರ್ಯರು ವಿವರಿಸಿದ್ದಾರೆ.

ಮಗುವಿಗೆ ಮೂರುತಿಂಗಳು ಕಲಿಯುವ ವೇಳೆಗೆ ದೇವರ ಗುಡಿಗೆ ಅದನ್ನು ಕರೆದೊಯ್ಯಬೇಕಷ್ಟೆ. ಭಟ್ಟರು ತಮ್ಮ ಕುಲದೇವರಾದ ಅನಂತೇಶ್ವರನ ಗುಡಿಗೆ ಮಗುವನ್ನು ಕರೆದುಕೊಂಡು ಹೋದಾಗ ಕೌತುಕವೊಂದು ನಡೆಯಿತು. ಗುಡಿಯಿದ್ದುದು ಉಡುಪಿಯಲ್ಲಿ; ಭಟ್ಟರ ಮನೆಯಿದ್ದುದು ಬೆಳ್ಳೆಯಲ್ಲಿ. ಮನೆಯಿಂದ ಗುಡಿಮುಟ್ಟಲು ಆರೇಳು ಮೈಲಿ ದೂರ ನಡೆದು ಹೋಗಬೇಕಾಗಿದ್ದಿತು. ನಡುವೆ ದಟ್ಟವಾದ ಕಾಡು ಬೇರೆ. ಕಾಡಿನ ನಡುವೆ ಕುಕ್ಕಿಕಟ್ಟೆಯೆಂಬಲ್ಲಿ ತುಂಬ ಕಾರಣಿಕವುಳ್ಳ ಭೂತಾಲಯವೊಂದಿದ್ದಿತು. ಭಟ್ಟರು ಆದಿನ ಸಂಜೆ ಬೆಳ್ಳೆಯಿಂದ ಉಡುಪಿಗೆ ಬಂದು ಅನಂತೇಶ್ವರನ ಗುಡಿಯಲ್ಲಿ ಮಗುವಿಗೆ ರಕ್ಷೆಯನ್ನು ಪಡೆದುಕೊಂಡು ಮತ್ತೆ ಮನೆಗೆ ಹೊರಟಾಗ ಸುಮಾರು ರಾತ್ರಿಯಾಗಿ ದ್ದಿತು. ಕಾಡಿನಲ್ಲಿ ನಾಲ್ಕಾರು ಮಂದಿ ಜೊತೆಗಾರರೊಂದಿಗೆ ನಡೆದು ಬರುತ್ತ ಕುಕ್ಕಿಕಟ್ಟೆಯ ದೈವಸ್ಥಾನದ ಬಳಿ ಬರುವ ಹೊತ್ತಿಗೆ ನಡುರಾತ್ರಿ. ದೈವಗಳು ಅಡ್ಡಾಡುವ ಕಾಲ ಅದು ; ಆ ಹೊತ್ತಿನಲ್ಲಿ ಅಂಥ ಬೀಡುಗಳಲ್ಲಿ ಮನುಷ್ಯರು ಸಂಚಾರ ಮಾಡುವ ಪದ್ಧತಿಯಿಲ್ಲ. ಭಟ್ಟರಿಗೂ ಅವರ ಪರಿವಾರದವರಿಗೂ ವಿಧಿಯಿರಲಿಲ್ಲ ; ಆ ದಾರಿಯಲ್ಲಿಯೇ ಹಳ್ಳಿಗೆ ಹೋಗಬೇಕಾಗಿದ್ದಿತು. ಮೇಲಾಗಿ ಅನಂತೇಶ್ವರನ ರಕ್ಷೆಯಿದೆಯೆಂಬ ವಿಶ್ವಾಸವೂ ಇದ್ದಿತು. ಆದರೆ ದೈವಗಳಿಗೆ ಮುನಿಸು ಬಾರದೆ ಉಂಟೆ ? ಭಟ್ಟರ ಜತೆಯಲ್ಲಿ ಬಂದಿದ್ದವನೊಬ್ಬ ಕಿಟ್ಟೆಂದು ಕೂಗಿಕೊಂಡು ಬಾಯಿಂದ ರಕ್ತವನ್ನು ಕಾರುತ್ತ ಪ್ರಜ್ಞೆತಪ್ಪಿ ಬಿದ್ದನು. ಇದು

ಭೂತಚೇಷ್ಟೆಯೆಂದು ಅವರು ಬಗೆಯುವಷ್ಟರಲ್ಲೇ ಮತ್ತೊಬ್ಬನ ಮೈಮೇಲೆ ದೈವವು ಕಾಣಿಸಿಕೊಂಡು "ನಮ್ಮ ವಿಹಾರ ಸಮಯದಲ್ಲಿ ಅಡ್ಡ ಬಂದ ನಿಮ್ಮನ್ನೆಲ್ಲ ಸಾಯಬಡಿಯಬೇಕಾಗಿದ್ದಿತು. ಆದರೆ ನಿಮ್ಮೊಂದಿಗೆ ಈ ಮಗು ತುಂಬ ಪ್ರಬಲವಾದ ಚೇತನವುಳ್ಳದ್ದು. ಅದರ ಸಾನ್ನಿಧ್ಯದ ಪ್ರಭಾವದಿಂದ ನಮ್ಮ ಶಕ್ತಿಯು ಕುಂಠಿತವಾಗಿದೆ" ಎಂದು ಹೇಳಿತು. ನಾರಾಯಣ ಪಂಡಿತಾಚಾರ್ಯರು ಈ ಪ್ರಸಂಗವನ್ನು ನಿರೂಪಿಸುತ್ತ ದೈವವು ಮಗುವನ್ನು 'ಲೋಕೇಶ್ವರ'ನೆಂದು ಬಣ್ಣಿಸಿತೆಂದು ಹೇಳಿದ್ದಾರೆ. ಈ ಪದಪ್ರಯೋಗವು ಕೇವಲ ಆಲಂಕಾರಿಕವಾದುದೋ, ಅಥವಾ ಆ ಕಾಲದಲ್ಲಿ ತುಳುನಾಡಿನಲ್ಲಿ ಬಳಕೆಯಲ್ಲಿದ್ದ ನಾಥಪಂಥದ ಪ್ರಮುಖ ದೇವರಾದ ಲೋಕೇಶ್ವರನ (ಮಂಗಳೂರು ಕದರಿಯ ವಿಹಾರದ ದೇವರ)ಅಂಶವನ್ನು ಅಸಾಧಾರಣವಾದ ಈ ಮಗುವಿನಲ್ಲಿ ಆ ಜನರು ಅಧ್ಯಾರೋಪ ಮಾಡಿದ್ದರೋ, ಹೇಳುವುದು ಕಷ್ಟ. ವೈಷ್ಣವ ವಾಙ್ಮಯದಲ್ಲಂತೂ ಆಚಾರ್ಯರಿಗೆ ಲೋಕೇಶ್ವರನೆಂಬ ವ್ಯವಹಾರ ಅಪ್ರಸಿದ್ಧವಾದುದು, ಅಸಾಂಪ್ರತವೆಂದರೂ ತಪ್ಪಾಗದು.

ಮುಂದೆ ಮಗುವಿನ ಅಮಾನುಷಲೀಲೆಗಳನ್ನು ಮಧ್ವವಿಜಯವು ಪ್ರಸ್ತಾಪ ಮಾಡುತ್ತದೆ. ಸಣ್ಣ ಹುಡುಗನಾಗಿದ್ದಾಗಲೇ ಒಮ್ಮೆ ವಾಸುದೇವನು ತಂದೆ ತಾಯಿಯರೊಂದಿಗೆ ಬೇರೆ ಹಳ್ಳಿಗೆ ಹೋದನಂತೆ ; ನೆಂಟರ ಮನೆಯ ಮದುವೆಗಾಗಿ ನೇಯಿಂಪಳ್ಳಿಗೆ ಎಂದು ವಿವರವಿದೆ. ಮಧ್ವವಿಜಯದಲ್ಲಿ 'ಘೃತವಲ್ಯಪಿ' ಎಂಬ ಮಾತು ಇನ್ನೊಂದು ಪ್ರಸಂಗದಲ್ಲಿ ಬರುತ್ತದ (೩ನೇ ಸರ್ಗ, ೨೧ನೇ ಶ್ಲೋಕ). ಅಂತೂ ಗ್ರಾಮಾಂತರಕ್ಕೆ ಹೀಗೆ ಹೋಗಿದ್ದಾಗ ತಾನೊಬ್ಬನೇ 'ಕಾನನ ದೇವತಾ ಸದನ' ಮತ್ತು 'ಲಘುನಾರಿಕೇಳ' ಎಂಬ ಎರಡು ಸ್ಥಳಗಳಿಗೆ ನಡೆದೇ ಹೋಗಿ ಅಲ್ಲಿನ ದೇವರಿಗೆ ಪೂಜೆ ಸಲ್ಲಿಸಿದನೆಂಬ ಉಲ್ಲೇಖವಿದೆ.

'ಕಾನನದೇವತಾ ಸದನ' ಎನ್ನುವುದು ಕೊಡವೂರು ಗ್ರಾಮವೆಂದು ನಿರ್ದೇಶಿಸುತ್ತಾರೆ. ನಿಡಂಬೂರು ಬಲ್ಲಾಳರ ಆಳ್ವಿಕೆಗೇ ಸೇರಿದ್ದ ಈ ಗ್ರಾಮವು ಈಗಿನ ಸಮುದ್ರತೀರದ ಮಲ್ಪೆಯ ಬಳಿಯಿದ್ದಿತು. ಇಲ್ಲಿ ಷಣ್ಮುಖ-ಸುಬ್ರಹ್ಮಣ್ಯನ ಗುಡಿಯೊಂದಿದೆ ; ಅದನ್ನೇನೋ ಈಗ ಬಲರಾಮನೆಂದು ವ್ಯವಹರಿಸುತ್ತಾರೆ. ಇದಲ್ಲದೆ ಅನಂತೇಶ್ವರನ ಗುಡಿಯೂ ಇದೆ. ಉಡುಪಿಯಲ್ಲಿದ್ದಂತೆ ಈ ಗುಡಿಯ ಮುಂದೆಯೂ ಮಾನಸ್ತಂಭವಿದ್ದು ಒಂದು ಕಾಲಕ್ಕೆ ಇದು ಜೈನರ ಅನಂತನಾಥ ಬಸದಿಯಾಗಿದ್ದಿತೆಂದು ಸೂಚಿಸುತ್ತದೆ. ಇಲ್ಲಿನ ಶಂಕರನಾರಾಯಣ ಗುಡಿಯು ಪ್ರಸಿದ್ಧವಾಗಿದ್ದಿತು. ಇದನ್ನೇ ಕಾನನದೇವತೆ (ಕಾಡಿನ ದೈವ) ಎಂದು ವ್ಯವಹರಿಸುತ್ತಿದ್ದಂತೆ ತಿಳಿದು ಬರುತ್ತದೆ. ಸಹ್ಯಾದ್ರಿಖಂಡದ ಉಡುಪಿ ಕ್ಷೇತ್ರ ಮಹಾತ್ಮೆಯಲ್ಲಿ ಯಾತ್ರಾ ಕ್ರಮವನ್ನು ವಿವರಿಸುತ್ತ ಸಮುದ್ರಸ್ನಾನವನ್ನು (ಮಲ್ಪೆಯ ಬಳಿ) ಮಾಡಿಕೊಂಡು ಅಲ್ಲಿಯೇ "ದೃಷ್ಟ್ವಾ ಕಾನನದೇವತಾಂ", ಅನಂತರ ಕೃಷ್ಣನ ಗುಡಿಗೆ ಬರಬೇಕೆನ್ನುತ್ತದೆ. ಇದರ ವ್ಯಾಖ್ಯಾನಕಾರರು "ನಿಡಂಬೂರು ಕಾನನ ದೇವತೆಯಾದ ಶ್ರೀಶಂಕರ ನಾರಾಯಣದೇವರೆ"ಂದು ಸ್ಪಷ್ಟಪಡಿಸಿದ್ದಾರೆ. ಆಚಾರ್ಯರು ಈ ಸಂದರ್ಭದಲ್ಲಿ ಸಂದರ್ಶಿಸಿದ ಇನ್ನೊಂದು ಗ್ರಾಮ ಲಘುನಾರಿಕೇಳ ; ಇದನ್ನು ತಾಳೆಕುಡೆ ಅಥವಾ ಬನ್ನಿಂಜೆ ಎಂಬ ಹಳ್ಳಿಯೆಂದು ಹೇಳುತ್ತಾರೆ. ಹಳೆಯ ಶಾಸನಗಳಲ್ಲಿ ಈ ಎಲ್ಲ ಊರುಗಳೂ ಒಟ್ಟಿಗೆ ಉಲ್ಲೇಖಕ್ಕೆ ಬರುತ್ತಿದ್ದುದುಂಟು. ನಿದರ್ಶನಕ್ಕೆ

"ಶಿವಳಿಯ ಮೂದಿಲ್ಲವರು ನಿಡಂಬೂರು ಗ್ರಾಮದ ಮೊಪ್ಪು, ಉಡುಪಿನ ಶ್ರೀ ಮಹಾದೇವರು ಸಗುರಿಯ ಕುಂಜತವನ ನಡುವಂತಿ ಅನವರತ ಹೇವಳಿಯ ದೇವರು ಬಂನಿಂಜದ ಅಧಿವಾಸದ ಜನನಿಗಳ ವೊಪ್ಪು, ತಾಳೆಕುಡೆ ದೇವರು ಕೊಡಊರ ಜನನಿಗಳ ವೊಪ್ಪು, ಕಾನಡ ಶಂಕ್ರನಾರಾಯಣದೇವರ ವೊಪ್ಪು"

(AR No. 111 of 1901).

ಇಲ್ಲಿ ಕೊಡುವೂರ ದೇವರನ್ನು 'ಜನನಿ' ಎಂದು ನಿರ್ದೇಶಿಸಿರುವುದನ್ನು ಗಮನಿಸಬೇಕು ; 'ಕಾನನ ದೇವತಾ' ಎಂಬ ಮಧ್ವವಿಜಯದ ವರ್ಣನೆಗೆ ಇದು ಸರಿಹೋಗುತ್ತದೆ. ಶಂಕರನಾರಾಯಣ ಕಾನಡ (ಕ್ರೋಡ)ದ ದೇವರು. ಮಧ್ವಾಚಾರ್ಯರು ಸಂದರ್ಶಿಸಿದುದು ಕೊಡವೂರ ದುರ್ಗೆಯನ್ನೇ ಇರಬಹುದು.

ಈ ಎರಡು ಹಳ್ಳಿಗಳನ್ನೂ ನೋಡಿಕೊಂಡು ಉಡುಪಿಗೆ (ರಜತಪೀಠಪುರಂ) ಬಂದರೆಂದೂ ಅಲ್ಲಿ ಹರಿಯನ್ನು ಅರ್ಚಿಸಿದರೆಂದೂ ಮಧ್ವವಿಜಯ ಹೇಳುತ್ತದೆ. ಇಲ್ಲಿ ಹರಿಯೆಂದರೆ ಅನಂತೇಶ್ವರ. ನಾರಾಯಣ ಪಂಡಿತಾಚಾರ್ಯರು ಅನಂತೇಶ್ವರನನ್ನು ಭುಜಂಗಶಯನ (೨. ೧೯) ವಿಷ್ಣು (೨, ೨೪), ಹರಿ (೨, ೩೨) ಎಂದು ವ್ಯವಹರಿಸಿರುವುದುಂಟು. ಅಂತೂ ತನ್ನವರಿಗೆ ಗೊತ್ತಿಲ್ಲದಂತೆ ಈ ಹುಡುಗನು ಬಹುದೂರ (ದೀರ್ಘತಮೇ ಪಥಿ) ಹೋಗಿರಲು, ಮಧ್ಯಗೇಹಭಟ್ಟರು ಹುಡುಕುತ್ತ ಬಂದು ಅವನನ್ನು ಕರೆದುಕೊಂಡು ಹೋದರಂತೆ. ''ಇಷ್ಟು ದೂರ ಬಂದೆಯಲ್ಲ, ನಿನ್ನ ಜೊತೆಗೆ ಇದ್ದವರು ಯಾರು ?'' ಎಂದು ತಂದೆ ಕೇಳಲು ಹುಡುಗನು ''ಕಾಡಿನ ಒಡೆಯನೇ ನನ್ನ ಸ್ನೇಹಿತ'' (ಸಖಾ ಮಮ ಕಾನನಗೋ ವಿಭುಃ) ಎಂದು ಉತ್ತರವಿತ್ತನಂತೆ. ಹುಡುಗನ ಧೈರ್ಯ ಹೀಗೆ ಹಲವಾರು ಬಾರಿ ಪ್ರಕಟವಾಯಿತು.

ತಂದೆಯಿಂದಲೇ ಬಾಲ್ಯ ವಿದ್ಯಾಭ್ಯಾಸ ನಡೆಯಿತು. ತನ್ನ ಮಗ ಅಸಾಧಾರಣ ಬುದ್ಧಿಶಾಲಿಯೆಂದೂ, ಶಾಲೆಗೆ ಕಳುಹಿಸಿದರೆ 'ಜನಮನೋವಚನಗ್ರಹಪೀಡನೆ'ಯಾದೀತೆಂದು ಬಗೆದು ವಿಜನ ಸ್ಥಳದಲ್ಲಿ ಅವನಿಗೆ ಶಿಕ್ಷಣವನ್ನು ಒದಗಿಸಿದನೆಂದೂ ಮಧ್ವವಿಜಯದ ವಿವರವಿದೆ. ಒಮ್ಮೆ ತಾಯಿಯೊಂದಿಗೆ ನೇಯಂಪಳ್ಳಿಗೆ ಹೋಗಿದ್ದಾಗ ಅಲ್ಲಿ

ಧೌತಪಟವೆಂಬ ಮನೆತನದ ಶಿವನೆಂಬ ಹೆಸರಿನ ಪೌರಾಣಿಕನು ಪ್ರವಚನ ನಡೆಸುತ್ತಿದ್ದನಂತೆ. ಹುಡುಗನಾದ ವಾಸುದೇವನು ಅದನ್ನು ಕೇಳುತ್ತ ನಿಂತಿದ್ದು, ಶಿವನು ಒಂದು ಸ್ಥಳದಲ್ಲಿ ಸರಿಯಾಗಿ ಅರ್ಥವನ್ನು ಹೇಳದೆ ಇರಲು ತಾನು ಸಭೆಯ ಮುಂದೆ ಅದನ್ನು ಕಾಣಿಸಿ ಸರಿಯಾದ ಅರ್ಥವನ್ನು ಹೇಳಿದನಂತೆ. ತನ್ನ ತಂದೆಯೂ ಪೌರಾಣಿಕನಾಗಿದ್ದುದರಿಂದ ವಾಸುದೇವನಿಗೆ ಪ್ರವಚನದ ಸಂದರ್ಭ ಹೊಸದೇನೂ ಆಗಿರಲಿಲ್ಲ ; ಸೂಕ್ಷ್ಮಗ್ರಾಹಿಯಾಗಿ ಇದ್ದುದರಿಂದ ಪುರಾಣಪ್ರಸಂಗಗಳ ತಾತ್ಪರ್ಯವನ್ನು ಗ್ರಹಿಸಿದ್ದನೆನ್ನಲೂ ಸಾಧ್ಯ. ಇನ್ನೊಮ್ಮೆ ತನ್ನ ತಂದೆಯೇ ಪುರಾಣ ಹೇಳುತ್ತಿದ್ದಾಗ 'ಲಿಕುಚ'ವೆಂಬ ಪದಕ್ಕೆ ಅರ್ಥಹೇಳದೆ ಮುಂದೆ ಹೋದರಂತೆ ; ಅಲ್ಲಿ ಕುಳಿತಿದ್ದ ವಾಸುದೇವನು ಅವರನ್ನು ತಡೆದು ತಾನೇ ಲಿಕುಚಪದದ ಅರ್ಥವನ್ನು ವಿವರಿಸಿದನಂತೆ. ಅಂತೂ ಹುಡುಗನ ಕುಶಾಗ್ರಬುದ್ಧಿ ಊರಿನಲ್ಲಿ ಎಲ್ಲರಿಗೂ ಪ್ರಸಿದ್ಧವಾಯಿತು.

ಎಳೆತನದಲ್ಲಿ ಅವರ ಅಧ್ಯಾಪಕರಾಗಿದ್ದವರು 'ಪೂಗವನಾನ್ವಯೋ ದ್ವಿಜಃ', ಎಂದರೆ ಅಡಿಕೆತೋಟದ ಮನೆಯವರು, ತೋಟಂತಿಲ್ಲಾಯರು. ಅವರ ನಿಜನಾಮಧೇಯವನ್ನು ಮಧ್ವವಿಜಯ ಸ್ಪಷ್ಟಪಡಿಸಿಲ್ಲ. ಶಿಷ್ಯನಾದ ವಾಸುದೇವನೇ ಅವರಿಗೆ ಐತರೇಯ ಉಪನಿಷತ್ತಿನ ಅರ್ಥವನ್ನು ಹೇಳಿದನೆಂಬ ವಿವರ ಇಲ್ಲಿ ಬರುತ್ತದೆ. ಬಹುಶಃ ತೋಟಂತಿಲ್ಲಾಯರು ಉಪನಿಷತ್ತುಗಳನ್ನು ಆಚಾರ್ಯರಿಗೆ ಪಾಠ ಹೇಳುತ್ತಿದ್ದಿರಬೇಕು. ತೋಟಂತಿಲ್ಲಾಯರಿಗೆ ವಿಷ್ಣುಭಕ್ತಿಯನ್ನು ಬೆಳೆಸಲು ಇವರೇ ಕಾರಣರಾದರಂತೆ ; ಇದೇ ಅವರು ಕೊಟ್ಟ ಗುರುದಕ್ಷಿಣೆಯಂತೆ.

೩. ಯತಿದೀಕ್ಷೆ

ಬಾಲ್ಯದಲ್ಲಿ ಕ್ರೀಡಾಪಟುಗಳಾಗಿದ್ದು ತುಂಟಾಟದಲ್ಲಿಯೇ

ನಿರತರಾಗಿದ್ದ ಆಚಾರ್ಯರಿಗೆ ಸರ್ವಸಂಗಪರಿತ್ಯಾಗ ಮಾಡಿ ಸಂನ್ಯಾಸಿಗಳಾಗಬೇಕೆಂಬ ಬಯಕೆ ಹೇಗೆ ಬಂದಿತೋ ತಿಳಿಯುವುದಿಲ್ಲ. ಮಧ್ವವಿಜಯದಲ್ಲಿಯೂ ಇವರು 'ಸಮಸ್ತ ಸಂನ್ಯಾಸನಿಬದ್ಧನಿಶ್ಚಯ' ರಾದದ್ದಕ್ಕೆ ಕಾರಣವನ್ನು ಹೇಳಿಲ್ಲ. ಕಂಡ ಕಂಡದ್ದಕ್ಕೆಲ್ಲ ನಮಸ್ಕಾರ ಮಾಡಲು ಆರಂಭಿಸಿದರೆಂದೂ, ಮನೆಯವರು "ಇದೇಕೆ ಹೀಗೆ ಮಾಡುವೆ ?" ಎನ್ನಲು 'ತನ್ನ (ಎಂದರೆ ಭಗವಂತನ) ವಸ್ತುಗಳಿಗೆ ನಮಸ್ಕಾರವನ್ನು ಮಾಡುತ್ತಿದ್ದೇನೆ' (ಸ್ವವಸ್ತು ಪ್ರಣತಿಂ ವ್ಯಧಾಮಿತಿ) ಎಂದು ಉತ್ತರವಿತ್ತಂತೆ ಮಧ್ವವಿಜಯ ಹೇಳುತ್ತದೆ. ಸ್ಥಾವರಜಂಗಮವಾದ ಎಲ್ಲ ವಸ್ತುಗಳಲ್ಲಿಯೂ ಅಂತರ್ಯಾಮಿಯಾದ ಪರಮಾತ್ಮನನ್ನು ಕಾಣುವ ಮನೋಧರ್ಮವು ಬೆಳೆದದ್ದೇ ವಿರಕ್ತಿಗೆ ಕಾರಣವಾಯಿತು ಎನ್ನಬಹುದು. ಅಂತೂ ಆ ಕಾಲದಲ್ಲಿ ಗುರುವನ್ನು ಅರಸಿಕೊಂಡು ಮನೆಯನ್ನು ಬಿಟ್ಟು ಹೊರಟರು.* ಇವರು ಹೊರಟುಹೋದದ್ದು ತಂದೆತಾಯಿಯರಿಗೆ, ನೆಂಟರಿಗೆ ತಿಳಿದಿರಲಿಲ್ಲ ಎಂದು ಸೂಚನೆಯಿದೆ.

ತಂದೆತಾಯಿಯರು ಇವರನ್ನು ಹುಡುಕಾಡಿದಾಗ ಇವರು ಉಡುಪಿಯ ಅನಂತೇಶ್ವರನ ಗುಡಿಯಲ್ಲಿ ಬಿಡಾರಮಾಡಿದ್ದ ಅಚ್ಯುತ ಪ್ರೇಕ್ಷಕರೆಂಬ ಸಂನ್ಯಾಸಿಗಳ ಜತೆಯಲ್ಲಿ ಇದ್ದುದನ್ನು ಕಂಡರು ; ಮಗನೂ ಸಂನ್ಯಾಸಿಯಾಗಬೇಕೆಂದಿರುವುದನ್ನು ತಿಳಿದು ಮಧ್ಯಗೇಹಭಟ್ಟರು ಬೇಡವೆಂದು ಪರಿಪರಿಯಾಗಿ ಬೇಡಿಕೊಂಡರು. ಆಗ್ರಹಮಾಡಿದರು. ಯಾವುದಕ್ಕೂ ಮಗ ಮಣಿಯದಿರಲು ತಂದೆ ಮಗನ ಕಾಲಿಗೆ ಬಿದ್ದು ಅಂಗಲಾಚಿಕೊಂಡರು. ಬುದ್ಧಿವಂತನಾದ ಹುಡುಗನು ಒಡನೆಯೇ "ತಂದೆಯಾದವನು ಮಗನಿಗೆ ನಮಸ್ಕಾರಮಾಡುವುದು ಮಗನು

---

* गुरोः किलान्वेषणनान् जगद्गुरुस्तदा जगामाखिललोक शिक्षकः ।

ಸಂನ್ಯಾಸಿಯಾದಾಗಲೇ ಅಲ್ಲವೇ ? ಉಳಿದಂತೆ ಅದು ಲೋಕರೂಢಿ ಯಲ್ಲ. ಎಂದಮೇಲೆ ನೀನು ನನ್ನ ಸಂನ್ಯಾಸದೀಕ್ಷೆಗೆ ಸಮ್ಮತಿಸಿದಂತೆಯೇ ಆಯಿತು !'' ಎಂದನಂತೆ. ಭಟ್ಟರಿಗೆ ಏನು ಉತ್ತರಕೊಡಬೇಕು ತಿಳಿಯದೆ, ಮರುಮಾತಾಡದೆ ಮನೆಗೆ ಹಿಂತಿರುಗಿದರು. ಆದರೆ ಮಗನ ಗೀಳು ಬಿಟ್ಟೀತೆ ? ಮತ್ತೆ ಮಗನನ್ನು ಅರಸಿಕೊಂಡು ಹೊರಟರು. ಈ ಬಾರಿ ಅಚ್ಯುತ ಪ್ರೇಕ್ಷಕರೂ ವಾಸುದೇವನೂ ನೇತ್ರಾವತೀ ನದಿಯ ಆಚೆ ಬೇರೆ ಹಳ್ಳಿಯ ಮಠವೊಂದರಲ್ಲಿ ತಂಗಿದ್ದರು. ಮಧ್ವವಿಜಯವು ''ಗ್ರಾಮವರೇ ಮಠಾಂತರೇ'' ಎಂದಷ್ಟೇ ಹೇಳುತ್ತದೆ ; ಆದರೆ ಇದು ಕಾಯರ್ೂರು ಗ್ರಾಮದಲ್ಲಿದ್ದ ಕುತ್ಯಾಡಿಮಠವೆಂದು ನಿರ್ದೇಶಿಸು ತ್ತಾರೆ.* ಇಲ್ಲಿಗೆ ಭಟ್ಟರು ಬರಬೇಕಾದರೆ ನೇತ್ರಾವತಿ ('ಮಹಾನದಿ') ಯನ್ನು ದಾಟಿದ್ದರು. ಮಗ ಇನ್ನೂ ಸಂನ್ಯಾಸಿಯಾಗಿರಲಿಲ್ಲ. ಭಟ್ಟರು ಮತ್ತೆ ಒತ್ತಾಯಮಾಡಲಾರಂಭಿಸಿದರು. ಸಿಟ್ಟಿಗೆದ್ದು ಬೆದರಿಸಿದರು. ವಾಸುದೇವನು ತಟ್ಟನೆ ಬಟ್ಟೆಯನ್ನು ಹರಿದು ಕೌಪಿನವನ್ನಾಗಿ ಕಟ್ಟಿಕೊಂಡು ''ಏನು ಮಾಡುತ್ತೀಯೋ ಮಾಡು !'' ಎಂದು ತಂದೆಗೆ ಹೇಳಿ ಸಂನ್ಯಾಸಿಯಾಗಿ ಬಿಟ್ಟನೆಂದು ವಿವರವಿದೆ. ಮನುಷ್ಯನಿಗೆ ವಿರಕ್ತಿ ಒದಗಿದ ಒಡನೆಯೇ ಸಂನ್ಯಾಸಿಯಾಗಬೇಕೆಂದು ಶಾಸ್ತ್ರವಿಧಿ ಇರುವುದನ್ನು ಮಗ ತಂದೆಗೆ ಹೇಳಿದನು.

ಆದರೆ ಇದ್ದ ಗಂಡುಮಕ್ಕಳೆಲ್ಲ ತೀರಿಕೊಂಡು ವಾಸುದೇವ ನೊಬ್ಬನೇ ಉಳಿದಿದ್ದು ಈಗ ಅವನೂ ಸಂನ್ಯಾಸಿಯಾಗಿ ಬಿಟ್ಟರೆ ತಮ್ಮನ್ನು ನೋಡಿಕೊಳ್ಳುವವರು ಯಾರು ಎಂಬ ಚಿಂತೆ ಭಟ್ಟರನ್ನು ಕಾಡಿಸುತ್ತಿದ್ದಿತು. ಇನ್ನೊಬ್ಬ ಮಗನು ಹುಟ್ಟುವನೆಂದು ವಾಸುದೇವನು ತಂದೆಗೆ ಆಶ್ವಾಸನೆ

* ಮಧ್ವವಿಜಯ - ಶ್ರೀ ಗೋರಾಬಾಳ ಹನುಮಂತರಾಯ.

ಕೊಟ್ಟನಂತೆ. ಕಾಲಕ್ರಮದಲ್ಲಿ ಅವರಿಗೆ ಇನ್ನೊಬ್ಬ ಮಗನು ಹುಟ್ಟಿದನು ; ತಂದೆತಾಯಿಯರು ಜೀವಂತರಾಗಿರುವವರೆಗೂ ಅವನು ಅವರನ್ನು ನೋಡಿಕೊಳ್ಳುತ್ತಿದ್ದು ಅನಂತರ ಮಧ್ವಾಚಾರ್ಯರಲ್ಲಿಯೇ ಸಂನ್ಯಾಸ ದೀಕ್ಷೆ ಸ್ವೀಕರಿಸಿದನು. ಇವರ ಆಶ್ರಮನಾಮ ವಿಷ್ಣುತೀರ್ಥರೆಂದು ; ಪೂರ್ವಾಶ್ರಮದ ಹೆಸರು ತಿಳಿದುಬಂದಿಲ್ಲ. ಅಂತೂ ವಾಸುದೇವನು ಹಟಹಿಡಿದು ಸಂನ್ಯಾಸಿಯಾಗಿಬಿಟ್ಟನು. ತಂದೆ ಬೆದರಿಸದಿದ್ದರೆ ಸಂನ್ಯಾಸಿಯಾಗುವುದು ಇನ್ನೂ ತಡವಾಗುತ್ತಿದ್ದಿತೋ ಏನೋ. ಅಚ್ಯುತಪ್ರೇಕ್ಷರು ವಿಧಿವತ್ತಾಗಿ ಹುಡುಗನಿಗೆ ದೀಕ್ಷೆ ಕೊಟ್ಟು 'ಪೂರ್ಣಬೋಧ'ನೆಂಬ ಆಶ್ರಮನಾಮವನ್ನು ಅನುಗ್ರಹಿಸಿದರು. 'ಮಧ್ವ', 'ಆನಂದತೀರ್ಥ' 'ದಶಪ್ರಮತಿ', 'ಸುಖತೀರ್ಥ', 'ಅನುಮಾನತೀರ್ಥ' ಮುಂತಾದ ಹೆಸರುಗಳೆಲ್ಲ ಇವರಿಗೆ ಬಳಕೆಯಲ್ಲಿದ್ದರೂ ಪೂರ್ಣಬೋಧ (ಅಥವಾ ಪೂರ್ಣಪ್ರಜ್ಞ) ಎಂಬುದೇ ಅವರ ಆಶ್ರಮನಾಮ ಎನ್ನುವುದು ಸ್ಪಷ್ಟವಾಗಿದೆ.

ಮಧ್ವಾಚಾರ್ಯರಿಗೆ ಹೀಗೆ ದೀಕ್ಷಾಗುರುಗಳಾದ ಅಚ್ಯುತಪ್ರೇಕ್ಷರು ಯಾರು ? ಇದು ಅಸ್ಪಷ್ಟವಾದ ವಿವರವೇ. ಅವರ ಪಾರಿವ್ರಾಜ್ಯ ದೀಕ್ಷೆಯು ಕೇರಳ ದೇಶದಲ್ಲಿ ಆಯಿತೆಂದು ಮಣಿಮಂಜರಿ ಹೇಳುತ್ತದೆ (8, 33). ಅವರ ಮಠವೆಂದು ಹೇಳಲಾದ ಭಂಡಾರಕೇರಿ ಮಠದ ಗುರುಪರಂಪರೆಯು ಸನಕಾದಿಗಳು, ದುರ್ವಾಸರು, ಜ್ಞಾನನಿಧಿ, ಗರುಡವಾಹನ, ಕೈವಲ್ಯತೀರ್ಥ, ಜ್ಞಾನೇಶತೀರ್ಥ, ಪರತೀರ್ಥ, ಸತ್ಯಪ್ರಜ್ಞತೀರ್ಥ, ಪ್ರಾಜ್ಞತೀರ್ಥ ಇವರ ಹೆಸರುಗಳನ್ನು ಹೇಳಿ ಅನಂತರ ಅಚ್ಯುತ ಪ್ರೇಕ್ಷರನ್ನು ಉಲ್ಲೇಖಿಸುತ್ತದೆ. ಇವರಲ್ಲಿ ಎಷ್ಟು ಮಂದಿ ಐತಿಹಾಸಿಕ ವ್ಯಕ್ತಿಗಳೆಂಬುದು ನಿರ್ದಿಷ್ಟವಾಗಿಲ್ಲ ; ಅವರ ಕಾಲವಾಗಲೀ, ಜೀವಿತವಾಗಲೀ, ಪ್ರಭಾವವಾಗಲೀ ತಿಳಿದುಬರುವುದಿಲ್ಲ. ಅಚ್ಯುತ

ಪ್ರೇಕ್ಷರ ಪೂರ್ವಾಚಾರ್ಯರು ನಂದಿಗ್ರಾಮದವರೆಂದೂ ಅವರ ಮಠಕ್ಕೆ 'ಆನಂದಬಾಲಮಠ' ಎಂಬ ಹೆಸರಿದ್ದಿತೆಂದೂ 'ಮಣಿಮಂಜರಿ'ಯಿಂದ ತಿಳಿದುಬರುತ್ತದೆ. (ಸರ್ಗ ೮, ಶ್ಲೋಕಗಳು ೧ ಮತ್ತು ೮) ಪ್ರಾಜ್ಞತೀರ್ಥರ ಕಾಲದಲ್ಲಿ ಮಾಯಾವಾದಿಗಳು ಈ ಮಠವನ್ನು ದಾಳಿಮಾಡಿದರೆಂಬ ವಿವರವೂ ಅಲ್ಲಿಯೇ ದೊರೆಯುತ್ತದೆ. ಆದರೆ ಈ ನಂದಿಗ್ರಾಮ ಯಾವುದು ? ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯಲ್ಲಿ ಇತಿಹಾಸ ಪ್ರಸಿದ್ಧವಾದ ನಂದಿಗ್ರಾಮವೊಂದಿದೆ ; ಆದರೆ ಇದು ಚಾಳುಕ್ಯ ರಾಜರ ಕಾಲದಲ್ಲಿ ಅರ್ಹನಂದಿ ಎಂಬ ಜೈನಾಚಾರ್ಯನಿಗೆ ಕೊಡಲ್ಪಟ್ಟ ಗ್ರಾಮ ; ಇದು ಜೈನಕ್ಷೇತ್ರ. ಹನ್ನೆರಡನೆಯ ಶತಮಾನದವರೆಗೂ ಇಲ್ಲೆಲ್ಲ ಜೈನ ಧರ್ಮವೇ ಪ್ರಬಲವಾಗಿದ್ದು ಅನಂತರ ಶೈವ ಮತವು ಏಳಿಗೆಗೆ ಬಂದಿತು. ಮುಂದೆ ಕೆಲವು ಕಾಲದವರೆಗೆ ಎರಡೂ ಧರ್ಮಗಳು ಹೊಡೆದಾಡುತ್ತಿದ್ದುವೆಂದು ತಿಳಿದು ಬರುತ್ತದೆ. ಇನ್ನೊಂದು ನಂದಿಗ್ರಾಮ ಕೃಷ್ಣಾ ನದಿಯ ದಡದ ಮೇಲಿದೆ ; ಇದು ಬೌದ್ಧಕ್ಷೇತ್ರ, ನಾಗಾರ್ಜುನ ಕೊಂಡದ ಪ್ರಭಾವಕ್ಕೆ ಸೇರಿದುದು. ಕರ್ನೂಲು ಜಿಲ್ಲೆಯಲ್ಲಿ ಇನ್ನೊಂದು ನಂದಿಗ್ರಾಮವಿದೆ, ಅದನ್ನು ಈಗ ನಂದಿ ಕೊಟ್ಕೂರು ಎನ್ನುತ್ತಾರೆ ; ಇದು ಸುಪ್ರಸಿದ್ಧ ಶೈವಕ್ಷೇತ್ರ, ಮಲ್ಲಿಕಾರ್ಜುನನ ಜ್ಯೋತಿರ್ಲಿಂಗ ಇಲ್ಲಿದೆ. ಹೀಗೆಯೇ ಹುಡುಕಿದರೆ ಹತ್ತಾರು ಹೆಸರಾಂತ ನಂದಿಗ್ರಾಮಗಳು ಸಿಗುತ್ತವೆ. ಇವುಗಳಲ್ಲಿ ಯಾವ ನಂದಿಗ್ರಾಮ ಅಚ್ಯುತಪ್ರೇಕ್ಷರ ಪೀಠದ ಮೂಲಕ್ಷೇತ್ರ ಎನ್ನುವುದು ಸಂದಿಗ್ಧವಾಗಿದೆ.

ಅಚ್ಯುತಪ್ರೇಕ್ಷರು ಮತ್ತು ಅವರ ಹಿಂದಿನವರು ಭಾಗವತಪಂಥದವರು ಎನ್ನುವ ಉಲ್ಲೇಖವಿದೆ. ಅಚ್ಯುತಪ್ರೇಕ್ಷರು ಮಧ್ವಾಚಾರ್ಯರನ್ನು ಶಿಷ್ಯರಾಗಿ ಗ್ರಹಿಸಿದನಂತರ ಅವರಿಗೆ ಭಾಗವತ ಪಾಠ ಹೇಳಿದರೆಂಬ ಉಲ್ಲೇಖವಿದೆ. ಭಾಗವತಪಂಥವೇನೋ ತೆಲುಗು ದೇಶದಲ್ಲಿ

ನಿಂಬಾರ್ಕನಿಂದ ತುಂಬ ಪ್ರಸಿದ್ಧವಾಯತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಪಾಶುಪತ ಶೈವಸಂಪ್ರದಾಯವನ್ನು ಹಿಡಿದ ಶಿವಭಾಗವತರು ಪ್ರಬಲ ರಾಗಿದ್ದರು. ಕಾರವಾರ ಅವರ ಕೇಂದ್ರವಾಗಿದ್ದಿತೆಂದು ತಿಳಿದುಬರುತ್ತದೆ. ಇವರೆಲ್ಲ ಭಕ್ತಿಯ ಅಧಿಕ್ಯವನ್ನು ಒಪ್ಪಿಕೊಂಡವರು. ತೆಲಗು ದೇಶದ ಶಿವ, ವಿಷ್ಣು ಭಾಗವತರಿಗೆಲ್ಲ ಓಢ್ರದೇಶದ ಜಗನ್ನಾಥ ಪುರಿ (ಪುರುಷೋತ್ತಮ ಕ್ಷೇತ್ರ) ಪವಿತ್ರವೆನಿಸಿದ್ದಿತು. ಮಣಿಮಂಜರಿಯಲ್ಲಿಯೂ ಪ್ರಾಜ್ಞತೀರ್ಥರ ಶಿಷ್ಯರು ಪುರುಷೋತ್ತಮಕ್ಷೇತ್ರಕ್ಕೆ ಹೋಗುವ ಉಲ್ಲೇಖವಿದೆ (೮, ೨೩). ಭಾಗವತ ಶೈವರ ಪ್ರಭಾವ ತುಳುರಾಜ್ಯದ ಬಾರಕೂರನ್ನೂ ಮುಟ್ಟಿದ್ದಿತೆಂದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಅಚ್ಯುತಪ್ರೇಕ್ಷರ ಮಠವಾದ ಭಂಡಾರಕೇರಿ ಇರುವುದು ಬಾರಕೂರಿಲ್ಲಿಯೇ ; ಇದು ಲಕುಲೀಶಪಾಶುಪತರ ಕೇಂದ್ರವಾಗಿದ್ದಿತು. ಲಕುಲೀಶಪಾಶುಪತರೆಂಬ ಶೈವಸಮಯಾಚಾರ್ಯರು ವೈದಿಕವಲಯದ ಒಳಗೇ ಇದ್ದುಕೊಂಡು ಜೈನ ಮತ್ತು ಬೌದ್ಧ ಧರ್ಮಗಳ ಪ್ರಾಬಲ್ಯವನ್ನು ಕುಗ್ಗಿಸಿದರು. ಹತ್ತನೆಯ ಶತಮಾನದಿಂದ ಹದಿನಾಲ್ಕನೆಯ ಶತಮಾನದವರೆಗೂ ಈ ಪ್ರಾಂತ್ಯ ದಲ್ಲಿಯೂ ತೆಲುಗು ದೇಶದಲ್ಲಿಯೂ ಭಕ್ತಿಪ್ರಧಾನವಾದ ಶೈವ ಸಂಪ್ರದಾಯವು ಉಚ್ಚದೆಸೆಯಲ್ಲಿದ್ದಿತೆನ್ನಲು ಆಧಾರಗಳುಂಟು. ಭೈರವನನ್ನು ಪೂಜಿಸುತ್ತಿದ್ದ ಕಾಪಾಲಿಕರೂ ಅಲ್ಲಲ್ಲಿ ಬಲಿಷ್ಠರಾಗಿದ್ದ ಉಲ್ಲೇಖವಿದೆ. ಕಾಪಾಲಿಕರಿಗೂ ಪಾಶುಪತಮಾಹೇಶ್ವರರಿಗೂ ಸೆಣಸಾಟವಿದ್ದುದೂ ಉಂಟು.

ಈ ಹಿನ್ನೆಲೆಯಲ್ಲಿ ಭೈರವದೈತ್ಯರು ನಂದಿಗ್ರಾಮಕ್ಕೆ ಬಂದು ಅಲ್ಲಿನ ಹಂಸ ಮಠವನ್ನು ಸುಟ್ಟರೆಂದು ಮಣಿಮಂಜರಿಯಲ್ಲಿ ಬರುವ ವಿವರ ವನ್ನು ಪರಿಶೀಲಿಸಬೇಕು. ಹಂಸಮಠ (ಅಚ್ಯುತಪ್ರೇಕ್ಷರ ಮೂಲಮಠ) ದಲ್ಲಿದ್ದವರು ವೈದಿಕರು, ಶ್ರುತೇಃ 'ಸಂಪ್ರದಾಯಜ್ಞ'ರು. ಭೈರವ ದಾಳಿಯಿಂದಾಗಿ ಅವರು ತಮ್ಮ ಲಾಂಛನಗಳನ್ನು ಮಾರ್ಪಡಿಸಿಕೊಂಡು

ಉಳಿದುಕೊಂಡರೆಂಬ ವಿವರ ಅಲ್ಲಿಯೇ ಬರುತ್ತದೆ. 'ಪಾನಬೋಗಾಬಲಾಕಾಂಕ್ಷೆ'ಯುಳ್ಳ ಈ ಭೈರವರು ಅಲ್ಲಿಯೇ ನಿಂತರೆಂದೂ, ಆದರೆ ಪ್ರಾಜ್ಞತೀರ್ಥರ 'ಸದಾಚಾರ'ಕ್ಕೆ ನಾಚಿ ಅಲ್ಲಿಂದ ಹೊರಟು ಹೋದರೆಂದೂ ಈ ಗ್ರಂಥ ಹೇಳುತ್ತದೆ. 'ಮಾಯಿಮತ'ಕ್ಕೆ ಪರಿವರ್ತಿತರಾದ ಹಂಸಮಠದವರು 'ಉಪಾಸ್ತಿ ನಿಷ್ಠಿತ' (ಎಂದರೆ ಉಪಸನೆಯಲ್ಲಿ ನಿಷ್ಠೆಯುಳ್ಳವ)ರಾಗಿದ್ದರೆಂಬ ವಿವರ (೮, ೯) ಗಮನಾರ್ಹವಾದುದು. ದಾಳಿ ಮಾಡಿದವರು ಬರ್ಬರದೇಶಕ್ಕೆ ಹಿಂದಿರುಗಿ ಹಂಸಮಠವು ನಿರುಪದ್ರವವಾದಾಗಲೂ 'ಮಾಯಿಲಾಂಛನ'ವು ಬದಲಾಗಲಿಲ್ಲ, ಮಾಯಾವಾದ ಪಠನವು ಮರೆಯಲಾಗಲಿಲ್ಲ (೯, ೨೭) ಎನ್ನುವುದು ಸ್ವಾರಸ್ಯವಲ್ಲವೆ ?

ಅಂತೂ ಮಧ್ವಾಚಾರ್ಯರು ಅಚ್ಯುತಪ್ರೇಕ್ಷರಿಂದ ಸನ್ಯಾಸವನ್ನು ಸ್ವೀಕರಿಸಿದರೆಂದು ಸಾಂಪ್ರದಾಯಿಕವಾದ ನಂಬಿಕೆ. ಶ್ರೀ ಕೂರ್ಮಶಾಸನದಲ್ಲಿ ಮಧ್ವಾಚಾರ್ಯರ ದೀಕ್ಷಾ ಗುರುಗಳು 'ಶ್ರೀ ಪುರುಷೋತ್ತಮಾಭಿಧ ಮಹಾತೀರ್ಥ'ರೆಂದು ಹೇಳಿದೆ. ಇದು ಅಚ್ಯುತಪ್ರೇಕ್ಷರಿಗೇ ಇದ್ದ ಇನ್ನೊಂದು ಹೆಸರೆಂದು ಸಮನ್ವಯ ಮಾಡುತ್ತಾರೆ. ಮಧ್ವವಿಜಯದಲ್ಲಿಯೂ ಈ ಹೆಸರನ್ನು ಅಲ್ಲಲ್ಲಿ ಬಳಸಿದ್ದಾರೆ. (೬, ೩೩) ಇದು ಹೇಗಾದರೂ ಇರಲಿ. ಗುರುಗಳು ಶಿಷ್ಯನಿಗೆ ಆಶ್ರಮೋಚಿತವಾದ ವಿಶೇಷ ಶಿಕ್ಷಣವನ್ನು ಕೊಟ್ಟರು. ಗುರುಗಳು 'ಇಷ್ಟಸಿದ್ಧಿ' ಎಂಬ ಗ್ರಂಥವನ್ನು ಪಾಠ ಹೇಳುತ್ತಿರುವಾಗ ಮೊದಲನೆಯ ಶ್ಲೋಕದಲ್ಲಿಯೇ ಮೂವತ್ತೆರಡು (ಷೋಡಶಕದ್ವಯಾತ್ಮಕಂ) ದೋಷಗಳನ್ನು ತೋರಿಸಿದರೆಂದೂ, ಇದರಿಂದ ಗುರುಗಳು ವ್ಯಗ್ರರಾಗಿ ''ನಿನಗೆ ಪಾಠಹೇಳುವ ಶಕ್ತಿ ನನಗಿಲ್ಲ''ವೆಂದು ನುಡಿಯಲು, ಆಗ ಆಚಾರ್ಯರು ಸುಮ್ಮನಿದ್ದು ಕೆಲವು ಕಾಲ ತಾವೂ 'ಮಾಯಾಸಮಯ' ಎಂದರೆ ಅದ್ವೈತವಾದವನ್ನೇ ಬೋಧಿ

ಸತೊಡಗಿದರೆಂದೂ ಮಧ್ವವಿಜಯ ಹೇಳುತ್ತದೆ. (೪, ೪೪-೪೭) ಇಷ್ಟಸಿದ್ಧಿಯೆನ್ನುವದು ಅದ್ವೈತ ಸಿದ್ಧಾಂತದ ಪ್ರಸಿದ್ಧವಾದ ಪ್ರಕರಣಗ್ರಂಥ ; ಇದನ್ನು ರಚಿಸಿದ ವಿಮುಕ್ತಾತ್ಮಯತಿಯು ಸುಮಾರು ೧೨೦೦ರಲ್ಲಿ ಇದ್ದವರು. ಅಚ್ಯುತಪ್ರೇಕ್ಷರು ಹೇಳಿಕೊಡುತ್ತಿದ್ದ ಭಾಗವತ ದಲ್ಲಿಯೂ ಪಾಠ ಭೇದಗಳನ್ನು ತೋರಿಸಿದ ಮಧ್ವಾಚಾರ್ಯರು ತಮ್ಮ ಪ್ರವ್ಯಾಜ್ಯದ ಆರಂಭದೆಶೆಯಲ್ಲೇ ಬುದ್ಧಿಶಕ್ತಿಗೂ ಸ್ವತಂತ್ರ ಚಿಂತನೆಗೂ ಪ್ರಖ್ಯಾತ ರಾದರು. ಜೈನಪಂಡಿತರನ್ನೂ ಬೌದ್ಧ ಪಂಡಿತರನ್ನೂ ವಾದದಲ್ಲಿ ಸೆಣಸಿದರೆನ್ನುವ ಉಲ್ಲೇಖವೂ ಇದೆ. ವಾದಿಸಿಂಹನೆಂಬ ವೈಶೇಷಿಕ ವಿದ್ವಾಂಸನನ್ನು ಬುದ್ಧಿಸಾಗರನೆಂಬ ಬೌದ್ಧ ಪಂಡಿತನು ವಾದದಲ್ಲಿ ಗೆದ್ದು ತಾನು ಹೋದೆಡೆಯಲ್ಲಿ ಎಲ್ಲೆಲ್ಲೂ ಅವನನ್ನು ಕರೆದೊಯ್ಯುತ್ತಿದ್ದನಂತೆ ; ಮಧ್ವಾಚಾರ್ಯರು ಇಬ್ಬರನ್ನೂ ವಾದದಲ್ಲಿ ಸೋಲಿಸಿದರು. ಇದು **'ಭಾವಪ್ರಕಾಶಿಕೆ'**ಯಲ್ಲಿ ಬರುವ ವಿವರ. ತರ್ಕದಲ್ಲಿ ಆಚಾರ್ಯರ ಪ್ರತಿಭೆ, ವಾಕ್ಯಾರ್ಥದಲ್ಲಿ ಸಾಮರ್ಥ್ಯಗಳನ್ನು ನೋಡಿ ಅಚ್ಯುತಪ್ರೇಕ್ಷರು ಅವರನ್ನು 'ಅನುಮಾನತೀರ್ಥ' ಎಂದು ಕರೆದರಂತೆ.

ನಾಲ್ಕನೆಯ ಪರಿಚ್ಛೇದ

೧. ಪರ್ಯಟನೆ

ಹೀಗೆ ಪ್ರಖ್ಯಾತನಾದ ಶಿಷ್ಯನೊಂದಿಗೆ ಅಚ್ಯುತಪ್ರೇಕ್ಷರು ದಕ್ಷಿಣ ದೇಶದ ಯಾತ್ರೆಯನ್ನು ಕೈಗೊಂಡರು. ಇದೇ ಆಚಾರ್ಯರ ಪ್ರಥಮ ಪರ್ಯಟನೆ. ಉಡುಪಿಯನ್ನು ಬಿಟ್ಟು ವಿಷ್ಣುಮಂಗಳಕ್ಕೆ ಬಂದರೆಂದೂ ಅಲ್ಲಿಂದ ಮುಂದೆ ಪಯಸ್ವಿನಿಯನ್ನು ದಾಟಿ 'ಅನಂತಸತ್ಪುರ'ಕ್ಕೆ ಬಂದರೆಂದೂ ಮಧ್ವವಿಜಯ ಹೇಳುತ್ತದೆ. ವಿಷ್ಣುಮಂಗಳವೆಂಬುದು ಉಡುಪಿಗೆ ದಕ್ಷಿಣಕ್ಕೆ ಕಾಸರಗೋಡು ಪ್ರಾಂತ್ಯದಲ್ಲಿರುವ ಊರು ; ಕಾಸರಗೋಡಿಗೆ ಈಶಾನ್ಯ ದಿಗ್ಭಾಗದಲ್ಲಿ ಮೂರು ಮೈಲಿ ದೂರವಿದೆ. ಇಲ್ಲಿ ಚಕ್ರತೀರ್ಥವೆಂಬ ಕೆರೆ, ಮಹಾವಿಷ್ಣುವಿನ ಗುಡಿ, ಮಹಾಲಿಂಗೇಶ್ವರ ದೇವಾಲಯ ಇವು ಮುಂಚಿನಿಂದಲೂ ಪ್ರಖ್ಯಾತವಾಗಿದ್ದುವು. ಆಚಾರ್ಯರು ಇಲ್ಲಿ ದೇವತಾ ಸಂದರ್ಶನಗಳನ್ನು ಮಾಡಿಕೊಂಡು ಪಯಸ್ವಿನೀ (ಚಂದ್ರಗಿರಿ) ನದಿಯ ದಡಕ್ಕೆ ಬಂದರು. ಕಾಸರಗೋಡಿಗೆ ಒಂದು ಮೈಲಿ ದಕ್ಷಿಣಕ್ಕೆ ಈ ನದಿ ಇರುವುದು. ಇದು ಕೇರಳಪ್ರಾಂತ್ಯಕ್ಕೆ ತುಂಬ ಅನುಕೂಲವಾದ ನದಿಯಾದುದರಿಂದ 'ಕೇರಳ ಭೂಷಣಾಯಿತೆ' ಯೆಂದು ನಾರಾಯಣ ಪಂಡಿತಾಚಾರ್ಯರು ಬಣ್ಣಿಸಿದ್ದಾರೆ.

ಅಲ್ಲಿಂದ ಕ್ರಮವಾಗಿ ಸಂಚಾರ ಮಾಡುತ್ತ ಗುರುಶಿಷ್ಯರು 'ಅನಂತಸತ್ಪುರ'ಕ್ಕೆ ಬಂದರು. ಅನಂತಪುರವನ್ನು ಕೆಲವು ಪಂಡಿತರು ಅನಂತಶಯನ (ಈಗ ತಿರುವನಂತಪುರ) ಎಂದು ನಿರ್ದೇಶಿಸುತ್ತಾರೆ.

ಆದರೆ ಪಯಸ್ವಿನೀ ನದಿಗೆ ಹತ್ತಿರದಲ್ಲಿಯೇ ತುಳುನಾಡಿನಲ್ಲಿಯೇ ಅನಂತಪುರವೆಂಬ ಕ್ಷೇತ್ರವು ಪ್ರಾಚೀನ ಕಾಲದಿಂದ ಪ್ರಸಿದ್ಧವಾಗಿದೆ. ಇಲ್ಲಿ ಕಡುಶರ್ಕರಪಾಕದಿಂದ ನಿರ್ಮಿಸಲಾದ ಅನಂತಪದ್ಮನಾಭಸ್ವಾಮಿಯ ಸುಂದರ ಮೂರ್ತಿಯಿದೆ. 'ಅನಂತನಕಾಡು' ಎನಿಸಿಕೊಳ್ಳುವ ಅರಣ್ಯದ ಮಧ್ಯದಲ್ಲಿರುವ ಈ ಪುಣ್ಯಕ್ಷೇತ್ರದಲ್ಲಿ ಬಿಲ್ವಮಂಗಳರೆಂಬ ಋಷಿಗಳು ತಪಸ್ಸು ಮಾಡಿ ದೇವರನ್ನು ಸಾಕ್ಷಾತ್ಕರಿಸಿಕೊಂಡಿದ್ದರಂತೆ. ಇದನ್ನು ಸ್ಥಳಪುರಾಣ ಹೇಳುತ್ತದೆ. ಆಚಾರ್ಯರೂ ತಮ್ಮ ಗ್ರಂಥದಲ್ಲಿ ಬಿಲ್ವಮಂಗಳನ ಹೆಸರನ್ನು ಪ್ರಸ್ತಾಪ ಮಾಡುತ್ತಾರೆ. ಆಚಾರ್ಯರು ವೇದಾಂತಸೂತ್ರಗಳಿಗೆ ತಮ್ಮದೇ ಆದ ವ್ಯಾಖ್ಯಾನಗಳನ್ನು ಶಿಷ್ಯರಿಗೆ ಮೊಟ್ಟಮೊದಲು ಬೋಧಿಸಿದುದು ಇಲ್ಲಿಯೇ ಎಂಬ ಸೂಚನೆ ಮಧ್ವವಿಜಯದಲ್ಲಿ ಬರುತ್ತದೆ (೫, ೩೩). ದ್ವೈತಸಿದ್ಧಾಂತವನ್ನು ನಿರೂಪಿಸಬೇಕೆಂಬ ಬಯಕೆಯೇನೋ ಅವರಿಗೆ ಬಹುಕಾಲವಿದ್ದಿತು. ಈ ಯಾತ್ರೆ ಹೊರಡುವ ಮುಂಚೆಯೇ ಸಿದ್ಧಾಂತದ ವಿಚಾರದಲ್ಲಿ ಗುರು-ಶಿಷ್ಯರಿಗೆ ಭಿನ್ನಾಭಿಪ್ರಾಯ ಒದಗಿದ್ದುದನ್ನು ಕಂಡಿದ್ದೇವಷ್ಟೆ. ಆ ಸಮಯದಲ್ಲಿ ಆಚಾರ್ಯರಿಗಿಂತಲೂ ಹಿರಿಯರೂ ಅಚ್ಯುತಪ್ರೇಕ್ಷರ ಶಿಷ್ಯರೂ ಆಗಿದ್ದ ಲಿಕುಚಾನ್ವಯ (ಪೇಜತ್ತಾಯ ವಂಶದ) ಯತಿಯೊಬ್ಬರು ಆಚಾರ್ಯರನ್ನು ಸ್ವತಂತ್ರಭಾಷ್ಯ ಬರೆಯುವಂತೆ ಪ್ರಚೋದಿಸಿದ್ದರು (೫, ೨೬-೨೮). ಈ ಪ್ರೇರಣೆ ಫಲಿಸಿದ್ದು ಅನಂತಪುರದಲ್ಲಿ ಎಂದು ತೋರುತ್ತದೆ ; ಇದೇ ಕಾರಣದಿಂದ ಅವರು ಬಿಲ್ವ ಮಂಗಳ ಋಷಿಗಳ ಅನುಗ್ರಹವಾಯಿತೆಂದು ಬಗೆದಿರಬಹುದು. ಇದಲ್ಲದೆ ಬೇರೆ ಯಾವ ಬಿಲ್ವಮಂಗಳನೊಂದಿಗೂ ಆಚಾರ್ಯರ ಸಂಬಂಧವಿದ್ದುದು ತಿಳಿದು ಬಂದಿಲ್ಲ. ಹೀಗೆ ಅನಂತಸತ್ಪುರವೆಂದರೆ ಕಾಸರಗೋಡಿನ ಬಳಿಯಿರುವ ಅನಂತಪುರವೆಂದು ನನ್ನ ಅರಿಕೆ. ಇದು ಕಣ್ವಪುರದಿಂದ ಸುಮಾರು ಮೂರು – ಮೂರೂವರೆ ಮೈಲಿ

ದೂರದಲ್ಲಿರುವ ಕ್ಷೇತ್ರ (ವಿವರಗಳಿಗೆ : ''ಮಧುಪುರ'', ಗೀತಾ ಪ್ರಕಾಶನ, ಕಾಸರಗೋಡು, ೧೯೬೨, ಪುಟ ೨೬-೩೦)

ಇದೇ ಸ್ಥಳದಲ್ಲಿ ಆಚಾರ್ಯರಿಗೂ ಅದ್ವೈತಿಗಳಿಗೂ ಪ್ರಪ್ರಥಮವಾಗಿ ಘರ್ಷಣೆ ಒದಗಿತು. ಅಪ್ರಾಂಶುನೂತ್ನವೆಂಬ ಕುಲದಲ್ಲಿ ಹುಟ್ಟಿದ ಸಂಕರನೆಂಬ ಒಬ್ಬನು ಅಸೂಯೆಯಿಂದ ಆಚಾರ್ಯರನ್ನು ವಾದಕ್ಕೆ ಎಳೆದನೆಂಬ ವಿವರ ಮಧ್ವವಿಜಯದಲ್ಲಿ ಬರುತ್ತದೆ. ತುಳು ಭಾಷೆಯಲ್ಲಿ ಇವನನ್ನು ಕುದಿಪುಸ್ತೂರಿಲ್ಲಾಯ ಎಂದು ವ್ಯವಹರಿಸಿದ್ದಾರೆ ; ಎಂದರೆ ಕುದಿಪುಸ್ತೂರು (ಸಣ್ಣ ಹೊಸ ಊರು) ಎಂಬ ಊರಿನವನು. ಆದರೆ ಈ ಊರು ಯಾವುದು ಎಂಬುದು ಸ್ಪಷ್ಟವಾಗಿಲ್ಲ. ಇವನನ್ನು 'ಸಂಕರ' (ಶಂಕರ ಎಂಬುದಕ್ಕೆ)ನೆಂದೂ ವೈರಪರಾಯಣನೆಂದೂ ನಾರಾಯಣ ಪಂಡಿತಾಚಾರ್ಯರು ನಿರ್ದೇಶಿಸಿದ್ದಾರೆ. ಇದನ್ನು ಅತ್ಯುಕ್ತಿಯೆಂದು ಬಿಡಬಹುದು. ಅವನ ವಾದ ಸರಿಯಾದುದೆಂದು ಒಪ್ಪತಕ್ಕದ್ದೇ : 'ನೀವು ನಿಮ್ಮದೇ ಭಾಷ್ಯ ಬರೆಯದೆ ಸೂತ್ರಾರ್ಥವನ್ನು ನಿಮಗೆ ಬೇಕಾದಂತೆ ಹೇಳಬಾರದು' (ಮ. ವಿ. ೫, ೩೮) ಎಂಬುದು ಅವನ ನಿಲುವು. ಮಧ್ವವಿಜಯದಲ್ಲಿ ಈ ಪ್ರಸಂಗನಿರೂಪಣೆಯನ್ನು ಪರಿಶೀಲಿಸಿದರೆ ಅಲ್ಲಿಂದ ಮುಂದೆ ವಾಕ್ಯಾರ್ಥವು ಲಘುವಾಯಿತೆಂದೂ, ವೈಯಕ್ತಿಕ ನಿಂದನೆಗಳು ಆರಂಭವಾದುವೆಂದೂ ತಿಳಿದುಬರುತ್ತದೆ (೫.೪೦-೪೧) ಕುದಿಪುಸ್ತೂರಿಲ್ಲಾಯನು ಸಿಟ್ಟಿಗೆದ್ದು ಆಚಾರ್ಯರ ದಂಡವನ್ನು ಖಂಡಿಸುವೆನೆಂದು ಪ್ರತಿಜ್ಞೆಮಾಡಿ ಹೊರಟುಹೋದನಂತೆ.

ಆಚಾರ್ಯರು ಸಂಚರಿಸುತ್ತಿದ್ದ ಕಾಸರಗೋಡು ಪ್ರಾಂತ್ಯದಲ್ಲಿಯೇ ಮಧುವಾಹಿನೀ ನದಿಯ ದಡದಮೇಲೆ ಎಡನೀರುಮಠ ಎಂಬುದೊಂದು ಅದ್ವೈತಿಗಳ ಮಠ ಇಂದಿಗೂ ಇದೆ ; ಇದರ ಪ್ರವರ್ತಕರು ಶಂಕರಾಚಾರ್ಯರ ಶಿಷ್ಯರಾದ ತೋಟಕಾಚಾರ್ಯ

ರೆಂದು ಹೇಳುತ್ತಾರೆ. ಭಾಗವತ ವೈಷ್ಣವ ಸಂಪ್ರದಾಯದ ಈ ಮತವು ತುಂಬ ಪ್ರಾಚೀನವಾದುದೆಂದು ತಿಳಿದುಬರುತ್ತದೆ. ಕುದಿಪುಸ್ತೂರಿಲ್ಲಾಯನು ಈ ಮತದವನೇ ಎಂಬ ಸಂಶಯ ಬರುತ್ತದೆ.

ಅಲ್ಲಿಂದ ಮುಂದೆ ಆಚಾರ್ಯರು ಕನ್ಯಕಾತೀರ್ಥ (ಎಂದರೆ ಕನ್ಯಾಕುಮಾರಿ) ಕ್ಷೇತ್ರಕ್ಕೆ ಬಂದು ಸಮುದ್ರಸೇತುವಿನಲ್ಲಿ ಸ್ನಾನಮಾಡಿ ರಾಮೇಶ್ವರನ ದರ್ಶನವನ್ನು ಮಾಡಿದರು. ರಾಮೇಶ್ವರದಲ್ಲಿಯೇ ಚಾತುರ್ಮಾಸ್ಯಕ್ಕೆ ಕುಳಿತರೆಂದು 'ಭಾವಪ್ರಕಾಶಿಕೆ' ವಿವರಿಸುತ್ತದೆ. ಇಲ್ಲಿ ಕುದಿಪುಸ್ತೂರಿಲ್ಲಾಯನು ಮತ್ತೆ ಕಾಣಿಸಿಕೊಳ್ಳುತ್ತಾನೆ. ''ನೀನು ಪ್ರತಿಜ್ಞೆ ಮಾಡಿದ್ದಂತೆ ನನ್ನ ದಂಡವನ್ನು ಖಂಡಿಸು, ಇಲ್ಲವಾದರೆ ನೀನ ಷಂಡ !'' ಎಂದು ಆಚಾರ್ಯರು ಅವನನ್ನು ವಾದಕ್ಕೆ ಕರೆದರೆಂದೂ, ಅವನು ವಾದಮಾಡದೆ ಓಡಿಹೋದನೆಂದೂ ವಿವರವಿದೆ. ಚಾತುರ್ಮಾಸ್ಯ ಮುಗಿದಂದು ಆಚಾರ್ಯರು ಕಾವೇರಿ ತೀರದ ಶ್ರೀರಂಗಕ್ಕೆ ಬಂದು ಅಲ್ಲಿಂದ ಮುಂದೆ ಅಲ್ಲಲ್ಲಿ ಸಂಚರಿಸುತ್ತ ಮತ್ತೆ ತುಳುನಾಡನ್ನು ಸೇರಿ ಪಯಸ್ವಿನೀ ನದಿಯನ್ನು ಮುಟ್ಟಿದರು. ಅಲ್ಲಿ ನದಿಯ ದಡದ ಮೇಲಿದ್ದ ಹಳ್ಳಿಯೊಂದರಲ್ಲಿದ್ದ ದೇವಾಲಯವನ್ನು ಹೊಕ್ಕರೆಂದೂ ಅಲ್ಲಿ ಪಂಡಿತರಿಂದ ಸನ್ಮಾನ್ಯರಾದರೆಂದೂ ಮಧ್ವವಿಜಯವು ಈ ಪ್ರಥಮಪರ್ಯಟನವನ್ನು ಮುಗಿಸುತ್ತದೆ. ಈ ಹಳ್ಳಿಯು ಯಾವುದೆಂದು 'ಭಾವಪ್ರಕಾಶಿಕೆ' ನಿರ್ದೇಶಿಸುವುದಿಲ್ಲ. ಪಲ್ಲಿಗೊಂಡೆ ಇರಬಹುದೆಂದು ಒಂದು ಅಭಿಪ್ರಾಯ.

ಈ ದಕ್ಷಿಣ ದೇಶದ ಯಾತ್ರೆಯಲ್ಲಿ ಅವರ ಗುರುಗಳೂ ಅವರೊಂದಿಗೆ ಇದ್ದರೆಂದು ತಿಳಿದುಬರುತ್ತದೆ. ಅವರು ಹೊರಟದ್ದು ''ಅಚ್ಯುತಬುದ್ಧಿನಾಸಹ'' (5, 30). ಆದರೆ ಯಾತ್ರೆಯ ವಿವರಗಳಲ್ಲಿ ಗುರುಗಳ ಪ್ರಸ್ತಾಪವೇ ಬರುವುದಿಲ್ಲ.

ಅಂತೂ ದಕ್ಷಿಣದ ಯಾತ್ರೆಯನ್ನು ಮುಗಿಸಿದ ಮೇಲೆ ಆಚಾರ್ಯರಿಗೆ ಉತ್ತರ ಭಾರತದ ಯಾತ್ರೆಯನ್ನು ಮಾಡಬೇಕೆಂಬ ಮನಸ್ಸಾಯಿತು. ಈ ಮಧ್ಯೆ ಪ್ರಸ್ಥಾನಗಳಿಗೆ ಸರಿಯಾದ ಭಾಷ್ಯವನ್ನು ಸಿದ್ಧಮಾಡಬೇಕಾದ ಅಗತ್ಯವನ್ನು ಅವರು ಅರಿತುಕೊಂಡರು. ಇದು ಪ್ರಥಮ ಪರ್ಯಟನದ ಫಲ ಎನ್ನಬಹುದು. ಈ ಸಂಕಲ್ಪಕ್ಕೆ ತಮ್ಮ ಸತೀರ್ಥರೂ ಆಶ್ರಮಜ್ಯೇಷ್ಠರೂ ಆಗಿದ್ದ ಪೇಜತ್ತಾಯ ಯತಿಗಳೂ, ವಿರೋಧಿಯಾಗಿದ್ದ ಕುದಿಪುಸ್ತೂರಿಲ್ಲಾಯನೂ ನೆರವಾದರೆಂದು ಒಪ್ಪಿಕೊಳ್ಳಬೇಕು. ಮೊಟ್ಟಮೊದಲನೆಯದಾಗಿ ಭಗವದ್ಗೀತಾಪ್ರಸ್ಥಾನದ ಮೇಲೆ ತಮ್ಮ ಭಾಷ್ಯವನ್ನು ಬರೆದು ತಮ್ಮ ಗುರುಗಳಿಗೆ ಅದನ್ನು ಒಪ್ಪಿಸಿ ಅವರ ಅನುಜ್ಞೆಯನ್ನು ಪಡೆದು ಉತ್ತರದ ಕಡೆ ಹೊರಟರು. ಮಧ್ವವಿಜಯವು ಈ ಪರ್ಯಟನದ ವಿವರಗಳನ್ನು ಕೊಟ್ಟಿಲ್ಲ ; ಉಡುಪಿಯನ್ನು ಬಿಟ್ಟ ಆಚಾರ್ಯರನ್ನು ಮೂರೇ ಶ್ಲೋಕಗಳಲ್ಲಿ ಬದರಿಗೆ ಮುಟ್ಟಿಸಿದ್ದಾರೆ. ಬದರಿಕಾಶ್ರಮಕ್ಕೆ ಬಂದು ಅಲ್ಲಿ ನಾರಾಯಣನಿಗೆ ತಮ್ಮ ಗೀತಾಭಾಷ್ಯವನ್ನು ಸಮರ್ಪಿಸಿ ಕಾಷ್ಠಮೌನ, ಅನಶನವ್ರತ ಮುಂತಾದ ತಪಶ್ಚರ್ಯಗಳಿಂದ ಹರಿಯನ್ನು ಪ್ರೀತಿಪಡಿಸಿದರು. ಶಿಷ್ಯರೊಂದಿಗೆ ಕೆಳ ಚಿಕ್ಕಬದರಿಯಲ್ಲಿಯೇ ಇದ್ದಾಗ ಈ ತಪಶ್ಚರ್ಯೆ ನಡೆದದ್ದು. ಆಗ ಅವರಿಗೆ ಮೇಲು ದೊಡ್ಡ ಬದರಿಗೆ ಬರುವಂತೆ ಕರೆ ಬಂದಿತೆಂದೂ, ಅದರಂತೆ ಅವರು ಶಿಷ್ಯರಿಗೆ ಸ್ವಸ್ತಿಯನ್ನು ಹೇಳಿ ತಾವೊಬ್ಬರೇ ಮೇಲುಬದರಿಗೆ ಹೋದರೆಂದೂ ಮಧ್ವವಿಜಯದ ವಿವರ. ಅವರ ವಿರಹವನ್ನು ತಾಳಲಾರದೆ ಸತ್ಯತೀರ್ಥರೆಂಬ ಶಿಷ್ಯರೂ ಅವರನ್ನು ಸ್ವಲ್ಪ ದೂರ ಹಿಂಬಾಲಿಸಿದರಂತೆ ; ಆದರೆ ಮಾರ್ಗ ದುರ್ಗಮವಾಗಲು ಹಿಂದಿರುಗಿದರಂತೆ.

ಮೇಲುಬದರಿಯಲ್ಲಿ ವೇದವ್ಯಾಸರನ್ನು ಸಂದರ್ಶಿಸಿ, ಅವರಿಂದ ಆಜ್ಞಪ್ತರಾಗಿ, ಅವರ ಅನುಗ್ರಹವನ್ನು ಪಡೆದು ಮತ್ತೆ ಕೆಳಗಿಳಿದು ಕೆಳಬದರಿಗೆ ಬಂದು ಶಿಷ್ಯರನ್ನು ಕೂಡಿಕೊಂಡರು. ಅಲ್ಲಿಯೇ ಬ್ರಹ್ಮಸೂತ್ರಪ್ರಸ್ಥಾನದ ಮೇಲೆ ತಮ್ಮ ಭಾಷ್ಯವನ್ನು ಸಿದ್ಧಮಾಡಿದರು. ಇವರು ಹೇಳುತ್ತಿದ್ದಂತೆ ಅದನ್ನು ಬರೆದುಕೊಂಡವರು ಸತ್ಯತೀರ್ಥರು. ಇದಾದನಂತರ ಆಚಾರ್ಯರೂ ಶಿಷ್ಯರೂ ಉಡುಪಿಯ ಕಡ ಹೊರಟು ಗೋದಾವರೀತೀರಕ್ಕೆ ಬಂದರು. ಅಲ್ಲಿ ಪಂಡಿತರೊಡನೆ ವಿಪುಲವಾದ ನಡೆಯಿತು ; ಆಚಾರ್ಯರ ಕೀರ್ತಿ ವಿಸ್ತೃತವಾಯಿತು. ಇಲ್ಲಿ ಆಚಾರ್ಯರೊಡನೆ ವಾದ ಮಾಡಿ ಸೋತು ಶಿಷ್ಯರಾದವರಲ್ಲಿ ಶೋಭನಭಟ್ಟರೆಂಬುವರು ಪ್ರಮುಖರು. ಅವರ ಪ್ರಸ್ತಾಪ ಮುಂದೆ ಬರುತ್ತದೆ.

ಗೋದಾವರೀತೀರದಿಂದ ಹೊರಟು ಆಚಾರ್ಯರು ಮತ್ತೆ ಉಡುಪಿಗೆ ಬಂದು ಅಲ್ಲಿಯೇ ಇದ್ದ ಅಚ್ಯುತಪ್ರೇಕ್ಷರನ್ನು ಸೇರಿದರು. ಬ್ರಹ್ಮಸೂತ್ರದ ಮೇಲೆ ತಾವು ಬರೆದಿದ್ದ ಭಾಷ್ಯವನ್ನು ಅವರಿಗೆ, ಬರುವ ಮೊದಲೇ, ಮುಟ್ಟಿಸಿದ್ದರು ; ಹೊರಡುವ ಮೊದಲೇ ಗೀತಾಭಾಷ್ಯವನ್ನು ಅವರ ಕೈಲಿಟ್ಟು ಹೋಗಿದ್ದರು. ಗುರುಗಳು ಈ ಭಾಷ್ಯಗಳ ಧೋರಣೆಯನ್ನು ಮೆಚ್ಚಿಕೊಂಡು ಶಿಷ್ಯನನ್ನು ಕೊಂಡಾಡಿದರು.

೨. ಕೃಷ್ಣಪ್ರತಿಷ್ಠೆ

ಹೀಗೆ ಉತ್ತರಭಾರತದ ಯತ್ರೆಯನ್ನು ಮೊದಲನೆಯಸಾರಿ ಮುಗಿಸಿಕೊಂಡು ಉಡುಪಿಗೆ ಹಿಂದಿರುಗಿದಮೇಲೆ ಆಚಾರ್ಯರು ಉಡುಪಿಯಲ್ಲಿ ಕೃಷ್ಣನ ಪ್ರತಿಷ್ಠೆಯನ್ನು ಮಾಡಿದರು ಎಂಬ ವಿವರ ಮಧ್ವವಿಜಯದಲ್ಲಿದೆ. (೯, ೪೧-೪೩) ಆದರೆ ಹಡಗಿನ ಮೇಲೆ

ಹೇರಿದ್ದ ಗೋಪೀಚಂದನದ ಗೆಡ್ಡೆಯನ್ನು ಯಜಮಾನನಿಂದ ಆಚಾರ್ಯರು ಪಡೆದು ತಂದ ಕಥೆ ಮಧ್ವವಿಜಯದಲ್ಲಿ ಕಾಣಿಸುವುದಿಲ್ಲ. ತಮ್ಮ ಶಿಷ್ಯರಿಂದ ಜಲಾಶಯವನ್ನು ಶೋಧಿಸಿ ಈ ಪ್ರತಿಮೆಯನ್ನು ಹೊರತೆಗೆಸಿ ತಾವು ಅದನ್ನು ಹೊತ್ತು ಮಠಕ್ಕೆ ತಂದರು (೯, ೪೧-೪೨) ಎಂದಷ್ಟೇ ಇಲ್ಲಿರುವ ವಿವರ. ಜಲಾಶಯವೆಂದರೆ ಕೆರೆ. ಕೆರೆಯಲ್ಲಿ ಮುಳುಗಿ ಬಿದ್ದಿದ್ದ ಮೂರ್ತಿಯನ್ನು ಇವರು ಹೊರತೆಗೆಸಿ ತಮ್ಮ ಮಠದಲ್ಲಿ ಪ್ರತಿಷ್ಠೆ ಮಾಡಿದರು ಎಂದು ಅರ್ಥವಾಗುತ್ತದೆ. ತುಂಬ ದೃಢಪ್ರಚುರವಾಗಿರುವ, ಮೇಲೆ ಹೇಳಿದ ಗೋಪೀಚಂದನ ಗೆಡ್ಡೆಯ ಕಥೆಗೆ ಆಧಾರವೇನು ಎಂಬುದು ತಿಳಿದುಬರುವುದಿಲ್ಲ. ಈ ಕೃಷ್ಣಪ್ರತಿಷ್ಠೆಯ ವಿಚಾರವನ್ನು ತ್ರಿವಿಕ್ರಮ ಪಂಡಿತಾಚಾರ್ಯರು ತಮ್ಮ 'ವಾಯುಸ್ತುತಿ'ಯಲ್ಲಿ ಪ್ರಸ್ತಾಪಮಾಡಿಲ್ಲ ; 'ಅಣುಮಧ್ವಚರಿತ'ವೂ ಈ ಪ್ರಸಂಗವನ್ನು ಹೇಳಿಲ್ಲ. ಹೃಷೀಕೇಶತೀರ್ಥರ 'ಸಂಪ್ರದಾಯಪದ್ಧತಿ'ಯಲ್ಲೇನೋ ''ರೂಪ್ಯೇ ಕೃಷ್ಣ ಕೃತಿಂ.... ಸಂಸ್ಥಾಪ್ಯ'' ಎಂದಷ್ಟು ಮಾತ್ರ ಉಲ್ಲೇಖವಿದೆ. ಮಧ್ವವಿಜಯದ ಪ್ರಸ್ತಾಪವೂ ಪ್ರಾಸಂಗಿಕವಾಗಿ ಬರುತ್ತದೆ ಅಷ್ಟೆ. ಈಗ ಮಧ್ವಾಚಾರ್ಯರ ವ್ಯಕ್ತಿತ್ವದೊಂದಿಗೆ ಅವಿನಾಭಾವಸಂಬಂಧವನ್ನು ತಳೆದಿರುವ ಉಡುಪಿಕೃಷ್ಣನ ಪ್ರತಿಷ್ಠೆಯ ವಿಚಾರದಲ್ಲಿ ಈ ಪ್ರಾಚೀನರು ಅಷ್ಟಾಗಿ ಉತ್ಸಾಹವನ್ನು ತೋರಿಸದೆ ಇರುವುದು ಸ್ವಾರಸ್ಯವಾಗಿದೆಯಲ್ಲವೆ ?

ಅಷ್ಟು ಮಾತ್ರವಲ್ಲ, ಆನಂದಗಿರಿಯು ರಚಿಸಿದನೆನ್ನಲಾದ 'ಶಂಕರದಿಗ್ವಿಜಯ'ದಲ್ಲಿ ಹಸ್ತಾಮಲಕಾಚಾರ್ಯರು ಉಡುಪಿಕೃಷ್ಣನನ್ನು ಪ್ರತಿಷ್ಠೆ ಮಾಡಿದರೆಂಬ ಉಲ್ಲೇಖವಿದೆ : ''ರಜತಪೀಠಾದಿಸ್ಥಲೇಷು ಕೃಷ್ಣಾದಿದೇವತಾ ಪ್ರತಿಮಾಂ ಕೃತ್ವಾ.....'' ಹಸ್ತಾಮಲಕರೇ ಈ ಕಡೆ 'ಪಂಚಮುದ್ರಾಂಕವಿರಾಜಿತ'ರಾದ, 'ಭಗವದಷ್ಟಾಕ್ಷರ ಮಂತ್ರಜಪಾಸಕ್ತ'

ರಾದ ಬ್ರಾಹ್ಮಣರನ್ನೂ ವ್ಯವಸ್ಥೆ ಮಾಡಿದರೆಂದು ಇಲ್ಲಿಯೇ ಬರುವ ವಿವರ ; ಎಂದರೆ ಇವರು ಭಾಗವತವೈಷ್ಣವರು. ಈ ಸಂಪ್ರದಾಯಕ್ಕೇ ಅಚ್ಯುತಪ್ರೇಕ್ಷರ ಮಠವೂ ಸೇರಿದ್ದಿತು ; ಇದೇ ಪ್ರಾಂತ್ಯದಲ್ಲಿರುವ ಎಡನೀರು ಮಠವೂ ಈ ಸಂಪ್ರದಾಯದ್ದೇ. ಎಡನೀರು ಮಠವನ್ನು ತೋಟಕಾಚಾರ್ಯರ ಮಠವೆನ್ನುತ್ತಾರೆ. ಈ ಮಠದ ಆರಾಧ್ಯದೇವರೂ ಗೋಪಾಲಕೃಷ್ಣ. ಶಿಲ್ಪವಿನ್ಯಾಸದ ದೃಷ್ಟಿಯಿಂದ ನೋಡಿದರೆ ಉಡುಪಿ ಕೃಷ್ಣನಿಗೂ ಈ ಪ್ರಾಂತ್ಯದಲ್ಲಿರುವ ಉಳಿದ ಕೃಷ್ಣವಿಗ್ರಹಗಳಿಗೂ ತುಂಬ ಸಾಮ್ಯವಿದೆ : ಕಣ್ವಪುರದ ಗೋಪಾಲಕೃಷ್ಣ, ಕಾವು ಪಾರ್ಥಸಾರಥಿ, ಶಡರಂಪಾಡಿಯ ಗೋಪಾಲಕೃಷ್ಣ ಮುಂತಾದುವೆಲ್ಲ ಉಡುಪಿಕೃಷ್ಣ ನಂತೆಯೇ ದ್ವಿಭುಜ, ಸ್ಥಾನಕ, ಬಾಲರೂಪ, ಮಂಥದಾಮವಿರಾಜಿತ ; ಹೆಚ್ಚೂ ಕಡಿಮೆ ಒಂದೇ ಶೈಲಿಗೆ ಸೇರಿದುವು. ಒಂದೇ ಕಾಲದಲ್ಲಿ ಮೈದಳೆದಿದ್ದರೂ ಇರಬಹುದು. ಆದರೆ ಮಧ್ವಾಚಾರ್ಯರಿಗೆ ಮುಂಚೆ ಉಡುಪಿಯಲ್ಲಿ ಕೃಷ್ಣದೇವಾಲಯವಿದ್ದ ಉಲ್ಲೇಖವಿಲ್ಲ ; ಉಡುಪಿಯ ದೇವರು ಅನಂತೇಶ್ವರನೇ. ಈಗಿನ ಮಧ್ವಸರೋವರವೂ ಮೊದಲಿಗೆ ಅನಂತಸರಸ್ಸು. ಎಂದರೆ ಮೊದಲಿಗೆ ಈ ಕೊಳ ಅನಂತೇಶ್ವರನ ಗುಡಿಗೆ ಹೊಂದಿಕೊಂಡಂತೆ ಇದ್ದಿರಬಹುದು. ಈಗೇನೋ ಕೃಷ್ಣಮಠಕ್ಕೆ ಸೇರಿಕೊಂಡಿದೆ. ಆದರೆ ದೇವರಿಗೆ ಇದಿರಾಗಿ ಪುಷ್ಕರಿಣಿ ಇರುವುದು ವಾಡಿಕೆ ; ಅನಂತೇಶ್ವರನ ಗುಡಿಗೆ ಇದು ಸರಿಯಾಗಿದೆ.

ಇತಿಹಾಸಸಂಹಿತೆಯ ಸಹ್ಯಾದ್ರಿಖಂಡವೆಂಬ ಭಾಗದಲ್ಲಿ ಬರುವ ಇಂದುಕ್ಷೇತ್ರ (ಉಡುಪಿ) ಮಾಹಾತ್ಮ್ಯೆಯೇನೋ ಉಡುಪಿಯನ್ನು ಕೃಷ್ಣಪುರಿಯೆಂದೇ ಕರೆದು ಕೃಷ್ಣನ ಉತ್ಕರ್ಷೆಯನ್ನು ಹೇಳುತ್ತದೆ. ಆದರೆ ಇದು ಅರ್ವಾಚೀನಕೃತಿ ಎಂಬುದು ಸ್ಪಷ್ಟವಾಗಿದೆ ; ಗ್ರಂಥದುದ್ದಕ್ಕೂ ಕೃಷ್ಣಪೂಜಕರಾದ ಯತಿಗಳ ಹೆಗ್ಗಳಿಕೆಯನ್ನೇ ಹೊಗಳಿ ಯಾತ್ರಿಕರು

ಅವರನ್ನೇ ಪೂಜಿಸಿ, ಸನ್ಮಾನಿಸಿ, ಸತ್ಕರಿಸಿ, ಪ್ರೀತಿಪಡಿಸಬೇಕೆಂದು ಮತ್ತೆ ಮತ್ತೆ ಹೇಳಿರುವುದನ್ನು ನೋಡಿದರೆ ಗ್ರಂಥವನ್ನು ಸಿದ್ಧಪಡಿಸಿದ ಹಿನ್ನೆಲೆ ಅರ್ಥವಾಗುತ್ತದೆ. ಆದರೂ ಇದರಲ್ಲಿ ಕೃಷ್ಣಪ್ರತಿಷ್ಠೆಯ ಸ್ವಾರಸ್ಯವಾದ ವಿವರವಿದೆ. (೨೦ನೆಯ ಅಧ್ಯಾಯ). ಮಧ್ವಾಚಾರ್ಯರು ದುರ್ಗಾದೇವಿಯನ್ನು ಅರ್ಚಿಸಿ ಆಕೆಯ ವರದಿಂದ ತಮ್ಮ ಧ್ಯಾನಸಮಯದಲ್ಲಿ ಕೃಷ್ಣನ ಬಾಲರೂಪವನ್ನು ನೋಡಿದರಂತೆ. ಕೃಷ್ಣನ ಈ ಅರ್ಚಾಮೂರ್ತಿಯು ಸಮುದ್ರ ಮಧ್ಯದಲ್ಲಿ ಇದ್ದಿತಂತದೆ ; ಗೋಪೀಚಂದನದಿಂದ ಲೇಪನ ಮಾಡಿದ್ದ ಈ ಮೂರ್ತಿಯನ್ನು ಆಚಾರ್ಯರಿಗೆ ವರುಣನೇ ತಂದು ಕೊಟ್ಟನಂತೆ. ಅದನ್ನು ಅವರು ''ಅನಂತಾಸನ ಸಂಸ್ಥಾನೇ ವಿಧಿನಾ'' ಸ್ಥಾಪಿಸಿದರಂತೆ ; ಎಂದರೆ ಮೊದಲು ಅನಂತೇಶ್ವರನ ಗುಡಿಯಲ್ಲಿಯೇ ಇದರ ಪ್ರತಿಷ್ಠೆಯಾಗಿದ್ದಿತೆಂದರ್ಥ. ಅನಂತರ ಅನಂತರಸ್ಸಿನ ತೀರದಲ್ಲಿ ಸಂಶೋಧನೆಮಾಡಿ ಅಲ್ಲಿದ್ದ ಗುಡಿಯನ್ನು ಶುದ್ಧಿಮಾಡಿ ಅದರಲ್ಲಿ ಕೃಷ್ಣನನ್ನು ಪ್ರತಿಷ್ಠೆ ಮಾಡಿದರಂತೆ (ಶ್ಲೋ. ೨೨, ೨೩). ಇದರಲ್ಲಿ ಕೂಡ ಹಡಗಿನಲ್ಲಿ ಹೇರಿದ್ದ ಗೋಪೀಚಂದನದ ಗೆಡ್ಡೆ ಒಡೆದು ಹೊರಬಂದ ಕೃಷ್ಣಮೂರ್ತಿಯ ಕಥೆ ಕಾಣುವುದಿಲ್ಲ. ಅನಂತಸರಸ್ಸಿನ ಬಳಿ ಗುಡಿಯೊಂದು ಮೊದಲೇ ಇದ್ದ ವಿವರ ಸ್ವಾರಸ್ಯವಾದುದು. ''ಸಂಶೋಧ್ಯ ಸರಸೀತೀರೇ ಸಂಪೂಜ್ಯ ಹರಿಮಂದಿರಂ'' ಎಂದು ಅಲ್ಲಿ ಬರುವ ಮಾತು. ಪೂರ್ವದಲ್ಲಿ ವರುಣನು ಈ 'ಲೋಕಸುಂದರವಾದ ಮಂದಿರ'ವನ್ನು ಕಟ್ಟಿಸಿದ್ದನೆಂದೂ, ಈ ''ವಾರುಣಭವನ''ದಲ್ಲಿ ಹರಿಯನ್ನು ಆಚಾರ್ಯರು ಸಂಸ್ಥಾಪಿಸಿದರೆಂದೂ ವಿವರಣೆಯಿದೆ (ಶ್ಲೋ. ೨೪, ೨೫).

ಎಂದರೆ ಆಚಾರ್ಯರಿಗೆ ಪೂರ್ವದಲ್ಲೇ ಈಗಿನ ಮಧ್ವಸರಸ್ಸಿನ ಬಳಿ ಒಂದು ಗುಡಿ ಇದ್ದಿತೆಂದೂ, ಅದರಲ್ಲಿ ಅವರು ಕೃಷ್ಣನ ಮೂರ್ತಿ

ಯನ್ನು ಪ್ರತಿಷ್ಠೆ ಮಾಡಿದರೆಂದೂ ತಾತ್ಪರ್ಯ. ಈ ಗುಡಿಯಲ್ಲಿ ಮೊದಲಿಗೆ ಯಾವ ಮೂರ್ತಿ ಇದ್ದಿತು ? ಆಚಾರ್ಯರ ಕಾಲಕ್ಕೂ ಅದು ಇದ್ದಿತೆ ? ಇದ್ದಿತಾದರೆ ಆಚಾರ್ಯರು ಅದನ್ನು ಏನು ಮಾಡಿದರು ? ಗುಡಿಯ ಮಹಾದ್ವಾರ ಮುಚ್ಚಿ ಕೃಷ್ಣನನ್ನು ಹಿಂಬದಿಯ ಕಿಟಕಿಯಿಂದಲೇ ಕಾಣಬೇಕೆನ್ನುವ ಪದ್ಧತಿಗೂ ಇದಕ್ಕೂ ಏನಾದರೂ ಸಂಬಂಧವುಂಟೆ ? ಹೀಗೆ ಹಲವಾರು ಸಮಸ್ಯೆಗಳು ಸಹಜವಾಗಿಯೇ ಎದ್ದು ನಿಲ್ಲುತ್ತವೆ. ಇವನ್ನೆಲ್ಲ ಬಗೆಹರಿಸುವುದು ಅಸಾಧ್ಯವಲ್ಲವಾದರೂ ಕಷ್ಟವೇ. ಇಷ್ಟಂತೂ ನಿರ್ವಿವಾದ. ಇಲ್ಲಿ ವಿಪುಲವಾಗಿ, ವಿಸ್ತೃತವಾಗಿದ್ದ ಜೈನಪ್ರಭಾವವನ್ನು ಶೈವರು ಕಳೆಗುಂದಿಸಿ ತಮ್ಮ ವರ್ಚಸ್ಸನ್ನು ಮೂಡಿಸಿದಂತೆಯೇ ಮಧ್ವಾಚಾರ್ಯರು ಶೈವರ ಕಲೆಯನ್ನು ಕಡೆಗಾಣಿಸಿ ವೈಷ್ಣವ ಪ್ರಭಾವ ವನ್ನು ಬೇರೂರಿಸಿದರು. ಈ ಅವಸ್ಥಾಂತರಗಳಲ್ಲಿ ಗುಡಿಗಳೂ, ಮೂರ್ತಿ ಗಳೂ ಪಾಲ್ಗೊಂಡುವು. ಅನಂತೇಶ್ವರನ ಗುಡಿಯು ಮೊದಲಿಗೆ ಅನಂತನಾಥ ತೀರ್ಥಂಕರನ ಚೈತ್ಯಮಂದಿರವಾಗಿದ್ದಂತೆಯೇ ಈಗಿನ ಕೃಷ್ಣನ ಗುಡಿಯೂ ಒಂದು ಕಾಲಕ್ಕೆ ಜೈನರ ಬಸದಿಯಾಗಿದ್ದಿದ್ದರೆ ಆಶ್ಚರ್ಯವೇನಲ್ಲ.

ಇನ್ನೊಂದು ತೀರದ ಸಮಸ್ಯೆ. ಈ ಕಡೆ ಕಾಣಬರುವ ಕೃಷ್ಣನ ವಿಗ್ರಹಗಳ ಶೈಲಿಯೇ ಅಸಾಧಾರಣವಾದುದು. ಭಾರತದೇಶದ ಇನ್ನೆಲ್ಲೂ ಇಂಥ ಮೂರ್ತಿಗಳು ಕಂಡು ಬರುವುದಿಲ್ಲ ; ಬಾಲಕೃಷ್ಣನನ್ನು ಈ ರೀತಿ ಮೂಡಿಸಬೇಕೆಂದು ಯಾವ ಶಿಲ್ಪಾಗಮವೂ ಹೇಳುವುದಿಲ್ಲ. ಇತರೆಡೆ ಗಳಲ್ಲಿ ದಂಡಾಯುಧಪಾಣಿಯಾದ ಬಾಲ ಸುಬ್ರಹ್ಮಣ್ಯ (ಕುಮಾರ)ನನ್ನು ಹೀಗೆ ರೂಪಿಸುವುದುಂಟು. ಕುಮಾರನ ಸಂಪ್ರದಾಯವೇನೋ ಈ ಕಡೆ ವಿಶೇಷವಾಗಿ ಬೆಳೆದಿದ್ದಿತು ; ಕುಮಾರಮಂಗಳ, ಕುಮಾರಧಾರೆ, ಕುಮಾರಾದ್ರಿ (ಸುಬ್ರಹ್ಮಣ್ಯಕ್ಷೇತ್ರ), ಮುಂತಾದ ಕ್ಷೇತ್ರಗಳೇ ಇದಕ್ಕೆ ಸಾಕ್ಷಿ. ಇನ್ನೊಂದು ಸ್ವಾರಸ್ಯವಾದ ನಿದರ್ಶನವಿದೆ. ಉಡುಪಿ ತಾಲ್ಲೂಕಿನ

ಕೊಡವೂರಿನಲ್ಲಿ ಆರುಮುಖ (ಷಣ್ಮುಖ)ಗಳ ಬಲರಾಮನ ಮೂರ್ತಿಯಿದೆ. ಮೊದಲು ಕುಮಾರನಾಗಿದ್ದವನು ಬಲರಾಮನಾದನೆನ್ನಲು ಅಡ್ಡಿಯಿಲ್ಲ. ಇದಲ್ಲದೆ ಜೈನತೀರ್ಥಂಕರರನ್ನು (ಅಥವಾ ಯಕ್ಷರನ್ನು) ಹೀಗೆಯೇ ಚಿತ್ರಿಸುವ ಪದ್ಧತಿಯಿದ್ದಂತೆ ತೋರುತ್ತದೆ. ನಿದರ್ಶನಕ್ಕೆ ಗೋವೆಯ ಕುವಲೇಶ್ವರಮೂರ್ತಿ. ಅಲ್ಲಿ ಕೋರಗಾಂವವೆಂಬ ಹಳ್ಳಿಯ ಕಮಲೇಶ್ವರ ದೇವಾಲಯದ ಬಳಿ ಕುವಲೇಶ್ವರ ಅಥವಾ ಕುವಲನಾಥ ಎನಿಸಿಕೊಳ್ಳುವ ಮೂರ್ತಿಯಿದೆ. ಇದನ್ನು ಅಲ್ಲಿನ ಜನ ತೀರ್ಥಂಕರನೆಂದೇ ಪೂಜಿಸುತ್ತಾರೆ. ಈ ಮೂರ್ತಿಯು ಬಹುಮಟ್ಟಿಗೆ, ಬಹುಮಟ್ಟಿಗೇನು ಎಲ್ಲ ವಿವರಗಳಲ್ಲಿಯೂ, ಉಡುಪಿ ಕೃಷ್ಣನನ್ನೇ ಹೋಲುತ್ತದೆ. ಗೋವಾ ಸರ್ಕಾರದವರು ೧೯೬೫ರಲ್ಲಿ ಪ್ರಕಟಿಸಿದ Ancient Shrines of Goa (A Pictorial Survey) ಎಂಬ ಗ್ರಂಥದಲ್ಲಿ ಈ ಮೂರ್ತಿಯ ಭಾವ ಚಿತ್ರವನ್ನು ಕೊಟ್ಟಿದ್ದಾರೆ (ಚಿತ್ರ ೫೮). ಈ ವಿವರಗಳನ್ನೂ ಕೊಟ್ಟಿದ್ದಾರೆ. ಕುತೂಹಲವುಳ್ಳವರು ಉಡುಪಿ ಕೃಷ್ಣನಿಗೂ ಈ ಕುವಲನಾಥ ತೀರ್ಥಂಕರನಿಗೂ ಇರುವ ಸಾಮ್ಯವನ್ನು ನೋಡಬಹುದು. ಇದು ಮಧ್ಯಯುಗದ ಆರಂಭಕಾಲದಲ್ಲಿ ಸಿದ್ಧವಾದ ವಿಗ್ರಹವೆಂದು ಹೇಳುತ್ತಾರೆ.

ಆದರೆ ಈ ಕುವಲನಾಥನು ಯಾರು ? ಜೈನರ ಚತುರ್ವಿಂಶತಿ ತೀರ್ಥಂಕರರ ಪರಂಪರೆಯಲ್ಲಿ ಈ ಹೆಸರು ಕಾಣಬರುವುದಿಲ್ಲ. ಸಾಮಾನ್ಯವಾಗಿ ತೀರ್ಥಂಕರರ ಮೂರ್ತಿಗಳು ಕಾಯೊತ್ಸರ್ಗಭಂಗಿಯಲ್ಲಿ ಅಥವಾ ಬದ್ಧಪದ್ಮಾಸನ ಮುದ್ರೆಯಲ್ಲಿ ಇರುತ್ತವೆ ; ಈ ಕುವಲನಾಥನ ಮೂರ್ತಿ ಹಾಗಿಲ್ಲ. ಇದು ತೀರ್ಥಂಕರನೇ ಎನ್ನುವ ಸಂಶಯಬರುತ್ತದೆ. ಕುವಲನಾಥ ಎನ್ನುವ ಹೆಸರೇನೋ ಕೇವಲಿನಾಥ ಎನ್ನುವ ಪದದ ಅಪಭ್ರಂಶವಿರಬಹುದು. ತೀರ್ಥಂಕರರಲ್ಲಿ ಕೃಷ್ಣನಿಗೆ

ನೆಂಟನಾದ (ಸೋದರವಾವೆಯ) ನೇಮಿನಾಥನು ಕೃಷ್ಣನಂತೆಯೇ ಹರಿವಂಶದವನು, ಅವನ ಬಣ್ಣ ಕಪ್ಪು, ಅವನ ಲಾಂಛನ ಶಂಖ, ಅವನ ಯಕ್ಷಿಣಿ ಅಂಬಿಕೆ (ಅಥವಾ ದುರ್ಗೆ). ಉಡುಪಿಯ ಕೃಷ್ಣಕ್ಷೇತ್ರಕ್ಕೂ ದುರ್ಗೆಯೇ ಅಭಿಮಾನ ದೇವತೆಯಲ್ಲವೆ ? ಜೈನರ ೨೨ನೆಯ ತೀರ್ಥಂಕರ ನೇಮಿನಾಥ (ಅರಿಷ್ಟನೇಮಿ)ನಿಗೂ ಭಾಗವತರ ಕೃಷ್ಣನಿಗೂ ಹತ್ತಿರದ ಸಂಬಂಧವೇನೋ ಸಿದ್ಧವಾಗಿದೆ. ಜೈನ ಅನಂತನಾಥನು ಶೈವ ಅನಂತೇಶ್ವರನಾದಂತೆ, ಚಂದ್ರಪ್ರಭನು ಚಂದ್ರೇಶ್ವರನಾದಂತೆ ಇಲ್ಲಿನ ಕೃಷ್ಣನೂ ಮೊದಲಿಗೆ ಜೈನಮೂರ್ತಿಯಾಗಿ ಇದ್ದಿದ್ದರೆ ಆಶ್ಚರ್ಯವೇನಲ್ಲ. ಅಥವಾ ನೇಮಿನಾಥ ತೀರ್ಥಂಕರನ ನೆಂಟನೆಂದೂ, ಶಿಷ್ಯನೆಂದೂ ದ್ವಾರಾವತಿಯ ದೇವಕೀ ಪುತ್ರ ಕೃಷ್ಣನನ್ನೂ ಜೈನರು ನಿಲ್ಲಿಸಿ ಪೂಜಿಸಲಾರಂಭಿಸಿರಬಹುದು. ಕೃಷ್ಣನು ದ್ವಾರಕೆಯ ರಾಜನಾಗಿದ್ದಾಗ ನೇಮಿನಾಥ ತೀರ್ಥಂಕರನು ಅಲ್ಲಿಗೆ ಬಂದು ಜಿನಧರ್ಮವನ್ನು ಬೋಧಿಸಲು ಕೃಷ್ಣನ್ನು ಅದನ್ನು ಮನಸಾರೆ ಮೆಚ್ಚಿಕೊಂಡನಾದರೂ, ಆ ಧರ್ಮದ ಕಠಿಣ ವ್ರತಗಳನ್ನು ಪಾಲಿಸಲು ತಾನು ಅಸಮರ್ಥನೆಂದು ಬಗೆದು ತನ್ನ ಪ್ರಜೆಗಳು ಈ ಧರ್ಮಕ್ಕೆ ಒಲಿಯುವಂತೆ ಮಾಡಿದನೆಂದೂ, ಈ 'ವಚನಪುಣ್ಯ'ದ ಬಲದಿಂದ ಮುಂದೆ ಅವನು ತೀರ್ಥಂಕರನಾಗುವನೆಂದೂ ಜೈನರ ವಿಶ್ವಾಸವಿದೆ. ನೇಮಿಯು ಕೃಷ್ಣನನ್ನು ಪ್ರಚಾರಕ್ಕೆ ಕಳುಹಿಸಿದಾಗಲೆಲ್ಲ ಅವನ ಸೋದರ ಬಲರಾಮನೂ ಅವನ ಜೊತೆಯಲ್ಲಿಯೇ ಹೋಗುತ್ತಿದ್ದನೆಂದೂ ಜೈನ ಗ್ರಂಥಗಳಲ್ಲಿ ವಿವರವಿದೆ. ಕೃಷ್ಣನ ಕ್ಷೇತ್ರದಲ್ಲಿಯೇ ಬಲರಾಮನ ಸನ್ನಿಧಿಯೂ (ವಡಭಾಂಡೇಶ್ವರ) ಇರುವುದು ಸ್ವಾರಸ್ಯವಾದುದೇನೋ ಹೌದು. ಸಮುದ್ರ ವಿಜಯ ರಾಜನು ತನ್ನ ಮಗನಾದ ನೇಮಿನಾಥನಿಗೂ, ತನ್ನ ಸೋದರ ವಸುದೇವನ ಮಕ್ಕಳಾದ ಬಲರಾಮ ಕೃಷ್ಣರಿಗೂ ಒಟ್ಟಿಗೆ ಉಪನಯನ ಸಂಸ್ಕಾರವನ್ನು ನಡೆಸಿದನಂತೆ. ಮುಂದೆ ಮುನಿಯಾದ ನೇಮಿಯೇ

ಕೃಷ್ಣನಿಗೆ ಗೀತೆಯನ್ನು ಮಾಗಧಿ ಪ್ರಾಕೃತ ಭಾಷೆಯಲ್ಲಿ ಉಪದೇಶಿಸಿದ ನಂತೆ. ಈ ವಿವರವು ಕುಮುದೇಂದುವಿನ 'ಭೂವಲಯ'ವೆಂಬ ಗ್ರಂಥ ದಲ್ಲಿ ಬರುತ್ತದೆ. ಈ ಮಾಗಧೀಗೀತೆಯನ್ನು ಡಾ॥ ಶ್ರೀಕಂಠಶಾಸ್ತ್ರಿಗಳು ಉದ್ಧರಿಸಿದ್ದಾರೆ. ("Bhagavan Neminatha and Bhagavad-Gita," The Voice of Ahimsa, 1955, Vol. V, No. 1-2, pp. 55-61)

ಅಂತೂ ಕೃಷ್ಣನಿಗೂ ಜೈನಸಂಪ್ರದಾಯಕ್ಕೂ ನಿಕಟವಾದ ಸಂಬಂಧವಿರುವುದು ನಿರ್ವಿವಾದವಾದುದು. ಉಡುಪಿಯಲ್ಲಿ ಇದು ಯಾವ ರೂಪವನ್ನು ತಳೆಯಿತು ಎಂದು ಹೇಳುವುದು ಕಷ್ಟ. ಎಂದೇ ವಿವರಗಳನ್ನು ಕಾಣಿಸಿದ್ದೇನೆ, ಸಿದ್ಧಾಂತ ಸಾಹಸಕ್ಕೆ ಕೈ ಹಾಕಿಲ್ಲ. ಈ ವಿಚಾರದಲ್ಲಿ ಹೆಚ್ಚಿನ ಸಂಶೋಧನೆ ನಡೆಯಬೇಕು. ಇತಿಹಾಸದ ಮುಂದೆ ಧರ್ಮದ ಛಲ ಸ್ವಲ್ಪ ಪಕ್ಕಕ್ಕೆ ಸರಿಯಬೇಕು.

ಕೃಷ್ಣನ ಗುಡಿಯಲ್ಲಿ ಉತ್ತರದಿಗ್ಭಾಗದ ಗೋಡೆಯ ಮೇಲೆ ಶಾಸನದ ಕಲ್ಲೊಂದು ಸೇರಿದೆ. ಇದು ವಾದಿರಾಜ ತೀರ್ಥರ (೧೪೮೧-೧೬೦೧) ಶಿಷ್ಯರಾದ ವೇದ ವೇದ್ಯತೀರ್ಥರು ಕೃಷ್ಣನ ಗುಡಿಯನ್ನು ಕಟ್ಟಿಸಿದ ಸಂದರ್ಭದಲ್ಲಿ ಸಿದ್ಧವಾದ ಶಾಸನ. ಅದರ ಒಕ್ಕಣೆ ಹೀಗಿದೆ : ''ವೀರ ವೆಂಕಟಪತಿದೇವರಾಯರು ಪೆನುಗೊಂಡೆಯಲ್ಲಿ ಸಿಂಹಾಸನಸ್ಥರಾಗಿದ್ದಾಗ ಅವರ ಆಗ್ನಾಧಾರಕರಾಗಿ ಕೆಳದಿ ವೆಂಕಟಪ್ಪನಾಯಕರು ತುಳುರಾಜ್ಯ ಮಲೆರಾಜ್ಯವನ್ನು ಆಳುತ್ತಿದದಾಗ (.... ವೇದವೇದ್ಯತೀರ್ಥರು.....) ತಂಮ ಪೂಜಾಪರಿಯಾಯದಲ್ಲಿ ಉಡುಪಿನ ಶ್ರೀಕೃಷ್ಣದೇವರ ಮಠಊ ಮೊದಲೆ ಮರಗೆಲಸವಾಗಿ ಯಿರಲಾಗಿ । ಶ್ರೀಕೃಷ್ಣದೇವರನೂ ಹೊರಮಂಟಪಕೆ ಬಿಜೆಮಾಡಿಸಿ ಅಲ್ಲಿಯೂ ದೇವರ ಪೂಜೆಯನೂ ಸಾಂಗವಾಗಿ ನಡೆಸುತಲೆ ದೇವರ ಗರ್ಭಾಗಾನಮುಂದಣ ಮಠವನೂ ಶಿಲಾಮಯವ ಮಾಡಿಸಿ ಆಮೇಲೆ ಎರಡು ನೆಲೆಯಾಗಿ ತಾಂಬ್ರದ ಹೊದಕೆಯನೂ ಮಾಡಿಸಿ ಆಮೇಲೆ ಕಲಶ ಸ್ಥಾಪನೆಯನೂ ಮಾಡಿಸಿ....'' ಇತ್ಯಾದಿ. (AR No. 110 of 1901) ಎಂದರೆ ಮೊದಲಿಗಿದ್ದುದು ಮರದ ಗುಡಿ, ಇವರ ಕಾಲದಲ್ಲಿ

ಇದು ಕಲ್ಲಿನ ಕಟ್ಟಡವಾಯಿತು. ಇದು ಆಗುವಾಗ ಕೃಷ್ಣನ ವಿಗ್ರಹವನ್ನು ನೆಲೆಯಿಂದ ಕಿತ್ತು ಹೊರಮಂಟಪಕ್ಕೆ ತಂದರು. ಈ ವಿವರವನ್ನು ನೋಡಿದರೆ ಕೃಷ್ಣನು ಆಚಾರ್ಯರ ಪ್ರತಿಷ್ಠೆಯೆಂಬ ಕಲ್ಪನೆ ಆ ಕಾಲಕ್ಕೆ ಇದ್ದಿತೇ ಎಂದು ಸಂಶಯ ಒದಗುತ್ತದೆ. ಆಚಾರ್ಯರ ಪ್ರತಿಷ್ಠೆಯೇ ಆಗಿದ್ದರೆ, ಮೂರ್ತಿಯನ್ನು ಕೀಳುವ ಸಾಹಸವನ್ನು ಮಠಾಧೀಶರು ಮಾಡುವರೆ ?

ಅದೇ ಸ್ಥಳದಲ್ಲಿ ಇನ್ನೊಂದು ಶಾಸನವಿದೆ. ಇದು ಬಾರಕೂರು ರಾಜ್ಯವನ್ನು ಅಂಣಪವೊಡೆಯರು ಆಳುತ್ತಿದ್ದಾಗಿನದು. ''ವೀರ ಪ್ರತಾಪ ದೇವರಾಯ ಮಹಾರಾಯರ ನಿರೂಪದಿಂದ ಸಿಂಗಣದಣನಾಯಕರು ಸಮಸ್ತರಾಜ್ಯವ ಪಾರಿಪತ್ಯದಿಂದ ಪಾಲಿಸುತ್ತಿರುವಲ್ಲಿ.....'' ಆಗ ಶಿವಳ್ಳಿಗ್ರಾಮಕ್ಕೆ ದುಃಸ್ಥಿತಿ ಬಂದಿದ್ದಿತೆಂದೂ ''ಅಲ್ಲಿಯ ದೇವಸ್ಥಾನದ ಅನ್ಯಮನ್ಯಂಗಳು ತಪ್ಪಿದಲ್ಲಿ ಉಡುಪಿನ ಶ್ರೀಕೃಷ್ಣದೇವರ ಪ್ರತಿಮಾ ಛಲನೆವಾದ್ದಲ್ಲಿ ಶ್ರೀಕೃಷ್ಣದೇವರಿಗೆ ಕಟ್ಟಳೆಯವರು ಅರಸಿಗೆ ಬಿಂನಾಹ ಮಾಡಿದಲ್ಲಿ ಅಂಣಪವೊಡೆಯರ ನಿರೂಪದಿಂ ಸಿಂಗರಸವೊಡೆಯರು'' ಗುಡಿಗೆ ದಾನಗಳನು ಕೊಟ್ಟರೆಂದೂ ಈ ಶಾಸನ ಹೇಳುತ್ತದೆ. ಇದರ ಸಂವತ್ಸರ ಆನಂದ ಸಂವತ್ಸರವೆಂಬ ಉಲ್ಲೇಖವೂ ಅಲ್ಲಿಯೇ ಇದೆ. ವೀರ ಪ್ರತಾಪದೇವರಾಯನೆಂದರೆ ಇಮ್ಮಡಿ ದೇವರಾಯ (೧೪೨೪-೧೪೪೬). ಅಣ್ಣಪ್ಪ ಒಡೆಯನ ಕಾಲ ೧೪೩೧-೧೪೪೦. ಎಂದರೆ ವಾದಿರಾಜರ ಕಾಲಕ್ಕೆ ನಲವತ್ತು ವರ್ಷಗಳಷ್ಟು ಮೊದಲೇ ಉಡುಪಿಯಲ್ಲಿ ಕೃಷ್ಣನನ್ನು ಕಿತ್ತು ಹೊರಗ ಹಾಕಿದ್ದರು ; ಅದನ್ನು ಅರಸರು ಪುನಃ ಪ್ರತಿಷ್ಠೆ ಮಾಡಿಸಿದ್ದರು. ಬಂಗರು, ಚೌಟರು, ಅಜಿಲರು ಮುಂತಾದ ನಾಯಕರು ಪರಸ್ಪರ ಜಗಳವಾಡುತ್ತಿದ್ದ ಕಾಲ ಅದು. ಕೃಷ್ಣನ ಪ್ರತಿಮಾಚಾಲನೆಯಾದದ್ದು ಏತಕ್ಕೆಂಬುದು ಶಾಸನದಿಂದ ತಿಳಿದು ಬರುವುದಿಲ್ಲ. ಅಂತೂ ಆ ಕಾಲಕ್ಕೆ ಕೃಷ್ಣನ ಗುಡಿಯೊಂದು ಉಡುಪಿಯಲ್ಲಿ ಇದ್ದಿತೆಂಬುದು ಸ್ಪಷ್ಟವಾಗುತ್ತದೆ.

ಇದು ಹೇಗಾದರೂ ಇರಲಿ. ಆಚಾರ್ಯರು ಕೃಷ್ಣನನ್ನು ಪ್ರತಿಷ್ಠಮಾಡುವಾಗ ಇದನ್ನು ವಿರೋಧಿಸಿದವರೂ ಇದ್ದರು ಎಂಬುದು ಮಧ್ವವಿಜಯದಿಂದಲೇ ಸ್ಪಷ್ಟವಾಗುತ್ತದೆ. ಜರಾಘಟಿತಗೋತ್ರ (ಮರಡಿತ್ತಾಯ)ದ ಒಬ್ಬ ಬ್ರಾಹ್ಮಣನನ್ನು ('ಪಾಪಪೂರುಷಂ, ಘಾತುಕಂ') ಆಚಾರ್ಯರು ನಿರಾಕರಿಸಬೇಕಾಯಿತು (೯, ೪೪-೪೫). ಇವು ಯಾರು ? ಇವನ ವಿರೋಧಕ್ಕೆ ಆಧಾರವೇನು ? ಇವನನ್ನು ಆಚಾರ್ಯರು ನಿರಾಕರಿಸಿದ ಬಗೆ ಹೇಗೆ ? ಈ ಪ್ರಶ್ನೆಗಳಿಗೆ ಮಧ್ವವಿಜಯದಲ್ಲಿ ಉತ್ತರ ದೊರೆಯುವುದಿಲ್ಲ. ಕೃಷ್ಣ ಪ್ರತಿಷ್ಠೆಯ ಸಮಯದಲ್ಲಿ ಪಕ್ಷನಾಥರೆಂಬ ಜನರ ಸಹಾಯವನ್ನು ಆಚಾರ್ಯರು ಪಡೆದರೆಂದು ವಿವರವಿದೆ. ಮೂಡಿಲ್ಲಾಯ, ನಿಡಂಬೂರಾಯ ಮನೆತನದ ಪಕ್ಷನಾಥರು ಗ್ರಾಮದ ಜನರ ರಕ್ಷೆ-ಶಿಕ್ಷೆಗಳನ್ನು ನೋಡಿಕೊಳ್ಳುವ ಅಧಿಕಾರಿಗಳೆಂದು ಹಿಂದೆಯೇ ಹೇಳಿದೆಯಷ್ಟೆ. ಇವರ ನೆರವನ್ನು ಆಚಾರ್ಯರು ಪಡೆಯಬೇಕಾದರೆ ಪರಿಸ್ಥಿತಿ ಸುಮಾರಾಗಿಯೇ ಬಿಕ್ಕಟ್ಟಾಗಿರಬೇಕು. ಕೃಷ್ಣ ಪ್ರತಿಷ್ಠೆಯ ಅಂಗವಾಗಿ ಹೋಮ ಮುಂತಾದವುಗಳನ್ನು ಮಾಡಿದವರು ಆಚಾರ್ಯರ ಪೂರ್ವಾಶ್ರಮದ ಗುರುಗಳ (?) ಮಗನಾದ ವಾಸುದೇವನೆಂಬುವರು ; ಋತ್ವಿಜರಾಗಿದ್ದವರು ಆಚಾರ್ಯರ ಪೂರ್ವಾಶ್ರಮದ ತಮ್ಮನೇ.

೩. ಶಿಷ್ಯ ಸಂಗ್ರಹ

ಉಡುಪಿಯಲ್ಲಿ ಕೃಷ್ಣಪ್ರತಿಷ್ಠೆಯನ್ನು ಮುಗಿಸಿಕೊಂಡು ಆಚಾರ್ಯರು ಮತ್ತೆ ಬದರಿಕಾಶ್ರಮಕ್ಕೆ ತೆರಳಿದರು. ಈ ಯಾತ್ರೆಯ ವಿವರಗಳು ದೊರೆಯುವುದಿಲ್ಲ. ಇವರು ಬದರಿಯಿಂದ ಹಿಂದಿರುಗಿ

ಉಡುಪಿಗೆ ಬಂದನಂತರ ಇವರ ಶಿಷ್ಯನೊಬ್ಬನು ಅವರ ಬಗ್ಗೆ ಕಾವ್ಯವೊಂದನ್ನು ರಚಿಸಿದನಂತೆ. ಅದರಲ್ಲಿ ಬರುವ ವಿವರಗಳಲ್ಲಿ ಕೆಲವನ್ನು ನಾರಾಯಣ ಪಂಡಿತಾಚಾರ್ಯರು ಉಲ್ಲೇಖಿಸಿದ್ದಾರೆ (ಸರ್ಗ ೧೦). ಈ ಕಾವ್ಯವೇನೋ ಇಂದು ಉಪಲಬ್ಧವಿಲ್ಲ. ಉಡುಪಿಯ ಪರಿಸರ ದಲ್ಲಿಯೇ ಆಚಾರ್ಯರು ಪದ್ಮ (ತೀರ್ಥ?) ಮತ್ತು ಪುಂಡರೀಕಪುರಿ ಎಂಬ ಇಬ್ಬರು ಅದ್ವೈತಿಗಳನ್ನು ವಾದದಲ್ಲಿ ಗೆದ್ದರು ; ಇವರ ಗ್ರಂಥಭಂಡಾರವನ್ನು ಪದ್ಮ (–ತೀರ್ಥ)ನು ಕದ್ದನು. ಅದನ್ನು ಊರ ಜನರು ಆಚಾರ್ಯರಿಗೆ ಕಾವುಮಠದಲ್ಲಿ ಸಮರ್ಪಿಸಿದರು. ಈ ಕಾವು ಮಠ (ಏಕವಾಟ)ದ ಪೇಜತ್ತಾಯ ಶಂಕರನೆಂಬ ಬ್ರಾಹ್ಮಣನು ಆಚಾರ್ಯರಲ್ಲಿ ಶಿಷ್ಯವೃತ್ತಿ ವಹಿಸಿದ್ದನು ; ಇವನು ತ್ರಿವಿಕ್ರಮ ಪಂಡಿತಾಚಾರ್ಯರ ಸೋದರನೆಂದು ಹೇಳುತ್ತಾರೆ. ಆಚಾರ್ಯರು ಕಾವು ಮಠದಿಂದ ಹೊರಟು ಕುಂಬಳೆಯ ರಾಜ ಜಯಸಿಂಹನನ್ನು ಭೇಟಿಮಾಡಿದರು. ಭೇಟಿ ಮಾಡಿದ ಸ್ಥಳ ಮದನೇಶ್ವರ (ಮಧೂರು). ಇದು ಕಾಸರಗೋಡಿಗೆ ಸುಮಾರು ನಾಲ್ಕು ಮೈಲಿ ದೂರದಲ್ಲಿದೆ. ಇಲ್ಲಿನ ಪ್ರಧಾನದೇವರು ಅನಂತೇಶ್ವರ, ಮದನಂತೇಶ್ವರನೆಂದೂ ಕರೆಯುವ ವಾಡಿಕೆಯಿದೆ. 'ಮದೂರು ಮದನೇಶ್ವರ, ಪೆರಡಾಲ ಉದನೇಶ್ವರ' ಎಂದು ಮಾಯಪಾಡಿ ಅರಸರ ಮೊದಲನೆಯ ಮತ್ತು ಎರಡನೆಯ ಪಟ್ಟಿಗಳನ್ನು ನಿರ್ದೇಶಿಸುತ್ತಾರೆ. ಕುಂಬಳೆ ಅರಸರ ಪ್ರಶಸ್ತಿಯಲ್ಲಿ ''ಶ್ರೀಮದನೇಶ್ವರ ಪಾದ ಪದ್ಮಾರಾಧಕ ಶ್ರೀ ವೀರ ಪ್ರತಾಪ ಕುಂಬಳೆ ಧರ್ಮಸಿಂಹಾಸನದ ಕವಿಸಿಂಹ ಅರಸರು'' ಎಂಬ ಒಕ್ಕಣಿಕೆ ಕಾಣುತ್ತದೆ.

ಮಧ್ವಾಚಾರ್ಯರು ಜಯಸಿಂಹನೆಂಬ ಅರಸನನ್ನು ಸಂಧಿಸಿದ್ದು ಕುಂಬಳೆ ಸೀಮೆಯಲ್ಲಿಯೇ ಎಂಬುದು ಸ್ಪಷ್ಟವಾಗಿದೆ. ಆದರೆ ಈ

ಜಯಸಿಂಹನು ಯಾರು ? ಕ್ವಿಲಾನ್ ನಗರದಲ್ಲಿ ಆಳುತ್ತಿದ್ದ ರವಿವರ್ಮ-ಕುಲಶೇಖರ ಪೆರುಮಾಳ್ ಎಂಬ ಕೇರಳ ರಾಜನೆಂದು ಸಿ. ಎಂ. ಪದ್ಮನಾಭಾಚಾರ್ಯರು ನಿರ್ದೇಶಿಸಿದ್ದರು. ಆದರೆ ಇವನು ತುಳುನಾಡಿನ ರಾಜನೇ ಎಂಬುದು ಈಗ ನಿರ್ವಿವಾದವಾಗಿದೆ. ಬನವಸೆಯ ಕದಂಬವಂಶದ ಮಯೂರವರ್ಮನ ಸಂತತಿಯವರಾದ ಈ ಕುಂಬಳೆ ಅರಸರಲ್ಲಿ ಜಯಸಿಂಹನೆಂಬ ಅರಸು ಪ್ರಸಿದ್ಧನಾಗಿದ್ದನು ; ಇವನಿಗೆ 'ಕವಿಸಿಂಹ'ನೆಂಬ ಹೆಸರೂ ಇದ್ದಿತು. ಕುಂಬಳೆಗೆ ಆರು ಮೈಲು ದೂರದಲ್ಲಿರುವ ಬೇಳಗ್ರಾಮದ ಕುಮಾರಮಂಗಲದಲ್ಲಿ ಬಾಲಸುಬ್ರಹ್ಮಣ್ಯನನ್ನು ಪ್ರತಿಷ್ಠೆ ಮಾಡಿಸಿದನು ; ಪಾಂಡ್ಯ ರಾಜನನ್ನೂ ಇವನು ಸೆಣೆಸಿ ಸೋಲಿಸಿದ್ದನು. ಇವನ ನಂತರ ಬಂದವರಲ್ಲಿ ರಾಮಂತರಸು, ಬೋಳದೇಶಿಂಗರಾಯ, ಪ್ರೌಢರಾಯ, ವೀರನರಸಿಂಹ ಮುಂತಾದವರ ಉಲ್ಲೇಖವಿದೆ ; ಇದೇ ಪೀಳಿಗೆಯಲ್ಲಿ ಬಂದ ಇಮ್ಮಡಿ ಜಯಸಿಂಹನೇ ಮಧ್ವಾಚಾರ್ಯರನ್ನು ಸಂದರ್ಶಿಸಿದ ರಾಜ. ಈ ಅರಸೊತ್ತಿಗೆಯು ಇಂದು ಮಾಯಪ್ಪಾಡಿ ಮನೆತನದಲ್ಲಿ ಉಳಿದಿದೆ. ಇವರು ಇಂದಿಗೂ ಸ್ಮಾರ್ತಬಾಗವತ ಸಂಪ್ರದಾಯವನ್ನು ಅನುಸರಿಸುತ್ತಾರೆ ; ಮಧೂರ ಮದನೇಶ್ವರನೇ ಇವರ ನಿತ್ಯಾರ್ಚನೆಯ ದೇವರು. ಮಧ್ವವಿಜಯದಲ್ಲಿಯೂ ಜಯಸಿಂಹನ ರಾಜ್ಯವನ್ನು 'ಮದನೇಶ್ವರವಲ್ಲಭ ಪ್ರದೇಶ'ವೆಂದೇ ನಿರ್ದೇಶಿಸಿದ್ದಾರೆ (೧೩, ೨೧). ಇವನು ಆಚಾರ್ಯರನ್ನು ಆದರಿಸಿ, ಗೌರವಿಸಿದನೆಂದು ಮಧ್ವವಿಜಯದಲ್ಲಿ ಬರುವ ವಿವರ ; ಮಧ್ವಾಚಾರ್ಯರ ಸಂಪ್ರದಾಯವನ್ನಾಗಲೀ, ಧರ್ಮವಿಶೇಷಗಳನ್ನಾಗಲೀ ಈ ಅರಸರು ತಮ್ಮ ಪದ್ಧತಿಗಳಲ್ಲಿ, ಪ್ರಶಸ್ತಿಗಳಲ್ಲಿ, ವ್ಯವಹಾರದಲ್ಲಿ ಉಳಿಸಿಕೊಂಡಿಲ್ಲವಾದರೂ ಕಣ್ವಪುರದ ಗೋಪಾಲಕೃಷ್ಣನನ್ನು ತಮ್ಮ ಕುಲದೈವವೆಂದು ಇವರು ಗ್ರಹಿಸಿದ್ದಾರೆ. ಇದು ಮಧ್ವಾಚಾರ್ಯರ ಪ್ರಭಾವದ ಫಲ ಇರಬಹುದು.

ಈ ಸಮಯದಲ್ಲಿಯೇ ಇದೇ ಪ್ರದೇಶದಲ್ಲಿ ಆಚಾರ್ಯರು ಸಂಧಿಸಿದ ಇನ್ನೊಬ್ಬ ಪ್ರಸಿದ್ಧ ವ್ಯಕ್ತಿಯೆಂದರೆ ಪೇಜತ್ತಾಯವಂಶದ (ಲಿಕುಚಾನ್ವಯ) ತ್ರಿವಿಕ್ರಮ ಪಂಡಿತಾಚಾರ್ಯರು. ಇವರು ಸುಬ್ರಹ್ಮಣ್ಯ ಪಂಡಿತರ ಮಗನೆಂದು ತಿಳಿದು ಬರುತ್ತದೆ ; ಮೊದಲಿಗೆ ಅದ್ವೈತಮತವನ್ನು ನಂಬಿದ್ದವರು. ಕಾವು (ಏಕವಾಟ) ಎಂಬಲ್ಲಿ (ಕುಂಬಳೆ ಯಿಂದ ಮೂರು ಮೈಲಿ ದೂರ, ಮಧೂರಿನಿಂದ ಐದು ಮೈಲಿ) ಇವರ ಮಠವೊಂದು ಇದ್ದಿತು. ಈ ಸ್ಥಳದಲ್ಲಿ ಪಾರ್ಥಸಾರಥಿ ಎನಿಸಿಕೊಳ್ಳುವ ಕೃಷ್ಣನ ವಿಗ್ರಹವಿದೆ. ಇದೂ ಕಣ್ವಪುರದ ಗೋಪಾಲ ಕೃಷ್ಣನಂತೆಯೇ, ಉಡುಪಿಯ ಕೃಷ್ಣನಂತೆಯೇ ಇದೆ. ಇಲ್ಲಿಗೆ ಆಚಾರ್ಯರು ಬಂದು ಈ ಮಠದಲ್ಲಿಯೇ ತಂಗಿದ್ದರು. ಲಿಕುಚಾನ್ವಯದ, ಆಂಗಿರಸ ಗೋತ್ರದ ತ್ರಿವಿಕ್ರಮ ಪಂಡಿತರು ಸುಪ್ರಸಿದ್ಧ ವಿದ್ವಾಂಸರಾಗಿದ್ದರು ; ಸರಸ ಕವಿ ಯಾಗಿದ್ದು 'ಉಷಾಹರಣ'ವೆಂಬ ಒಂಬತ್ತು ಸರ್ಗಗಳ ಕಾವ್ಯವೊಂದನ್ನೂ ರಚಿಸಿದ್ದರು. ಭಾಟ್ಟ ಸಂಪ್ರದಾಯದ ಭಾನುಪಂಡಿತ ಮುಂತಾದವರನ್ನು ವಾದದಲ್ಲಿ ಗೆದ್ದಿದ್ದರು.

ಇವರು ಆಚಾರ್ಯರನ್ನು ಮೊಟ್ಟಮೊದಲಿಗೆ ಸಂಧಿಸಿದ್ದು ವಿಷ್ಣುಮಂಗಲವೆಂಬ ಹಳ್ಳಿಯಲ್ಲಿ. ಜಯಸಿಂಹರಾಜನಿಂದ ಆಚಾರ್ಯರು ಸತ್ಕರಿಸಲ್ಪಟ್ಟು ಇಲ್ಲಿ ತಂಗಿದ್ದರು. ಇದು ಕೂಡಲು (ಕಾಸರಗೋಡಿನಿಂದ ಎರಡು ಮೈಲಿ ದೂರ) ಎಂಬ ಗ್ರಾಮಕ್ಕೆ ಸೇರಿದ್ದ ಹಳ್ಳಿಯಾಗಿದ್ದಿತು. ಇಲ್ಲಿ ಮಹಾವಿಷ್ಣುವಿನ ಗುಡಿ, ಚಕ್ರತೀರ್ಥವೆಂಬ ಕೆರೆ ಇವೆ. ಹಿಂದಿನ ಗ್ರಾಮದೇವತೆ ಮಹಾಲಿಂಗೇಶ್ವರ. ಅಂತೂ ಆಚಾರ್ಯರು ಇಲ್ಲಿ ತಂಗಿದ್ದಾಗಲೇ ತ್ರಿವಿಕ್ರಮ ಪಂಡಿತಾಚಾರ್ಯರು ಅವರೊಡನೆ ಹದಿನೈದು ದಿನಗಳ ಕಾಲ ('ಸಪ್ತಾಷ್ಟಾನಿ ದಿನಾನಿ') ವಾದಮಾಡಿ ಕಡೆಗೆ

ಸೋತು ಅವರ ಶಿಷ್ಯರಾದರು. ಇದು ಮಧ್ವಾಚಾರ್ಯರು ಸಾಧಿಸಿದ ಮಹಾ ವಿಜಯ. ಇದರಿಂದ ಅವರ ಯಶಸ್ಸು ಎಲ್ಲೆಡೆಗಳಲ್ಲೂ ಹರಡಿತು. ಅಲ್ಲಿನ ಮಠದ ದಕ್ಷಿಣ ಪಾರ್ಶ್ವದಲ್ಲಿ ವಾದ ನಡೆದ ಸ್ಥಳವನ್ನು ಇಂದಿಗೂ ನಿರ್ದೇಶಿಸುತ್ತಾರೆ ; ಅಲ್ಲಿ ಒಂದು ವಿಜಯಸ್ತಂಭವನ್ನೂ ನೆಟ್ಟಿದ್ದಾರೆ. ವಾದವಾದನಂತರ ತ್ರಿವಿಕ್ರಮ ಪಂಡಿತಾಚಾರ್ಯರು ಮಧ್ವಾಚಾರ್ಯರ ಶಿಷ್ಯರಾಗಿ ದ್ವೈತಮತದ ಪ್ರಚಾರಕ್ಕೆ ಸಿದ್ಧರಾದರು. ಬ್ರಹ್ಮಸೂತ್ರ ಭಾಷ್ಯಕ್ಕೆ 'ತತ್ತ್ವಪ್ರದೀಪ'ವೆಂಬ ಟೀಕೆಯನ್ನು ಬರೆದರು. ಮಧ್ವಾಚಾರ್ಯರು ಇವರ ನಿತ್ಯಾರ್ಚನೆಗೆಂದು ಕೊಟ್ಟ ಲಕ್ಷ್ಮೀನಾರಾಯಣ ವಿಗ್ರಹವನ್ನು ಆ ಮಠದಲ್ಲಿ ಇಂದಿಗೂ ಕಾಣಬಹುದು. ಮಠದ ಸುತ್ತಲೂ ಇರುವ ಪ್ರದೇಶಕ್ಕೆ 'ವಾರಂಬಳ್ಳಿ ಬಯಲು' ಎಂದು ಹೆಸರು. ಕಡೆಗಾಲದಲ್ಲಿ ಇವರು ಸಂನ್ಯಾಸಿಗಳಾದಂತೆ ಕಾಣುತ್ತದೆ. ಇಲ್ಲಿ ಇವರ ಬೃಂದಾವನವನ್ನು ತೋರಿಸುತ್ತಾರೆ.

ಈ ವೇಳೆಗಾಗಲೇ ಆಚಾರ್ಯರು ಬ್ರಹ್ಮಸೂತ್ರಭಾಷ್ಯ, ದಶೋಪನಿಷದ್ಭಾಷ್ಯ, ಭಗವದ್ಗೀತಾಭಾಷ್ಯ, ತಾತ್ಪರ್ಯನಿರ್ಣಯ, ಭಾಗವತನಿರ್ಣಯ, ತಂತ್ರಸಾರ, ಕಥಾಲಕ್ಷಣ, ಪ್ರಮಾಣಲಕ್ಷಣ, ತತ್ತ್ವನಿರ್ಣಯ, ತತ್ತ್ವೋದ್ಯೋತ ಮುಂತಾದ ಪ್ರಕರಣಗಳು, ಅಣುಭಾಷ್ಯ, ಯಮಕಭಾರತ ಇಷ್ಟನ್ನು ರಚಿಸಿದ್ದರು. ತ್ರಿವಿಕ್ರಮ ಪಂಡಿತರ ಬಯಕೆಯಂತೆ ಅನುವ್ಯಾಖ್ಯಾನವನ್ನೂ ನ್ಯಾಯವಿವರಣವನ್ನೂ ಸಿದ್ಧಪಡಿಸಿದರು.

ಅದೇ ಸಮಯದಲ್ಲಿ ಅವರ ತಂದೆತಾಯಿಯರು ತೀರಿಕೊಂಡರು. ಅವರ ಪೂರ್ವಾಶ್ರಮದ ತಮ್ಮ ಬ್ರಹ್ಮಚಾರಿಯಾಗಿಯೇ ಇದ್ದನು. ಮನೆಯಲ್ಲಿ ಬಡತನ ಮೂಡಿ ತುಂಬ ತೊಂದರೆಯಾಗಿದ್ದಿತು. ಈ ಕಾರಣದಿಂದ ತಮ್ಮನಿಗೂ ವಿರಕ್ತಿ ಒದಗಿ ಆಚಾರ್ಯರಲ್ಲಿ

ಯತಿದೀಕ್ಷೆಯನ್ನು ಬೇಡಿದನು. ಆದರೆ ಅದು ಚಾತುರ್ಮಾಸ್ಯ ವಾಗಿದ್ದುದರಿಂದ ಆಗ ಸಂನ್ಯಾಸವನ್ನು ಕೊಡದೆ ಚಾತುರ್ಮಾಸ್ಯ ಕಳೆದನಂತರ ಕೂಡಲು ಗ್ರಾಮವನ್ನು ಬಿಟ್ಟು, ತಮ್ಮ ತೌರೂರಾದ ಪಾಜಕಕ್ಷೇತ್ರ (ಬೆಳ್ಳೆ)ಕ್ಕೆ ಬಂದು, ತಮ್ಮನಿಗೆ ಯತ್ಯಾಶ್ರಮದೀಕ್ಷೆಯನ್ನು ಕೊಟ್ಟು ವಿಷ್ಣುತೀರ್ಥರೆಂದು ಕರೆದರು. ಅವರ ಪೂರ್ವಾಶ್ರಮದ ಹೆಸರು ತಿಳಿದು ಬಂದಿಲ್ಲ, ಅವರಿಗೆ ಕಷ್ಟ ಕಾರ್ಪಣ್ಯ ಒದಗಿದ ಕಾರಣವೂ ತಿಳಿಯುವುದಿಲ್ಲ ; ಮಧ್ವವಿಜಯವು 'ದುರದೃಷ್ಟದಿಂದ' ('ವಿಧಿನಾ') ಎಂದಷ್ಟೇ ಹೇಳುತ್ತದೆ. ಸಂನ್ಯಾಸಿಗಳಾದ ಮೇಲೆ ಇವರು ತಪಶ್ಚರ್ಯೆ ಯಲ್ಲಿಯೇ ಬಾಳನ್ನು ಕಳೆದರು ; ಕಡೆಗಾಲದಲ್ಲಿ ಸುಬ್ರಹ್ಮಣ್ಯ (ಕುಮಾರಾದ್ರಿ) ಎಂಬ ಬೆಟ್ಟದ ಮೇಲೆ ಏಕಾಂತವಾಸ, ಕಠಿಣ ತಪಶ್ಚರ್ಯೆಗಳನ್ನು ಕೈಕೊಂಡರು. ಇವರಿಗೆ ಅನಿರುದ್ಧತೀರ್ಥ, ವ್ಯಾಸತೀರ್ಥ ಎಂಬಿಬ್ಬರು ಶಿಷ್ಯರಿದ್ದರು.

ಆಚಾರ್ಯರು ಎರಡನೆಯ ಬಾರಿ ಬದರೀಯಾತ್ರೆಯನ್ನು ಮುಗಿಸಿ ಉಡುಪಿಗೆ ಹಿಂದಿರುಗುವಾಗ ಗೋದಾವರೀ ತೀರದಲ್ಲಿ ಇವರ ಶಿಷ್ಯರಾದ ಪದ್ಮನಾಭತೀರ್ಥರೆಂಬುವರು ಶ್ರುತಿಯಿಂದ, ಮತಿಯಿಂದ, ಭಕ್ತಿಯಿಂದ, ವಿರಕ್ತಿಯಿಂದ, ನಿತ್ಯಸೇವೆಯಿಂದ ಆಚಾರ್ಯರನ್ನು ಪ್ರೀತಿ ಬಡಿಸಿ ವಿದ್ಯೆಯನ್ನು ಗಳಿಸಿಕೊಂಡರು. ಆಚಾರ್ಯರ 'ಅನುವ್ಯಾಖ್ಯಾನ'ಕ್ಕೆ ಇವರು 'ಸನ್ನ್ಯಾಯ ರತ್ನಾವಳಿ'ಯೆಂಬ ಟೀಕೆಯನ್ನು ಸಿದ್ಧಪಡಿಸಿದ್ದಾರೆ. ಇವರ ಪೂರ್ವಾಶ್ರಮದ ಹೆಸರು ಶೋಭನಭಟ್ಟರೆಂದು ಹೇಳುತ್ತಾರೆ ; ಆಚಾರ್ಯರ ತತ್ತ್ವಪ್ರಚಾರ ಕಾರ್ಯದಲ್ಲಿ ಇವರು ತುಂಬ ನೆರವಾದರು ; ಇವರು 'ವಾದಿಸಿಂಹ', 'ವಿದ್ವತ್ತಿಮಿಂಗಿಲ', 'ಮತ್ತದುರ್ವಾದಿಮಾತಂಗ ಪಂಚಾಸ್ಯ', 'ವಾದಸಾರವಿತ್'. ಇವರನ್ನು 'ಕರ್ಣಾಟಕಪೂರ್ವಸಜ್ಜನ ಗುರು' ಎಂದು ಸಂಪ್ರದಾಯಪದ್ಧತಿ ಬಣ್ಣಿಸುತ್ತಿದೆ.

ವಿಷ್ಣುತೀರ್ಥ, ಪದ್ಮನಾಭತೀರ್ಥರಲ್ಲದೆ ಆಚಾರ್ಯರ ಶಿಷ್ಯರಲ್ಲಿ ಹೃಷೀಕೇಶ ತೀರ್ಥ, ನೃಸಿಂಹತೀರ್ಥ, ಜನಾರ್ದನತೀರ್ಥ, ಉಪೇಂದ್ರ ತೀರ್ಥ, ವಾಮನತೀರ್ಥ, ರಾಮತೀರ್ಥ, ಅಧೋಕ್ಷಜತೀರ್ಥ ಇವರ ಹೆಸರುಗಳನ್ನೂ ಮಧ್ವವಿಜಯ ಉಲ್ಲೇಖಿಸಿದೆ. ಈ ಹೆಸರುಗಳು 'ಸಂಪ್ರದಾಯ ಪದ್ಧತಿ'ಯಲ್ಲಿಯೂ ಬರುತ್ತವೆ. ಹೃಷೀಕೇಶತೀರ್ಥರು ಫಲಿಮಾರುಮಠಕ್ಕೆ ಮೂಲಪುರುಷರೆಂದೂ, ನೃಸಿಂಹತೀರ್ಥರು ಅದಮಾರು ಮಠಕ್ಕೆ, ಜನಾರ್ದನತೀರ್ಥರು ಕೃಷ್ಣಾಪುರ ಮಠಕ್ಕೆ, ಉಪೇಂದ್ರತೀರ್ಥರು ಪುತ್ತಿಗೆ ಮಠಕ್ಕೆ, ವಾಮನತೀರ್ಥರು ಶಿರೂರು ಮಠಕ್ಕೆ, ರಾಮತೀರ್ಥರು ಕಾಣಿಯೂರು ಮಠಕ್ಕೆ, ಅಧೋಕ್ಷಜ ತೀರ್ಥರು ಪೇಜಾವರ ಮಠಕ್ಕೆ, ವಿಷ್ಣುತೀರ್ಥರು ಸೋದೆ ಮಠಕ್ಕೆ ಮೂಲಪುರುಷರೆಂದೂ ಇವರೆಲ್ಲರನ್ನೂ ಕಲೆಸಿ ಅಷ್ಟಮಠವ್ಯವಸ್ಥೆಯನ್ನು ಆಚಾರ್ಯರು ಮಾಡಿದರೆಂದೂ ನಂಬಿಕೆಯಿದೆ. ಆದರೆ ಈ ವ್ಯವಸ್ಥೆಯ ಪ್ರಸ್ತಾಪ ಮಧ್ವವಿಜಯದಲ್ಲಾಗಲೀ ಸಂಪ್ರದಾಯ ಪದ್ಧತಿಯಲ್ಲಾಗಲೀ ಬರುವುದಿಲ್ಲ. ಈ ಎಂಟು ಮಂದಿ ಯತಿಗಳು ಕೃಷ್ಣಾರ್ಚನೆಗಾಗಿಯೇ ನಿಯಮಿತರಾದವರೆಂಬ ಸೂಚನೆಯು ಎಲ್ಲಿಯೂ ಬರುವದಿಲ್ಲ. ಇವರ ವಿಚಾರ ಹೇಳುತ್ತ ನಾರಾಯಣ ಪಂಡಿತಾಚಾರ್ಯರು ಅವರ ವಿದ್ವತ್ತನ್ನು ವಾದವಿಧಾನವನ್ನು ಹೇಳುತ್ತಾರಷ್ಟೆ ; ಉಡುಪಿ ಕೃಷ್ಣನ ಗುಡಿಯ ಸುದ್ದಿಯನ್ನೇ ಎತ್ತುವುದಿಲ್ಲ.

ಈ ಅಷ್ಟಮಠಗಳ ವ್ಯವಸ್ಥೆ, ಕೃಷ್ಣಮಠದ ಪ್ರತಿಷ್ಠೆ, ಪರ್ಯಾಯದ ಕ್ರಮ ಇವು ಆಚಾರ್ಯರ ಕಾಲದಲ್ಲಿಯೇ ಸಿದ್ಧವಾದುವೇ ಎಂಬುದು ಸಂಶಯಗ್ರಸ್ತವಾದ ವಿಚಾರ. ಇದನ್ನು ಸಮರ್ಥಿಸಲು ಮಧ್ವವಿಜಯ ದಲ್ಲಂತೂ ಯಾವ ವಿವರವೂ ಇರದು. ಕೃಷ್ಣಾರ್ಚಕ ಯತಿಗಳ ಹಿರಿಮೆಯನ್ನೇ ಹೇಳಲು ಹೊರಟ ''ಸಹ್ಯಾದ್ರಿ ಖಂಡದ ಇಂದುಕ್ಷೇತ್ರ

(ಉಡುಪಿ) ಮಹಾತ್ಮೆ''ಯಲ್ಲಿಯೂ ಅಷ್ಟಮಠವ್ಯವಸ್ಥೆಯ ಪ್ರಸ್ತಾಪವಿಲ್ಲ. ಸಂಪ್ರದಾಯ ಪದ್ಧತಿಯಲ್ಲಿ ''ತೇಷಾಂ ಮಂತ್ರೋಪದೇಶವ್ರತ ನಿಯಮ ಸುರಾರ್ಚಾದಿಕೇ ಸಂಪ್ರದಾಯಂ । ಯುಗ್ಮೇ ಯುಗ್ಮೇ ಪ್ರಭಿನ್ನಂ ಕುರುತ ಇತಿ ಹೃಷೀಕೇಶತೀರ್ಥಾದಿಕೇಷು ॥'' ಎಂಬ ಮಾತೇನೋ ಬರುತ್ತದೆ. ಆದರೆ ಇದರಿಂದ ಮಠವ್ಯವಸ್ಥೆಯಾಗಲೀ, ಪರ್ಯಾಯಕ್ರಮವಾಗಲೀ ಸಿದ್ಧವಾಗುವುದಿಲ್ಲ. ಕೃಷ್ಣನ ಗುಡಿಯು ಮೈದಳೆದ ಮೇಲೂ ಆಚಾರ್ಯರು ಉಡುಪಿಯಲ್ಲೇ ನಿಂತು ಕೃಷ್ಣನ ಪೂಜಾದಿಗಳನ್ನು ತಾವೇ ನೋಡಿಕೊಳ್ಳುತ್ತಿದ್ದರು ಎನ್ನಲೂ ಆಧಾರವಿಲ್ಲ. ಅವರ ಬಾಳುವೆಯಲ್ಲಿ ಈ ಕೃಷ್ಣ ಪ್ರತಿಷ್ಠೆಯು ಅಷ್ಟು ಮುಖ್ಯವಾದ ವಿವರ ವೆಂದು ಅವರೂ ತಿಳಿದಿರಲಿಲ್ಲ, ಮಧ್ವವಿಜಯಕಾರರೂ ತಿಳಿದಿರಲಿಲ್ಲ. ಪ್ರಾಯಶಃ ಇದರ ಪ್ರಾಶಸ್ತ್ಯವು ವಾದಿರಾಜಸ್ವಾಮಿಗಳ ಕಾಲದಲ್ಲಿ ಒದಗಿದ್ದಿರಬಹುದು. ಮಧ್ವಾಚಾರ್ಯರು ಏರ್ಪಡಿಸಿದ್ದ ಎರಡೆರಡು ತಿಂಗಳ ಪರ್ಯಾಯ ಕ್ರಮವನ್ನು ಇವರು ಪುನರ್ವ್ಯವಸ್ಥಮಾಡಿ ಎರಡು ವರ್ಷಗಳ ಅವಧಿಯನ್ನು ಏರ್ಪಡಿಸಿದರೆಂದು ನಂಬಿಕೆಯೂ ಇದೆಯಷ್ಟೆ. ಇವರೇ ಪರ್ಯಾಯದ ವ್ಯವಸ್ಥೆಯನ್ನು ಮಾಡಿದವರು ಎನ್ನಬಹುದೋ ಎಂದು ಸಂಶಯ ಒದಗುತ್ತದೆ. ಅಲ್ಲದೆ, ವಾದಿರಾಜರೇ ಎಂಟು ಮಠದ ಯತಿಗಳಿಗೆ ತಾವೇ ಪ್ರತ್ಯೇಕವಾಗಿ ಉಪಾಸ್ಯಮೂರ್ತಿಗಳನ್ನು ಕೊಟ್ಟುದಾಗಿಯೂ ನಂಬಿಕೆಯಿದೆ. ಮಧ್ವಾಚಾರ್ಯರು ಮೊದಲೇ ಮಠವೊಂದಕ್ಕೂ ವಿಶಿಷ್ಟವಾದ ಪಟ್ಟದ ದೇವರನ್ನು ನಿರ್ದಿಷ್ಟಮಾಡಿ ತಮ್ಮ ಶಿಷ್ಯರಿಗೆ ಕೊಟ್ಟಿದ್ದರೆ, ವಾದಿರಾಜತೀರ್ಥರು ಮತ್ತೆ ಕೊಡುವ ಅಗತ್ಯವೇನಿದ್ದಿತು ? ಅಥವಾ ಹಾಗೆ ಹಿರಿಯರ ಕೊಡುಗೆಯನ್ನು ಮೀರಿ ನಿಲ್ಲುವಂತೆ ತಮ್ಮ ಕೊಡುಗೆಯನ್ನು ಕೊಡುವುದು ಉಚಿತವೋ ? ಪುನರ್ವ್ಯವಸ್ಥೆಯ ವ್ಯಾಜವೇ ಇರಲಿ, ಸರ್ವಜ್ಞರೆಂದು ಪ್ರಸಿದ್ಧರಾದ ಆಚಾರ್ಯರ

ಪರ್ಯಾಯ ಪದ್ಧತಿಯನ್ನು ವಾದಿರಾಜರು ಮಾರ್ಪಡಿಸುವ ಸಾಹಸವನ್ನು ಮಾಡಿಯಾರೆ ? ಹೀಗೆ ಹಲವಾರು ಸಮಸ್ಯೆಗಳು ಕಾಡುತ್ತವೆ. ಪರ್ಯಾಯ ಪದ್ಧತಿಗೆ ವಾದಿರಾಜರೇ ಪ್ರವರ್ತಕರು ಎಂದರೆ ತಪ್ಪಾಗದು ಎನಿಸುತ್ತದೆ. ಸಿದ್ಧಾಂತವೆಂದು ಏನನ್ನೂ ಹೇಳುವಹಾಗಿಲ್ಲ.

ಉಡುಪಿ ಮಠದಲ್ಲಿ ಇರುವ ಶಿಲಾಶಾಸನವೊಂದರಲ್ಲಿ (AR No. 110 of 1901) ವಾದಿರಾಜಸ್ವಾಮಿಗಳ ಕರಕಮಲಸಂಜಾತರಾದ ವೇದವೇದ್ಯತೀರ್ಥರು ಮಠಗೆಲಸದ ಗುಡಿಯನ್ನು ಶಿಲಾಮಯವನ್ನಾಗಿ ಮಾಡಿಸಿದ ಪ್ರಸ್ತಾಪವಿದೆ. ಆಗ ಕೃಷ್ಣನ ಮೂರ್ತಿಯನ್ನು ಹೊರ ಮಂಟಪಕ್ಕೆ ಬಿಜಯಮಾಡಿಸಿ ಅಲ್ಲಿ ಪೂಜಾದಿಗಳನ್ನು ನಡೆಸುತ್ತಿದ್ದರೆಂದು ಶಾಸನ ಹೇಳುತ್ತದೆ. ಶಕ ೧೩೫೯ (ಎಂದರೆ ಕ್ರಿಸ್ತಾಬ್ಧ ೧೪೩೭)ರ ಈ ಶಾಸನದಲ್ಲಿಯೇ ''ತಂಮ ಪೂಜಾಪರಿಯಾಯದಲ್ಲಿ'' ಎಂಬ ಪ್ರಯೋಗವು ಮೊಟ್ಟ ಮೊದಲಿಗೆ ಕಾಣುವುದು. ಅದಕ್ಕೆ ಐವತ್ತು ವರ್ಷಗಳಿಗೂ ಮುಂಚೆ ಸಿದ್ಧವಾದ ಒಂದು ಶಾಸನದಲ್ಲಿ ಶಿವಳ್ಳಿ ಗ್ರಾಮದ ಈ ದೇವಸ್ಥಾನದ ''ಆನ್ಯಮನ್ಯಂಗಳು ತಪ್ಪಿದಲ್ಲಿ, ಉಡುಪಿನ ಶ್ರೀಕೃಷ್ಣ ದೇವರ ಪ್ರತಿಮಾಭಲನೆವಾದ್ದಲ್ಲಿ ಶ್ರೀ ಕೃಷ್ಣದೇವರಿಗೆ ಕಟ್ಟಳೆಯುವರು ಆರಸಿಗೆ ಬಿಂನಾಹ ಮಾಡಿ''ದ ಪ್ರಸ್ತಾಪವಿದೆ. (AR No. 109 of 1901). ಬಾರಕೂರಿನ ಅರಸು ಅಣ್ಣಪ್ಪ ಒಡೆಯರಿಗೆ ಬಿನ್ನಹ ಮಾಡಿ ಕೊಂಡರು ಕೃಷ್ಣದೇವರ ಕಟ್ಟಳೆಯವರು, ಪರ್ಯಾಯ ಸ್ವಾಮಿಗಳಲ್ಲ ಎಂಬುದನ್ನು ಗಮನಿಸಬೇಕು. ಈ ಶಾಸನದಲ್ಲಿ ಕೃಷ್ಣನ ಗುಡಿಯನ್ನು ಮಠವೆಂದು ಕರೆದಿಲ್ಲ ; ಮೊದಲು ಹೇಳಿದ ವೇದವೇದ್ಯ ತೀರ್ಥರ ಶಾಸನದಲ್ಲಿ ''ಉಡುಪಿನ ಶ್ರೀ ಕೃಷ್ಣದೇವರ ಮಠಊ'' ಎಂದು ಒಕ್ಕಣೆ ಬರುತ್ತದೆ. ಹೀಗಿರುವುದರಿಂದ ವಾದಿರಾಜರ ಕಾಲಕ್ಕೆ ಮುಂಚೆ ಕೃಷ್ಣನ

ಗುಡಿಗೂ ಎಂಟು ಮಠಗಳಿಗೂ ಏನಾದರೂ ಸಂಬಂಧವಿದ್ದಿತೇ ಎಂಬ ಸಮಸ್ಯೆ ಒದಗುವುದು ಸಹಜ.

ಎಂಟು ಮಠಗಳ ಪ್ರವರ್ತಕರಾದ ತೌಳವ ಯತಿಗಳ ಉಲ್ಲೇಖವೇನೋ ಮಧ್ವವಿಜಯದಲ್ಲಿ ಉಂಟು. ಇವರಲ್ಲದೆ ಆಚಾರ್ಯರ ಇನ್ನೂ ಇತರ ಶಿಷ್ಯರಿದ್ದರು. ಆದರೆ ಇವರಲ್ಲಿ ಅತ್ಯಂತ ಪ್ರಸಿದ್ಧರಾದ ನರಹರಿತೀರ್ಥರ ಉಲ್ಲೇಖ ಮಧ್ವವಿಜಯದಲ್ಲಿ ಬರದೇ ಇರುವುದು ಸೋಜಿಗ. ತೆಲುಗು ದೇಶದ ಗಂಜಾಂಜಿಲ್ಲೆಯಲ್ಲಿನ ಶ್ರೀಕಾಕುಳಂ ಎಂಬ ಊರಿನವರು ಇವರು. ಇವರ ಪೂರ್ವಾಶ್ರಮದ ಹೆಸರು ಶ್ಯಾಮಶಾಸ್ತ್ರಿ (ಅಥವಾ ಸ್ವಾಮಿಶಾಸ್ತ್ರಿ, ಶುಭಶರ್ಮ) ಎಂದು ಹೇಳುತ್ತಾರೆ. ಪ್ರಾಯಶಃ ಇವರೂ ಪದ್ಮನಾಭತೀರ್ಥರ ಜೊತೆಯಲ್ಲಿಯೇ ಆಚಾರ್ಯರಿಂದ ದೀಕ್ಷೆ ಪಡೆದರು. ೧೨೬೪ ರಿಂದ ೧೨೯೩ರವರೆಗೆ ಕಳಿಂಗರಾಜನ ಪ್ರತಿನಿಧಿಯಾಗಿ ರಾಜ್ಯಭಾರವನ್ನು ನಿರ್ವಹಿಸಿದ ವಿಚಾರ ಮೊದಲೇ ಬಂದಿದೆ (ಪರಿಚ್ಛೇದ ೧, ಕಾಲನಿರ್ಣಯ). ಇವರು ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರೆಂದು ಶ್ರೀ ಕೂರ್ಮಶಾಸನ ಹೇಳುತ್ತದೆ. ಆಚಾರ್ಯರ ದಶಪ್ರಕರಣಗಳಿಗೆ ಇವರು ಟೀಕೆಗಳನ್ನು ಬರೆದಿದ್ದಾರೆ, ಗೀತಾಭಾಷ್ಯಕ್ಕೆ ಪ್ರಕಾಶಿಕೆಯೊಂದನ್ನೂ ಯಮಕ ಭಾರತಟೀಕೆಯನ್ನೂ ಸಿದ್ಧಪಡಿಸಿದ್ದಾರೆ. ಇಷ್ಟು ಮಾತ್ರವಲ್ಲ, ಇವರ ಅಧಿಕಾರದ ಅವಧಿ ಮುಗಿದಂದು ಆಚಾರ್ಯರ ಅಣತಿಯಂತೆ ಕಳಿಂಗ ದೇಶ (ಗಜಪತಿನಗರ) ಭಂಡಾರದಲ್ಲಿದ್ದ ಮೂಲ ಸೀತಾರಾಮರ ವಿಗ್ರಹಗಳನ್ನು ಆಚಾರ್ಯರಿಗೆ ತಂದುಕೊಟ್ಟರೆಂದೂ, ಆಚಾರ್ಯರು ಅವುಗಳನ್ನು ಎಂಬತ್ತು ದಿನಗಳವರೆಗೆ ಪೂಜಿಸಿ ತಮ್ಮ ಅವತಾರ ಸಮಾಪ್ತಿಯು ಸನ್ನಿಹಿತವಾಗಲು ಅದನ್ನು ತಮ್ಮ ಉತ್ತರಾಧಿಕಾರಿಗಳಾದ ಪದ್ಮನಾಭತೀರ್ಥರಿಗೆ ಕೊಟ್ಟರೆಂದೂ ಐತಿಹ್ಯವಿದೆ. ಈ ಮೂಲ

ಸೀತಾರಾಮರ ವಿಗ್ರಹಗಳ ವಿಚಾರ ಜಟಿಲವಾದುದು. ಇದರಿಂದಾಗಿ ಘಟ್ಟದ ಮೇಲೆ ಮಾಧ್ವ ಮಠಗಳ ನಡುವೆ ವಿಫುಲವಾದ ವೈಮನಸ್ಯ ಬೆಳೆದು ಬಂದಿದೆ. ಆಚಾರ್ಯರು ತೀರಿಕೊಂಡ ನಂತರ ೧೩೨೪ ರವರೆಗೂ ಪದ್ಮನಾಭತೀರ್ಥರು ಆಚಾರ್ಯರ ವ್ಯಾಖ್ಯಾನಸಿಂಹಾಸನವನ್ನು ಅಲಂಕರಿಸಿದ್ದರು ; ಅವರ ನಂತರ ನರಹರಿತೀರ್ಥರು ೧೩೩೩ ರವರೆಗೂ ಇದೇ ಸಿಂಹಾಸನವನ್ನು ಏರಿದ್ದರು.

ನರಹರಿತೀರ್ಥರ ನಂತರ ವ್ಯಾಖ್ಯಾನಸಿಂಹಾಸನವನ್ನೇರಿದ ಮಾಧವ ತೀರ್ಥರೂ ಆಚಾರ್ಯರ ಸಾಕ್ಷಾಚ್ಛಿಷ್ಯರೇ. ಇವರ ವಿಚಾರ ವಾಗಿ ವಿವರಗಳು ಉಪಲಬ್ಧವಿಲ್ಲ. ಇವರು ೧೩೫೦ ರವರೆಗೂ ಇದ್ದಂತೆ ತಿಳಿದುಬರುತ್ತದೆ. ಇವರ ನಂತರ ಬಂದವರು ಅಕ್ಷೋಭ್ಯತೀರ್ಥರು. ಇವರು ಜಮಖಂಡಿಯವರು. ವಿದ್ಯಾರಣ್ಯರ ಮತ್ತು ವೇದಾಂತದೇಶಿಕರ ಸಮಕಾಲಿಕರು ಎಂದು ಪ್ರತೀತಿಯಿದೆ. ಇವರ ಶಿಷ್ಯರೇ ಪ್ರಸಿದ್ಧರಾದ ಜಯತೀರ್ಥರು (ಟೀಕಾಚಾರ್ಯರು). ಇವರ ಪ್ರತಿಭೆ, ಪ್ರಭಾವಗಳಿಂದಾಗಿ ಮಾಧ್ವಮತವು ದೃಢವಾಯಿತು, ವಿಸ್ತೃತವಾಯಿತು. ಆಚಾರ್ಯರ ಅನು ವ್ಯಾಖ್ಯಾನಕ್ಕೆ ಟೀಕೆಯಾದ 'ಸುಧಾ' ಗ್ರಂಥವು ಇವರಿಂದಲೇ ರಚಿತವಾದದ್ದು.

೪. ತಿರೋಧಾನ

ಆಚಾರ್ಯರು ವಿಷ್ಣುಮಂಗಲದಿಂದ ಕಣ್ವತೀರ್ಥಕ್ಕೆ ಬಂದು ಅಲ್ಲಿ ತಾಂತ್ರ್ಯಮಠದಲ್ಲಿ ಬಿಡಾರಮಾಡಿದರು. ಕಣ್ವತೀರ್ಥವು ಉಡುಪಿಗೆ ೪೬ ಮೈಲಿ ದೂರದಲ್ಲಿ, ಮಂಜೇಶ್ವರದ ಬಳಿ ಇದೆ. ಇಲ್ಲಿ ಕಣ್ವಮಹರ್ಷಿಗಳು ತಪಶ್ಚರ್ಯೆಮಾಡಿದ್ದರೆಂದು ಪ್ರತೀತಿ. ಅವರಿಂದಲೇ ಇಲ್ಲಿ ಪ್ರತಿಷ್ಠಿತವಾದ ಗೋಪಾಲಕೃಷ್ಣನ ಬಾಲಮೂರ್ತಿಯು

ಪ್ರಸಿದ್ಧವಾದುದು. ಆಚಾರ್ಯರು ಇಲ್ಲಿ ಒಂದು ಚಾತುರ್ಮಾಸ್ಯವನ್ನು ಕಳೆದರಂತೆ. ಅಲ್ಲಿಂದ ಗಂಡವಾಟ (ಕೋಡಿಂಜಾಡಿ), ಪೂರ್ವವಾಟ (ಮೂಡೆಂಬಾಡಿ), ಸರಿದಂತರ (ಇಡುತದೆ), ಪಾರಂತಿಗ್ರಾಮ (ಕೇಟದೇಲ), ವೈದ್ಯನಾಥ (ಕೊಕ್ಕಡ), ಉಚ್ಚಭೂತಿ (ಉಜ್ಜೇರ್ಯೆ, ಉಜ್ರೆ) ಮುಂತಾದ ಸ್ಥಳಗಳಲ್ಲಿ ಪರ್ಯಟನಮಾಡಿ ಉಡುಪಿಗೆ ಹಿಂದಿರುಗಿದರು. ಮುಂದಿನ ವಿವರಗಳನ್ನು ಮಧ್ವವಿಜಯ ಹೇಳುವುದಿಲ್ಲ.

ಆಚಾರ್ಯರು ಎಂಭತ್ತು ವರ್ಷ ವಯಸ್ಸಿನವರಿದ್ದಾಗ ಅನಂತೇಶ್ವರ ಗುಡಿಯ ಎಡಬದಿಯಲ್ಲಿ ಕಟ್ಟೆಯಮೇಲೆ ಕುಳಿತು ಶಿಷ್ಯರಿಗೆ ಪ್ರವಚನಮಾಡುತ್ತ ಅದೃಶ್ಯರಾದರೆಂದು ನಂಬಿಕೆಯಿದೆ. ಈ ಸ್ಥಳದಲ್ಲಿ ಈಗ ಸಣ್ಣ ಗುಡಿಯೊಂದನ್ನು ಕಟ್ಟಿಸಿದ್ದಾರೆ. ಅದರೊಳಗಿನ ಕಟ್ಟೆಗೆ ಈಗಲೂ ವಿಶೇಷಸಂದರ್ಭಗಳಲ್ಲಿ ಪೂಜೆ ನಡೆಯುತ್ತದೆ. ಗುಡಿಯ ದ್ವಾರದ ಮೇಲೆ ವಾದಿರಾಜರು ಮಾಡಿಸಿಟ್ಟ ಮಧ್ವಾಚಾರ್ಯರ ಶಿಲಾಪ್ರತೀಕವಿದೆ. ಗುಡಿಯಲ್ಲೇ ಇರಿಸಲು ಅವರು ಈ ಮೂರ್ತಿಯನ್ನು ಮಾಡಿಸಿದರೆಂದೂ, ಆದರೆ ಸ್ವಪ್ನದಲ್ಲಿ ಅವರಿಗೆ ಆಚಾರ್ಯರು ಆ ಸ್ಥಳದಲ್ಲಿ ಸ್ವಯಂ ಸನ್ನಿಹಿತರಾಗಿರುವುದರಿಂದ ಶಿಲಾಮೂರ್ತಿಯ ಪ್ರತಿಷ್ಠೆ ಸಲ್ಲದೆಂದು ತಿಳಿಸಿದರೆಂದೂ, ಆಗ ಅದನ್ನು ದ್ವಾರದ ಮೇಲ್ಭಾಗದಲ್ಲಿ ಇರಿಸಿದರೆಂದೂ ಕಥೆಯಿದೆ. ವ್ಯಾಖ್ಯಾನ ಮುದ್ರೆಯಲ್ಲಿರುವ ಈ ಮೂರ್ತಿ ತುಂಬ ಓಜಸ್ಸಿನಿಂದ ಕೂಡಿದೆ, ಶಿಲ್ಪವೂ ಸುಂದರವಾಗಿದೆ.

ತಿರೋಧಾನವಾದುದು ಹೇಗೆ ಎಂಬುದು ಸ್ಪಷ್ಟವಾಗಿಲ್ಲ. ಮಧ್ವವಿಜಯದಲ್ಲಿ ಇದರ ಪ್ರಸ್ತಾಪವೇ ಇಲ್ಲ. ಸಂಪ್ರದಾಯ ಪದ್ಧತಿಯಲ್ಲಿ ''ಕ್ಷೇತ್ರತೋ ನಿರ್ಗತೋಽತೌ'' (ಕ್ಷೇತ್ರದಿಂದ ಅವರು ಹೊರಟುಬಿಟ್ಟರು) ಎಂಬದಷ್ಟೇ ಇದೆ. ಅಣುಮಧ್ವಚರಿತವು ಪಿಂಗಳ ಸಂವತ್ಸರದ

ಮಾಘಶುದ್ಧ ನವಮಿಯಂದು ಮಾನುಷದೃಷ್ಟಿಯನ್ನು ದಾಟಿ ಬದರಿಗೆ ಹೋದರು (ಬದರೀಂ ಯಯೌ) ಎಂದು ಹೇಳುತ್ತದೆ. ಇತಿಹಾಸ ಸಂಹಿತೆಯ ಸಹ್ಯಾದ್ರಿಖಂಡದಲ್ಲಿ ಬರುವ ಉಡುಪಿ ಕ್ಷೇತ್ರ ಮಾಹಾತ್ಮ್ಯವೂ ''ಅಂತರ್ಹಿತೋತ್ರತಾನ್ ಪಾತಿ ದೃಶ್ಯಃಸ ಬದರೀತಟೇ'' (ಉಡುಪಿಯಲ್ಲಿ ಮರೆಯಾಗಿ ಬದರಿಯಲ್ಲಿ ಕಾಣಿಸಿಕೊಂಡರು) ಎಂದು ವಿವರಿಸುತ್ತದೆ. (೨೦, ೨೭). ಅಂತೂ ಮಧ್ವಾಚಾರ್ಯರ ಬೃಂದಾವನ ಎಲ್ಲಿಯೂ ಇಲ್ಲ. ಅನಂತೇಶ್ವರ ಗುಡಿಯಲ್ಲೇ ಅವರು ತಿರೋಧಾನ ಹೊಂದಿದರು ಎನ್ನಬಹುದು.

ತಾವೇ ಕೃಷ್ಣನ ಪ್ರತಿಷ್ಠೆಮಾಡಿ, ಗುಡಿಯನ್ನು ಕಟ್ಟಿಸಿದ್ದರೂ ಅವರು ತಮ್ಮ ಪಾಠಪ್ರವಚನಗಳನ್ನೆಲ್ಲ ಅನಂತೇಶ್ವರನ ಸನ್ನಿಧಿಯಲ್ಲೇ ಮಾಡುತ್ತಿದ್ದರು ; ತಮ್ಮ ಕಡೆಗಾಲವನ್ನು ಕೂಡ ಅಲ್ಲಿಯೇ ಕಳೆದರು. ಇದು ಮತ್ತೆ ಸಮಸ್ಯೆಗಳಿಗ ಎಡೆಗೊಡುತ್ತದೆ ; ಅವರ ಕಾಲದಲ್ಲಿ ಕೃಷ್ಣನ ಗುಡಿ ಇದ್ದಿರಲಾರದು ಎಂಬ ಶಂಕೆಗೂ ಆಸ್ಪದವಿದೆ. ಅಥವಾ ಅನಂತೇಶ್ವರ ಗುಡಿಯ ಆವರಣದಲ್ಲಿಯೇ ಕೃಷ್ಣನ ಗುಡಿ ಇದ್ದಿರಬಹುದು.

ಶಿಷ್ಯಸಂಗ್ರಹ

ಸಿದ್ಧಾಂತೋದ್ಧಾರ

೧. ಸರ್ವಮೂಲ

ಮಧ್ವಾಚಾರ್ಯರಿಗೆ ಮುಂಚೆ ಬ್ರಹ್ಮಸೂತ್ರಗಳ ಮೇಲೆ ಇಪ್ಪತ್ತೊಂದು ಭಾಷ್ಯಗಳು ಪ್ರಚಲಿತವಾಗಿದ್ದುವು ; ಈ ಭಾಷ್ಯಕಾರರ ಹೆಸರುಗಳೂ ಬಳಕೆಯಲ್ಲಿವೆ. ಭಾರತೀವಿಜಯ, ಸಚ್ಚಿದಾನಂದ, ಬ್ರಹ್ಮಘೋಷ, ಶತಾನಂದ, ಉದ್ವರ್ತ, ವಿಜಯ, ರುದ್ರಭಟ್ಟ ವಾಮನ, ದ್ರವಿಡ, ಬ್ರಹ್ಮದತ್ತ ವೃತ್ತಿಕಾರ (ಬೋಧಾಯನ ?), ವಿಜಯಭಟ್ಟ ವಿಷ್ಣುಕ್ರಾಂತ, ಮಾಧವ, ವಾದೀಂದ್ರ, ಪಿಶಾಚ, ಭರ್ತೃಪ್ರಪಂಚ, ಭಾಸ್ಕರ, ಶಂಕರ, ಯಾದವಪ್ರಕಾಶ, ರಾಮಾನುಜ ಇವರೇ ಈ ಭಾಷ್ಯಕಾರರು. ಇವರಲ್ಲಿ ಶಂಕರ, ರಾಮಾನುಜ ಇಬ್ಬರ ಭಾಷ್ಯಗಳು ಸಂಪೂರ್ಣವಾಗಿ ಉಪಲಬ್ಧವಾಗಿವೆ ; ಇವುಗಳು ತುಂಬ ಬಳಕೆಯಲ್ಲಿಯೂ ಇವೆ. ಈ ಎರಡು ಭಾಷ್ಯಗಳ ಮೇಲೆ ದೃಷ್ಟಿ ಭೇದಗಳೂ ನಿಂತಿವೆ. ಯಾದವ ಪ್ರಕಾಶರು ರಾಮಾನುಜರ ವಿದ್ಯಾಗುರುಗಳು, ಹನ್ನೊಂದನೆಯ ಶತಮಾನದಲ್ಲಿದ್ದವರು. ಇವರ ಸಿದ್ಧಾಂತಕ್ಕೆ ಭೇದಾಭೇದವಾದ ವೆನ್ನುತ್ತಾರೆ ; ಬ್ರಹ್ಮಪದಾರ್ಥವೊಂದೇ ಸತ್ಯ, ಉಳಿದುದೆಲ್ಲ ಬ್ರಹ್ಮನ ಕಾರ್ಯಭೂತವೇ ಎಂಬುದು ಇವರ ದೃಷ್ಟಿ ಭಾಸ್ಕರಾಚಾರ್ಯರು ಒಂಭತ್ತನೆಯ ಶತಮಾನದವರೆಂದು ತೋರುತ್ತದೆ. ಏಕೋಪಾಧಿಯ ಬ್ರಹ್ಮವು ಅನೇಕೋಪಾಧಿಗಳನ್ನು ಧರಿಸಿ

ಪರಿಚ್ಛಿನ್ನವಾಗುವುದೆಂದೂ ಈ ಉಪಾಧಿಗಳು ಹೋದರೆ ಅಖಂಡ, ಅಪರಿಚ್ಛಿನ್ನ ಬ್ರಹ್ಮವಸ್ತುವು ಸಿದ್ಧಿಸುತ್ತದೆ ಎಂದೂ ಇವರವಾದ. ಭೇದದಲ್ಲಿ ಅಭೇದವನ್ನು ಕಾಣುವ ಇವರು ಶಂಕರ ಮತ್ತು ರಾಮಾನುಜ ಇಬ್ಬರ ಸಿದ್ಧಾಂತಗಳಿಗೆ ಮಧ್ಯವರ್ತಿಯಾಗಿರುವಂತೆ ತೋರುತ್ತದೆ. ಭರ್ತೃಪ್ರಪಂಚರು ಶಂಕರರಿಗಿಂತ ಪ್ರಾಚೀನರು. ಇವರು ಕರ್ಮಜ್ಞಾನ ಸಮುಚ್ಚಯವಾದಿ, ಇವರ ಪ್ರಕಾರ ಪರಮಾರ್ಥಸತ್ಯವು ಭೇದಾಭೇದ ರೂಪದ್ದು. ಇವರದ್ದು ದ್ವೈತಾದ್ವೈತ ಸಿದ್ಧಾಂತವೆನ್ನುತ್ತಾರೆ. ಉಳಿದ ಭಾಷ್ಯಕಾರರ ಬರಹ ಅಷ್ಟಾಗಿ ಉಳಿದಿಲ್ಲ, ಅವರ ನಿಲುವುಗಳು ಏನು ಎಂಬುದೂ ಸ್ಪಷ್ಟವಾಗಿಲ್ಲ. ಆಚಾರ್ಯರ ಕಾಲಕ್ಕೆ ಶಾಂಕರಭಾಷ್ಯವೇ ಪ್ರಬಲವಾಗಿದ್ದಂತೆ ತೋರುತ್ತದೆ. ತಮ್ಮ ಬ್ರಹ್ಮ ಸೂತ್ರಭಾಷ್ಯದಲ್ಲಿ ಈ ಮತವನ್ನೇ ಇವರು ವಿಶೇಷವಾಗಿ ವಿಮರ್ಶೆಗೆ ಎತ್ತಿಕೊಂಡಿರುವುದು, ಈ ದೃಷ್ಟಿಯನ್ನು ನಿರಾಕರಿಸಲೆಂದೇ ತಮ್ಮ ಗ್ರಂಥಗಳನ್ನು ಅವರು ಸಿದ್ಧಪಡಿಸಿದುದು.

ಮಧ್ವಾಚಾರ್ಯರು ಒಟ್ಟು ಮೂವತ್ತೇಳು ಗ್ರಂಥಗಳನ್ನು ಬರೆದರು. ಇವಕ್ಕೆ ಒಟ್ಟಾಗಿ 'ಸರ್ವಮೂಲ'ವೆಂಬ ನಿರ್ದೇಶನವಿದೆ. ಬ್ರಹ್ಮಸೂತ್ರ ಪ್ರಸ್ಥಾನದ ಮೇಲೆ ಭಾಷ್ಯ, ಅನುವ್ಯಾಖ್ಯಾನ, ಅಣುಭಾಷ್ಯ, ನ್ಯಾಯವಿವರಣ ಈ ನಾಲ್ಕು ಗ್ರಂಥಗಳೂ, ಉಪನಿಷತ್ ಪ್ರಸ್ಥಾನದ ಮೇಲೆ ದಶೋಪನಿಷದ್ಭಾಷ್ಯಗಳೂ, ಗೀತಾಪ್ರಸ್ಥಾನದ ಮೇಲೆ ಭಗವದ್ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯನಿರ್ಣಯ ಎಂಬ ಎರಡು ಗ್ರಂಥಗಳೂ ಇವೆ. ತಮ್ಮ ವೇದಾಂತದೃಷ್ಟಿಯನ್ನು ಇನ್ನಷ್ಟು ಸ್ಪಷ್ಟಪಡಿಸಲು ಹತ್ತು ಪ್ರಕರಣ ಗ್ರಂಥಗಳನ್ನೂ ಸಿದ್ಧಪಡಿಸಿದರು. ಪ್ರಮಾಣ ಲಕ್ಷಣ, ಕಥಾಲಕ್ಷಣ, ಉಪಾಧಿಖಂಡನ, ಮಾಯಾವಾದಖಂಡನ, ಮಿಥ್ಯಾತ್ವಾನು ಮಾನಖಂಡನ, ತತ್ತ್ವಸಂಖ್ಯಾನ, ತತ್ತ್ವೋದ್ಯೋತ, ಕರ್ಮನಿರ್ಣಯ,

ವಿಷ್ಣುತತ್ತ್ವವಿನಿರ್ಣಯ, ತತ್ತ್ವವಿವೇಕ ಇವು ದಶಪ್ರಕರಣಗಳು. ಭಾರತ ಮತ್ತು ಭಾಗವತಗಳಿಗೆ ತಾತ್ಪರ್ಯನಿರ್ಣಯಗಳನ್ನೂ ಮಾಡಿದ್ದಾರೆ. ಇವಲ್ಲದೆ ಯಮಕ ಬಾರತ, ಋಗ್ಭಾಷ್ಯಾ ಜಯಂತೀನಿರ್ಣಯ, ಯತಿಪ್ರಣವಕಲ್ಪ, ಕೃಷ್ಣಾಮೃತ ಮಹಾರ್ಣವ, ಸದಾಚಾರ ಸ್ಮೃತಿ ಎಂಬ ಗ್ರಂಥಗಳನ್ನೂ ಆಯಾ ವಿಚಾರಗಳನ್ನು ಅಧಿಕರಿಸಿ ರಚಿಸಿದರು. ದ್ವಾದಶ ಸ್ತೋತ್ರವು ಅವರ ಅದ್ಭುತವಾದ ಭಕ್ತಿ ಕಾವ್ಯ. ನಖಸ್ತುತಿಯಂಬುದು ಅವರು ತಮ್ಮ ಶಿಷ್ಯ ತ್ರಿವಿಕ್ರಮ ಪಂಡಿತಾಚಾರ್ಯರ 'ವಾಯುಸ್ತುತಿ'ಗೆ ರಚಿಸಿದ ಮಂಗಳ ಶ್ಲೋಕ.

೨. ಭೇದವಾದ

ಮಧ್ವಾಚಾರ್ಯರ ದಾರ್ಶನಿಕ ನಿಲುವು ದ್ವೈತವಾದವೆನಿಸಿ ಕೊಂಡಿದೆ. ಶಂಕರರು ಬ್ರಹ್ಮವೊಂದೇ ಸತ್ಯ, ಉಳಿದುದೆಲ್ಲ ಮಿಥ್ಯೆ ಎಂದು ಪ್ರತಿಪಾದಿಸಿ ಅದ್ವೈತವಾದವನ್ನು ರೂಪಿಸಿದ್ದರು ; ರಾಮಾನುಜರು ಈ ಏಕಮೇವಾದ್ವಿತೀಯವಾದ ಬ್ರಹ್ಮವು ಚಿದಚಿದ್ವಿಶಿಷ್ಟವಾದುದೆಂದು ಹೇಳಿ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸಿದ್ದರು. ಇವೆರಡು ದೃಷ್ಟಿಗಳಿಗೂ ಭಿನ್ನವಾಗಿ ಮಧ್ವಾಚಾರ್ಯರು ದ್ವೈತವಾದವನ್ನು ನಿಲ್ಲಿಸಿದರು. ದ್ವೈತವೆಂದರೆ ಎರಡು ತತ್ತ್ವಗಳನ್ನು ಹೇಳುವ ಸಿದ್ಧಾಂತ. ಸ್ವತಂತ್ರನಾದ ಬ್ರಹ್ಮ ಪರತಂತ್ರಗಳಾದ ಜೀವಜಡ ಈ ಎರಡೂ ಬೇರೆ ಬೇರೆ ತತ್ತ್ವಗಳೆನ್ನುವುದು ಈ ಮಾತಿನ ಅರ್ಥ. ಆದರೆ ಬ್ರಹ್ಮ ಜೀವ, ಜಡ ಇವರಲ್ಲಿ ಪರಸ್ಪರ ಭೇದವನ್ನು ಕಾಣಿಸುವುದೇ ಆಚಾರ್ಯರ ಮುಖ್ಯವಾದ ಉದ್ದೇಶವಾದುದರಿಂದ ಇದನ್ನು ಭೇದವಾದವೆಂದೂ ವ್ಯವಹರಿಸುತ್ತಾರೆ.

ಭೇದವೇ ಸತ್ಯ (ಸತ್ಯಂ ಭಿದಾ)ವೆನ್ನುವ ಸಿದ್ಧಾಂತ ಇದು. ಭೇದವೆಂದರೆ ಉಳಿದವುಗಳಿಂದ ವಿಲಕ್ಷಣವಾಗಿರುವ ಪದಾರ್ಥ ಸ್ವರೂಪ. ಜೀವನಿಗೂ ಈಶ್ವರನಿಗೂ ಭೇದ, ಜೀವಜೀವರಲ್ಲಿ ಬೇದ, ಜಡಕ್ಕೂ ಜೀವಕ್ಕೂ ಭೇದ, ಜಡಕ್ಕೂ ಈಶ್ವರನಿಗೂ ಭೇದ, ಜಡಜಡಗಳಲ್ಲಿ ಭೇದ ಹೀಗೆ ಪಂಚಭೇದಗಳನ್ನು ಹೇಳುತ್ತಾರೆ. ಈ ಭೇದವು ಸಂಸಾರಸ್ಥಿತಿಯಲ್ಲಿ ಮಾತ್ರವಲ್ಲದೆ, ಮೋಕ್ಷದ ಅವಸ್ಥೆಯಲ್ಲಿಯೂ ಉಳಿದು ಬರುತ್ತದೆ. (ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ನಿತ್ಯಶಃ) ತಾತ್ತ್ವಿಕವಾಗಿ ಐದು ಭೇದಗಳನ್ನು ಹೇಳಿದರೂ ಪ್ರಮುಖ ವಾದದ್ದು ಜೀವನಿಗೂ ಈಶ್ವರನಿಗೂ ನಡುವೆ ಇರುವ ಭೇದವೊಂದೇ. ಇದೇ ದ್ವೈತ ಸಿದ್ಧಾಂತದ ಮುಖ್ಯಪ್ರಮೇಯ. ಇದನ್ನು ಸಮರ್ಥಿಸಲು ನಮ್ಮ ನಿತ್ಯದ ಅನುಭವವನ್ನೂ, ಆಗಮವನ್ನೂ ('ದ್ವಾಸುಪರ್ಣಾಸಯುಜಾ' ಇತ್ಯಾದಿ ಶ್ರುತಿಗಳನ್ನೂ) ತೋರಿಸುತ್ತಾರೆ ; ಜೀವನ ಅಲ್ಪಶಕ್ತಿ, ಈಶ್ವರನ ಅನಂತಶಕ್ತಿಗಳ ನಡುವೆ ಇರುವ ಅಂತರವನ್ನು ನಿರ್ದೇಶಿಸುತ್ತಾರೆ (ವಿರುದ್ಧಧರ್ಮಾಧಿಕರಣತ್ವಾನುಮಾನಾತ್).

ಈ ದರ್ಶನವನ್ನು ನಿಲ್ಲಿಸಲು ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳನ್ನು ಬಳಸಿಕೊಳ್ಳುತ್ತಾರೆ. 'ನಿರ್ದೋಷೇಂದ್ರಿಯಸಂನಿಕರ್ಷ' ವಾದ ಪ್ರತ್ಯಕ್ಷವೇ ಪ್ರಧಾನವಾದ ಪ್ರಮಾಣ. ಇದರಿಂದ ಒದಗಿದ ವಿವರಗಳನ್ನು ದೃಢಪಡಿಸಲು 'ಶ್ರುತಿಸ್ಮೃತಿ ಸಮ್ಮತಯುಕ್ತಿ'ಯಿಂದ ಕೂಡಿದ ಅನುಮಾನವು ನೆರವಿಗೆ ಬರುತ್ತದೆ. ಎರಡಕ್ಕೂ ಕಲಶದಂತೆ ಸಚ್ಛಾಸ್ತ್ರರೂಪವಾದ ಆಗಮ (ನಿರ್ದೋಷಶಬ್ದ). ಶಂಕರಾಚಾರ್ಯ ರಂತೆಯೇ ಮಧ್ವಾಚಾರ್ಯರೂ ಆಗಮವೆಂದರೆ ಪ್ರಸ್ಥಾನತ್ರಯ (ಬ್ರಹ್ಮಸೂತ್ರ, ಉಪನಿಷತ್ತುಗಳು, ಭಗವದ್ಗೀತೆ)ಗಳೆಂದೇ ಪರಿಗಣಿಸಿದರು ; ಆದರೆ ಇವಕ್ಕೆ ಭೇದಪರವಾದ ಅರ್ಥವನ್ನು ತೋರಿಸಿದರು. ಈ ಮೂರು

ಮಾತ್ರವಲ್ಲದೆ ಪುರಾಣಗಳನ್ನೂ ಆಚಾರ್ಯರು ಪ್ರಮಾಣವೆಂದೇ ಗ್ರಹಿಸಿದರು. ಪುರಾಣಗಳು 'ವೇದೋಪಬೃಂಹಣ'ಗಳಷ್ಟೆ ? ಹಾಗೆ ಮಹಾಭಾರತವನ್ನೂ ಸರ್ವಶಾಸ್ತ್ರಗಳ ನಿರ್ಣಯವೆಂದು ಆಚಾರ್ಯರು ಬಗೆದಿದ್ದರು (ನಿರ್ಣಯಃ ಸರ್ವಶಾಸ್ತ್ರಾಣಾಂ ಸ ದೃಷ್ಟಾಂತೋ ಹಿ ಭಾರತೇ).

೩. ವಿಷ್ಣುತತ್ತ್ವ

ಆಗಮಗಳೆಲ್ಲ ವಿಷ್ಣುವಿನ ಆಧಿಕ್ಯವನ್ನೇ ಹೇಳುವುದೆಂದು ಆಚಾರ್ಯರ ಆಗ್ರಹ. ತಮ್ಮ ವಿಷ್ಣುತತ್ತ್ವವಿನಿರ್ಣಯದಲ್ಲಿ ''ಯುಕ್ತಂ ಹಿ ವಿಷ್ಣೋಃ ಸರ್ವೋತ್ತಮತ್ವೇ ಏವ ಮಹಾತಾತ್ಪರ್ಯಂ ಸರ್ವಾಗಮಾನಾಂ'' ಎಂಬ ಮಾತನ್ನು ಹೇಳಿದ್ದಾರೆ. ಯತಿಪ್ರಣವಕಲ್ಪದಲ್ಲಿ ''ವಿಷ್ಣೋಃ ಸರ್ವೋತ್ತಮತ್ವಂ ಸದಾ ಪ್ರತಿಪಾದಯ'' ಎಂದು ಅಪ್ಪಣೆ ಮಾಡಿದ್ದಾರೆ. ಶ್ರುತಿಯಿಂದ ''ಅಗ್ನಿರ್ವೈ ದೇವಾನಾಂ ಅವಮಃ, ವಿಷ್ಣುಃ ಪರಮಃ'' ಎಂಬ ಸಮರ್ಥನೆಯನ್ನು ಕಾಣಿಸಿದ್ದಾರೆ. ವಿಷ್ಣುವೇ ಬ್ರಹ್ಮಪದ ವಾಚ್ಯ, ಜಗತ್ತಿಗೆ ನಿಮಿತ್ತಕಾರಣ, ಅಸಾಧಾರಣ ಸೃಷ್ಟಿಕರ್ತಾ. ಇವನೊಬ್ಬನೇ ಸ್ವತಂತ್ರತತ್ತ್ವ. ಇವನನ್ನು ಸರ್ವಾಧಿಕ, ಸರ್ವೋತ್ತಮ, ಅಖಿಲ ದೋಷವರ್ಜಿತ, ಅನಂತಕಲ್ಯಾಣ ಗುಣಗಣಪರಿಪೂರ್ಣ, ನಿತ್ಯಪೂರ್ಣ, ಸರ್ವಜಗನ್ನಿಯಾಮಕ ಎಂದು ಮುಂತಾಗಿ ಬಣ್ಣಿಸುತ್ತಾರೆ. ಇವನ ಸಂಕಲ್ಪದಿಂದಲೇ ಜೀವರಿಗೆ ಅನಾದಿಯಾದ ಅವಿದ್ಯೆಯ ಬಂಧವು ಒದಗಿ ಸೃಷ್ಟಿಯ ಅಗತ್ಯವೂ ದುಃಖದ ಒತ್ತಡವೂ ಮೈದಳೆಯುತ್ತವೆ. ವಿಷ್ಣುವೇ ಹೀಗೆ ಬಂಧಕ್ಕೆ ಕಾರಣನಾದುದರಿಂದ ಮೋಕ್ಷಕ್ಕೂ ಅವನೇ ಕಾರಣನಾಗುತ್ತಾನೆ. ('ತದೇವ ಬಂಧಸ್ಯ ಈಶ್ವರಾಧೀನತ್ವಾತ್ ಸ ಏವ

ಮೋಚಕಃ ಅಂಗೀಕಾರ್ಯಃ' ನ್ಯಾಯಸುಧಾ) ಅವನನ್ನು ಬಿಟ್ಟು ಬೇರೊಬ್ಬ ಸ್ವತಂತ್ರ ಇಲ್ಲದಿರುವುದರಿಂದ ಅವನೇ ಪ್ರಸನ್ನನಾದಾಗ ತನ್ನದೇ ಆದ ಮಾಯೆಯನ್ನು ಕಳೆಯುತ್ತಾನೆ ('ಅಪರಸ್ಯ ಸ್ವಾತಂತ್ರ್ಯಾಭಾವಾತ್ ಪ್ರಸನ್ನ ಏವಾಸೌ ಸ್ವಕೀಯಾಂ ಮಾಯಾಂ ವ್ಯಾವರ್ತಯತಿ'). ಎಂದ ಮೇಲೆ ಅವನ ಪ್ರಸಾದವೇ ಜೀವರಿಗೆ ಅತ್ಯಂತ ಮುಖ್ಯವಾದ ಲಕ್ಷ್ಯ.

ವಿಷ್ಣುವು ಪರಮನಾದರೆ ಲಕ್ಷ್ಮಿ (ರಮಾದೇವಿ)ಯು ಪ್ರಕೃತಿ. ವಿಷ್ಣುವು ಜಗತ್ತಿಗೆ ನಿಮಿತ್ತಕಾರಣನಾದರೆ ಲಕ್ಷ್ಮಿಯು ಉಪಾದಾನ ಕಾರಣಳು. ನಿತ್ಯಾವಿಯೋಗಿನಿಯಾದ ಈಕೆ ಅಪ್ರಾಕೃತ ದಿವ್ಯದೇಹ ಸಂಪನ್ನಳಾದರೂ ವಿಷ್ಣುವಿಗೆ ಅಧೀನಳು. ವಿಷ್ಣು ಲಕ್ಷ್ಮಿ ಇವರಿಬ್ಬರೇ ನಿತ್ಯಮುಕ್ತರೆಂದು ಆಚಾರ್ಯರು ಭಾಗವತತಾತ್ಪರ್ಯನಿರ್ಣಯದಲ್ಲಿ ಹೇಳಿದ್ದಾರೆ (ದ್ವಾವೇವ ನಿತ್ಯಮುಕ್ತೌ ಪರಮಃ ಪ್ರಕೃತಿಸ್ತಥಾ). ನಿತ್ಯಮುಕ್ತಳಾದರೂ, ಅಜ್ಞಾನವೇ ಮುಂತಾದ ದೋಷಗಳಿಂದ ದೂರಾದವಳಾದರೂ ವಿಷ್ಣುವಿನ ಗುಣಗಳನ್ನು ಸಂಪೂರ್ಣವಾಗಿ ಈಕೆಯೂ ಅರಿಯಳು. ಎಂದಮೇಲೆ ವಿಷ್ಣುವಿನ ಪಾರಮ್ಯ ಸಿದ್ಧವಾಗುತ್ತದೆ. ತಾನೇ ಚಿತ್ಪ್ರಕೃತಿಯಾಗಿದ್ದುಕೊಂಡು ಜಡಪ್ರಕೃತಿಗೆ ನಿಯಾಮಕಳಾದ ಈಕೆಯು ವಿಷ್ಣುವಿನ ಸಂಕಲ್ಪದಂತೆ ತಾನೇ ಶ್ರೀ, ಭೂ, ದುರ್ಗಾ ಎಂಬ ಮೂರು ರೂಪಗಳನ್ನು ಧರಿಸಿ ಸೃಷ್ಟಿ ಸ್ಥಿತಿ, ಲಯಗಳನ್ನು ನಡೆಸುತ್ತಾಳೆ. ಲಕ್ಷ್ಮಿಯ ದ್ವಾರಾ ಈ ಕ್ರಿಯೆಗಳು ನಡೆದರೂ ವಿಷ್ಣುವೇ ವಾಸ್ತವವಾಗಿ ಜಗತ್ತಿಗೆ ಸರ್ಜಕ, ಪಾಲಕ, ಸಂಹಾರಕ.

ವಿಷ್ಣುವು ಜೀವ ಮತ್ತು ಜಡಪದಾರ್ಥಗಳಲ್ಲಿ ಅನಂತರೂಪ ದಿಂದ ಅಂತರ್ಯಾಮಿಯಾಗಿದ್ದಾನೆ. ಅಣುರೇಣುತೃಣಗಳಲ್ಲಿಯೂ ಅವನು ಪರಿಪೂರ್ಣನೇ. ಒಂದೊಂದು ವಸ್ತುವಿನಲ್ಲಿಯೂ ವ್ಯಾಪಾರ

ಮಾಡುತ್ತ ಜೀವರಿಗೆ ತಂತಮ್ಮ ಯೋಗ್ಯತಾನುಸಾರವಾಗಿ ಫಲಗಳನ್ನು ಕೊಟ್ಟು ಸಂಸಾರವನ್ನು ನಡೆಸುತ್ತಾನೆ. ಎಲ್ಲ ವಸ್ತುಗಳೂ, ಎಲ್ಲ ವ್ಯಾಪಾರಗಳೂ ಎಲ್ಲ ಅವಸ್ಥೆಗಳೂ ಅವನ ಅಧೀನವೇ. ಹೀಗೆ ಸರ್ವಸ್ವತಂತ್ರನಾದ ವಿಷ್ಣುವು ವ್ಯಾಪ್ಯನೂ ಹೌದು.

ವಿಷ್ಣು-ಲಕ್ಷ್ಮಿಯರು ಜಗನ್ನಿಯಾಮಕರಾಗಿರುವ ವಿವರವನ್ನು ಆಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ವಿಸ್ತರಿಸಿದ್ದಾರೆ. ಸೃಷ್ಟಿಯಲ್ಲಿ ಹಲವಾರು ಬಗೆಗಳಿವೆ, ಹಲವಾರು ಕ್ರಮಗಳಿವೆ. ಇವುಗಳಲ್ಲಿ ಮುಖ್ಯವಾದುದು, ಆದ್ಯವಾದುದು ಆತ್ಮಸೃಷ್ಟಿ ವಿಷ್ಣು-ಲಕ್ಷ್ಮಿಯರಿಂದ ಪ್ರಾದುರ್ಭಾವ ಪರಂಪರೆ ಒದಗುತ್ತದೆ. ಪ್ರಾದುರ್ಭಾವವೆಂದರೆ ನಿತ್ಯವಾಗಿ (ಎಲ್ಲ ಕಾಲಗಳಲ್ಲಿಯೂ) ಇದ್ದುದು ಕಾಲ ವಿಶೇಷಗಳಲ್ಲಿ (ಒಂದೊಂದು ಕಾಲದಲ್ಲಿ) ಹೊರಹೊಮ್ಮುವುದು ; ಹೊಸದಾಗಿ ಬಂದುದೆಂದು ಅರ್ಥವಲ್ಲ. 'ಶೂನ್ಯನಾಮಕನಾಗಿ ಮಲಗುವ ಮಹದ್ದೈವ'' (ವಿಜಯದಾಸರ ಮಾತು)ದಂತೆ ಇರುವ ಪರಮನು ಲಕ್ಷ್ಮಿಯೊಂದಿಗೆ ಕಲೆತು ಅನಿರುದ್ಧನಂತೆ ಕಾಣಿಸಿಕೊಳ್ಳುತ್ತಾನೆ. ಅನಿರುದ್ಧನಿಂದಲೇ ಜಗತ್ತಿನ ಸ್ಥಿತಿ ; ರಮಾದೇವಿಯ ಅಂಶದಿಂದ ಅನಿರುದ್ಧನ ಮಡದಿ ಶಾಂತಿಯೆನ್ನುವವಳು ಕಾಣಿಸಿಕೊಳ್ಳುತ್ತಾಳೆ. ಇವರಿಬ್ಬರಿಂದ ಸೃಷ್ಟಿಗೆ ಕಾರಣನಾದ ಅನಿರುದ್ಧನೂ ಅವನ ಮಡದಿ ಕೃತಿತಾ ಎಂಬುವಳೂ ಪ್ರಾದುರ್ಭೂತರಾಗುತ್ತಾರೆ. ಈ ಇಬ್ಬರಿಂದ 'ಸಂಹಾರಕಾರಣವಪು' ವಾದ ಸಂಕರ್ಷಣ ಮತ್ತು ಜಯಾದೇವಿಯರೂ ಅವರಿಂದ 'ನಿಜಮುಕ್ತಿ ಪದ ಪ್ರದಾತೃ'ವಾದ ವಾಸುದೇವ ಮತ್ತು ಮಾಯಾದೇವಿಯರೂ ಕಾಣಿಸಿಕೊಳ್ಳುತ್ತಾರೆ. ಈ ಪಂಚಮೂರ್ತಿಗಳ ಪ್ರಾದುರ್ಭಾವವೇ ಆತ್ಮಸೃಷ್ಟಿಯೆನಿಸಿಕೊಳ್ಳುತ್ತದೆ. ಒಂದೊಂದು ಪ್ರಾದುರ್ಭಾವದಲ್ಲಿಯೂ ವಿಷ್ಣುವು ಪೂರ್ಣನೇ. ('ಏಕಃ ಸಮೋಽಪಿ

ಅಖಿಲ ದೋಷ ಸಮುಜ್ಝಿತೋಽಪಿ ಸರ್ವತ್ರ ಪೂರ್ಣ ಗುಣಕೋಽಪಿ ಸಮುಜ್ಝಿತೋಽಭೂತ್')

೪. ತಾರತಮ್ಯ

ವಿಷ್ಣು-ಲಕ್ಷ್ಮಿ (ಪರಮ-ಪ್ರಕೃತಿ)ಯರಿಂದ ಹೀಗೆ ಆತ್ಮಸೃಷ್ಟಿ ಸಿದ್ಧವಾದರೆ ಅವರ ಇಚ್ಛಾವ್ಯಾಪಾರದಿಂದ ಜಡಸೃಷ್ಟಿಕ್ರಮವೂ ಒದಗುತ್ತದೆ. ಮಹತ್ತತ್ತ್ವದಿಂದ ಅಹಂಕಾರತತ್ತ್ವವೂ, ಅದರಿಂದ ದಶೇಂದ್ರಿಯಗಳೂ ಪಂಚತನ್ಮಾತ್ರಗಳೂ ಪಂಚಭೂತಗಳೂ ಏಳುತ್ತವೆ. ಈ ಸೃಷ್ಟಿಕ್ರಮಕ್ಕೆ ಮೂಲಭೂತವಾಗಿ ಮಹತ್ತತ್ತ್ವದ ಅಭಿಮಾನಿಯಾದ ಬ್ರಹ್ಮ (ಪುರುಷನಾಮಕಬ್ರಹ್ಮ)ನಿದ್ದಾನೆ. ವಿಷ್ಣು ಮತ್ತು ಲಕ್ಷ್ಮಿ ಇಬ್ಬರೂ ಈಶಕೋಟಿಗೆ ಸೇರಿದವರಾದರೆ ವಿಷ್ಣುವಿನ ನಾಭಿಕಮಲದಿಂದ ಉದ್ಭವಿಸಿದ ಬ್ರಹ್ಮ ಜೀವಕೋಟಿಗೆ ಸೇರಿದವನು. ಜಗತ್ಸರ್ಜಕನಾದ ಇವನು ಜೀವಕೋಟಿಯಲ್ಲಿ ಶ್ರೇಷ್ಠನೇನೋ ಹೌದು. ತಾರತಮ್ಯಕ್ರಮ ದಲ್ಲಿ ಸರ್ವೋತ್ತಮನಾದವನು ವಿಷ್ಣು, ಅವನಿಗೆ ಅಧೀನಳಾದವಳು ಲಕ್ಷ್ಮಿ, ಅವಳಿಗಿಂತ ಕೆಳಗಿನವನು ಬ್ರಹ್ಮ.

ಬ್ರಹ್ಮನಿಗೆ ಕೆಳಗಿನವನು ವಾಯು. ಪದವಿಯಲ್ಲಿ ಕೀಳಾದರೂ ಕಕ್ಷೆಯಲ್ಲಿ ಬ್ರಹ್ಮನಿಗೆ ಸಮನಾದವನೇ. ವಿಷ್ಣುವಿನ ಆದೇಶದಂತೆ ತಾನು ತನ್ನ ಮಡದಿ ಭಾರತಿಯೊಡನೆ ಎಲ್ಲ ವಸ್ತುಗಳಲ್ಲಿಯೂ ನಿಂತು ಆಯಾ ವ್ಯಾಪಾರಗಳನ್ನು ನಡೆಸುತ್ತಾನೆ ; ಪ್ರಾಣ ಮೊದಲಾದ ಐದು ವಾಯು ಗಳಿಗೂ ಇವನೇ ಅಧಿಪತಿ. ಜೀವರಲ್ಲಿ ಲಿಂಗಶರೀರ ಇವನ ಸ್ಥಾನ. ವಿಷ್ಣುವಿನೊಡನೆ ಇವನೂ ಉಳಿದಿರುವುದರಿಂದಲೇ ಎಲ್ಲ ದೈಹಿಕ, ಮಾನಸಿಕ ವ್ಯಾಪಾರಗಳೂ ನಡೆಯುತ್ತಿರುವುದು. ಇವನನ್ನು

ಮುಖ್ಯಪ್ರಾಣನೆಂದು ವ್ಯವಹರಿಸುವುದು ಇದೇ ದೃಷ್ಟಿಯಿಂದಲೇ. ವಿಷ್ಣುವು 'ಆಪ್ತತಮ'ನಾದರೆ ವಾಯುವು 'ಆಪ್ತ' (ಜಯತೀರ್ಥ). ಜೀವನಿಗೂ ವಿಷ್ಣುವಿಗೂ ನಡುವೆ ವಾಯುವಿನ ವ್ಯಾಪಾರವಾದುದರಿಂದ ವಾಯುವಿನ ಕೆಲಸವನ್ನು 'ಮಾಧ್ಯಸ್ಥ್ಯ'ವೆಂದು ನಿರ್ದೇಶಿಸುತ್ತಾರೆ. ಜೀವಕೋಟಿಯಲ್ಲಿ ಬ್ರಹ್ಮನೊಂದಿಗೆ ಸಮಾನ ಕಕ್ಷೆಯಲ್ಲಿದ್ದುಕೊಂಡು ಉತ್ತಮನಾಗಿರುವುದರಿಂದ ವಾಯುವನ್ನು ಜೀವೋತ್ತಮನೆಂದು ವ್ಯವಹರಿಸುತ್ತಾರೆ. ಬ್ರಹ್ಮನಂತೆ ಇವನೂ 'ದ್ವಾತ್ರಿಂಶಲ್ಲಕ್ಷಣೋಪೇತ.'

''ಪ್ರಾಣಂದೇವಾ ಅನುಪ್ರಾಣಂತಿ'', ''ನಮೋಬ್ರಹ್ಮಣೇ ನಮಸ್ತೇ ವಾಯೋ !'', ''ತಸ್ಮಾತ್ಪ್ರಾಣಃ ಸರ್ವಜೀವೋಧಿಕೋಽಭೂತ್'' ಮುಂತಾದ ಶ್ರುತಿಗಳು ವಾಯುವಿನ ಜೀವೋತ್ತಮತ್ವವನ್ನೇ ಹೇಲುವುದೆಂದು ಆಚಾರ್ಯರ ವಾದ. ಈ ದೃಷ್ಟಿಯಿಂದ ವಾಯುವು ಸರ್ವವೇದ ಪ್ರತಿಪಾದ್ಯ. ಹನುಮ-ಭೀಮ-ಮಧ್ವ ಈ ಅವಾತಾರತ್ರಯಗಳ ಪ್ರಸ್ತಾಪವೂ ಬಳಿತ್ಥಾಸೂಕ್ತದಲ್ಲಿ ಬಂದಿದೆಯೆಂದು ಮಾಧ್ವರ ವಿಶ್ವಾಸ. ಮಧ್ವಾಚಾರ್ಯರು ವಾಯುವಿನ ಅವತಾರವೇ ಎಂಬ ಕಲ್ಪನೆಯಲ್ಲಿ ಗುರುವಿನ 'ಮಾಧ್ಯಸ್ಥ್ಯ'ದ ಅಂಶವಿಲ್ಲದೆ ಇಲ್ಲ. ಮೋಕ್ಷ ಕೊಡುವವನು ವಿಷ್ಣುವೇ ಆದರೂ ವಾಯುವು ಅವನ ಅಣತಿಯಂತೆ ಈ ಕೆಲಸವನ್ನು ತಾನೇ ನಿರ್ವಹಿಸುತ್ತಾನೆ. (ವಿಷ್ಣುರ್ಹಿದಾತಾ ಮೋಕ್ಷಸ್ಯ, ವಾಯುಶ್ಚ ತದನುಜ್ಞಯಾ).

ತಾರತಮ್ಯಕ್ರಮದಲ್ಲಿ ಬ್ರಹ್ಮ-ವಾಯುಗಳ ಕೆಳಗೆ ಅವರವರ ಶಕ್ತಿಸ್ವರೂಪರಾದ ಸರಸ್ವತೀ-ಭಾರತಿಯರೂ, ಅವರಿಗಿಂತ ಕೆಳಗಿನ ಕಕ್ಷೆಯಲ್ಲಿ ಗರುಡ-ಶೇಷ-ರುದ್ರರೂ ಇದ್ದಾರೆಂಬ ಕಲ್ಪನೆಯಿದೆ. ರಮಾದೇವಿ (ಲಕ್ಷ್ಮಿ), ಬ್ರಹ್ಮ-ವಾಯು, ಸರಸ್ವತೀ-ಭಾರತೀ ಇವರನ್ನು ಪರಶುಕ್ಲತ್ರಯರೆಂದು ವ್ಯವಹರಿಸುತ್ತಾರೆ. ಇವರಿಗೆ ಆಜ್ಞಾನಾದಿ

ದೋಷಗಳ ಸಂಘಟನೆಯಿಲ್ಲ, ಇವರಲ್ಲಿ ಕಲಿವ್ಯಾಪಾರವೂ ಇರದು. ಈ ಲಕ್ಷಣಗಳನ್ನು ಗರುಡ-ಶೇಷ-ರುದ್ರರಿಗೆ ಹೇಳುವಂತಿಲ್ಲ. ರುದ್ರನು ಮನಸ್ಸಿಗೆ ಅಭಿಮಾನದೇವತೆ, ''ತೈಲಧಾರೆಯಂತೆ ಹರಿಯಲ್ಲಿ ಮನಸು ಕೊಡು''ವವನು ಇವನೇ. ಮುಂದಿನ ಕಲ್ಪದಲ್ಲಿ ವಾಯುವು ಬ್ರಹ್ಮನಾದಂತೆ ರುದ್ರನೂ ಶೇಷನಾಗುತ್ತಾನೆ. ಗರುಡ-ಶೇಷ-ರುದ್ರರ ನಂತರ ತಾರತಮ್ಯಕ್ರಮದಲ್ಲಿ ವಿಷ್ಣುವಿನ ಆರುಮಂದಿ ನಿತ್ಯಪತ್ನಿಯರು (ಜಾಂಬವತಿ ಮುಂತಾದವರು ; ಇವರಲ್ಲೆಲ್ಲ ಲಕ್ಷ್ಮಿಯ ವಿಶೇಷಾಂಶ ವುಂಟು) ; ಸೌಪರ್ಣೀ -ವಾರುಣೀ-ಪಾರ್ವತಿ (ಗರುಡ- ಶೇಷ-ರ್‍ರುರ ಶಕ್ತಿಯರು) ; ಇಂದ್ರ-ಕಾಮ ; ಅಹಂಕಾರಿಕ-ಪ್ರಾಣ ; ಅನಿರುದ್ಧ-ಬೃಹಸ್ಪತಿ-ರತಿ-ಸ್ವಾಯಂಭುವಮನು-ದಕ್ಷಪ್ರಜಾಪತಿ-ಶಚಿಯರು; ಪ್ರವಹವಾಯು ; ಶತರೂಪಾ-ಯಮ-ಚಂದ್ರ-ಸೂರ್ಯರು ; ವರುಣ-ನಾರದ ; ಭೃಗು ಇತ್ಯಾದಿ. ಈ ತಾರತಮ್ಯದ ಕಲ್ಪನೆ ಮಾಧ್ವಸಿದ್ಧಾಂತಕ್ಕೆ ವಿಶಿಷ್ಟವಾದುದು. ಗುಣತಾರತಮ್ಯ, ಕಕ್ಷಾ ತಾರತಮ್ಯ, ಆವೇಶಾವತಾರ ತಾರತಮ್ಯ, ಆರೋಹಣ ತಾರತಮ್ಯ, ಅವರೋಹಣ ತಾರತಮ್ಯ ಮೊದಲಾದ ಪ್ರಭೇದಗಳನ್ನು ಹೇಳುತ್ತಾರೆ. ಈ ತಾರತಮ್ಯವು ದೇವತೆಗಳಲ್ಲಿಯೂ, ದೈತ್ಯರಲ್ಲಿಯೂ ಮನುಷ್ಯರಲ್ಲಿಯೂ ಉಂಟು.

೫. ಪ್ರಪಂಚಸತ್ಯತ್ವ

ಹೀಗೆ ಮುಕ್ತಿಯಲ್ಲಿಯೂ ಜೀವರ ತಾರತಮ್ಯವನ್ನೂ ಪಾರತಂತ್ರ್ಯವನ್ನೂ ಹೇಳಿದ ಮೇಲೆ, ಪಂಚಭೇದಗಳನ್ನು ಸಾಧಿಸಿದ ಮೇಲೆ, ಜೀವರಿಗೆ ಯೋಗ್ಯತಾನುಸಾರವಾದ ಫಲಗಳನ್ನು ಕೊಡುವುದ ಕ್ಕಾಗಿಯೇ ಲೋಕಸೃಷ್ಟಿಯು ಲೀಲಾರೂಪವಾಗಿ ನಡೆಯುವುದೆಂದ ಮೇಲೆ ಪ್ರಪಂಚವನ್ನು ಸತ್ಯವೆಂದು ಒಪ್ಪದೆ ವಿಧಿಯಿಲ್ಲ. ಪ್ರಪಂಚವು

ಮಾಯೆ, ಮಿಥ್ಯೆ ; ಪಾರಮಾರ್ಥಿಕವಾಗಿ ಇರದು ಎನ್ನುವ ಅದ್ವೈತವಾದಿಗಳ ಅನುಮಾನವನ್ನು ಮಧ್ವಾಚಾರ್ಯರು ನಿರಸನಮಾಡಲೆತ್ನಿಸಿದ್ದಾರೆ. ಪ್ರಪಂಚವು ಸತ್ಯ, ಅದು ವಿಷ್ಣುವಿನ ವಶದಲ್ಲಿಯೇ ಇರುವುದು ಎಂದು ಅವರ ಸಿದ್ಧಾಂತ. ಪ್ರಳಯಕಾಲದಲ್ಲಿಯೂ ಜಗತ್ತು ಆತ್ಯಂತಿಕವಾಗಿ ನಾಶ ಹೊಂದುವುದಿಲ್ಲ ; ಬ್ರಹ್ಮಾಂಡವೆಲ್ಲವೂ ವಿಷ್ಣುವಿನ ಉದರದಲ್ಲಿ ಸೇರಿರುತ್ತದೆ ಅಷ್ಟೆ.

೬. ಜೀವಗಣ

ತಾರತಮ್ಯವಿಶಿಷ್ಟರಾದ ಜೀವರನ್ನು ಸಾತ್ತ್ವಿಕ, ರಾಜಸ, ತಾಮಸ ಎಂದು ವಿಂಗಡಿಸಿದ್ದಾರೆ. ಈ ಮೂರು ಅನಾದಿಕಾಲದಿಂದಲೂ ಜೀವರಿಗೆ ಸ್ವಭಾವಸಿದ್ಧವಾಗಿ ಒದಗಿಬಂದ ಧರ್ಮಗಳು, ಸಾತ್ವಿಕವರ್ಗಣೆಯಲ್ಲಿ ದೇವತೆಗಳು, ಋಷಿಗಳು, ಮನುಷ್ಯೋತ್ತಮರು, ಪಿತೃದೇವತೆಗಳು, ಚಕ್ರವರ್ತಿಗಳು, ಗಂಧರ್ವರು ಸೇರುತ್ತಾರೆ. ಇವರೆಲ್ಲ ಸ್ವರೂಪದಿಂದಲೇ ವಿಷ್ಣುಭಕ್ತರು, ಇವರು ಕಾಲಕ್ರಮದಲ್ಲಿ ವೈಕುಂಠವನ್ನು ಮುಟ್ಟುತ್ತಾರೆ. ರಾಜಸವರ್ಗಣೆಯಲ್ಲಿ ಮನುಷ್ಯರು ಬಹುಮಟ್ಟಿಗೆ ಸೇರುತ್ತಾರೆ. ಇವರಿಗೆ ನಿತ್ಯಸಂಸಾರಿಗಳೆಂದೂ ವ್ಯವಹಾರವಿದೆ. ವಿಷ್ಣುವಿನ ವಿಚಾರವಾಗಿ ಇವರ ಜ್ಞಾನ ನಿರ್ದುಷ್ಟವಾದುದಾಗಲೀ ಸ್ಪಷ್ಟವಾದುದಾಗಲೀ ಅಲ್ಲ, ಇವರು ವ್ಯಾಮಿಶ್ರರು ; ಇವರ ಜ್ಞಾನ ಮಿಶ್ರಜ್ಞಾನ. ಈ ಕಾರಣದಿಂದ ಇವರು ಅನವರತವೂ ಸ್ವರ್ಗ, ಭೂಮಿ, ನರಕಗಳಲ್ಲಿ ಅಲೆದಾಡುತ್ತ ಇರುತ್ತಾರೆ. ತಾಮಸ ವರ್ಗಣೆಯಲ್ಲಿ ಕಲಿಯೇ ಮೊದಲಾದ ದೈತ್ಯರೂ, ಮನುಷ್ಯರಲ್ಲಿ ಅಧಮರಾದವರೂ ಸೇರುತ್ತಾರೆ. ಇವರಿಗೆ ವಿಷ್ಣುವಿನ ವಿಚಾರವಾಗಿ ದುಷ್ಟವಾದ ತಿಳುವಳಿಕೆಯಿದ್ದು ತಾವೇ ಸ್ವತಂತ್ರರು,

ಸರ್ವಜ್ಞರು, ಸರ್ವಶಕ್ತರು ಎನ್ನುವ ದಂಭ ಒದಗುತ್ತದೆ. ಇವರೆಲ್ಲರೂ ವಿಷ್ಣುದ್ವೇಷಿಗಳು, ತಮೋಯೋಗ್ಯರು.

ಜೀವಕೋಟಿಯಲ್ಲಿ ಕಾಣಬರುವ ಭೇದಕ್ಕೆ ವಿಷ್ಣುಭಕ್ತಿಯಿರುವುದು ಅಥವಾ ಇಲ್ಲದಿರುವುದೇ ಮುಖ್ಯ ಕಾರಣ. ಇದನ್ನು ಬಿಟ್ಟು ಎಲ್ಲ ಜೀವಿಗಳಿಗೂ ಪ್ರಾಕೃತ ಬಂಧವುಂಟು. ರಾಗದ್ವೇಷಾದಿಗಳ ಸಂಸರ್ಗದಿಂದ ವಿಷಯಭೋಗಗಳುಂಟು ; ಎಲ್ಲ ಜೀವರೂ ಅಸ್ವತಂತ್ರರು, ಅಜ್ಞರು ; ಅವರ ಸ್ವರೂಪಜ್ಞಾನ ಮರೆಯಾಗಿ ರುತ್ತದೆ. ಅನೇಕತ್ವ, ಅಣುರೂಪತ್ವ, ಅಸರ್ವಕರ್ತೃತ್ವ, ನೀಚತ್ವ, ತುಚ್ಛತ್ವ, ಪಾರತಂತ್ರ್ಯ ಇವೆಲ್ಲ ಜೀವಲಕ್ಷಣಗಳು. ಜೀವನು ಈಶ್ವರನೆಂಬುದು ಯಾವ ವಿವರದಲ್ಲಿಯೂ ಸಿದ್ಧವಾಗುವುದಿಲ್ಲ. ಅದ್ವೈತವಾದದ ''ಜೀವನು ಬ್ರಹ್ಮನೇ, ಬೇರೆಯಲ್ಲ'' ಎಂಬ ದೃಷ್ಟಿಯನ್ನು ಮಾಧ್ವರು ಆಗ್ರಹದಿಂದ, ಕಟುವಾಗಿ ಖಂಡಿಸುತ್ತಾರೆ. ಭಾಗವತಧರ್ಮದ ಹಿನ್ನೆಲೆಯಲ್ಲಿ ಮೈದಳೆದ ದ್ವೈತ ಸಿದ್ಧಾಂತವು ಶಾಂಕರ ವೇದಾಂತದ ಈ ಬ್ರಹ್ಮಜೀವೈಕ್ಯ ಕಲ್ಪನೆಯ ವಿಚಾರದಲ್ಲಿ ತುಂಬ ಉದ್ವಿಗ್ನವಾದದ್ದು ಸಹಜವೇ. ''ತಾನೇ ರಾಜನೆಂದು ಬಗೆಯುವವನನ್ನು ರಾಜನಾದವನು ಶಿಕ್ಷಿಸುವುದಿಲ್ಲವೆ ?'' ಎಂದು ಮಧ್ವಾಚಾರ್ಯರ ವಾದ. ಮುಕ್ತಿಯಲ್ಲಿಯೂ ಜೀವನಿಗೆ ಬ್ರಹ್ಮನೊಂದಿಗೆ ಅದ್ವೈತವು ಸಿದ್ಧಿಸುವುದಿಲ್ಲವೆಂದು ಅವರ ನಿಲುವು.

೭. ಮುಕ್ತಿ

ಮುಕ್ತಿಯೆಂದರೆ ಅನ್ಯಥಾಸ್ಥಿತಿಯನ್ನು ಬಿಟ್ಟು ಸ್ವರೂಪ ಸ್ಥಿತಿಯನ್ನು ಹೊಂದುವುದು ಎಂದರ್ಥ. ಜೀವನು ತನ್ನ ಸ್ವರೂಪಜ್ಞಾನವನ್ನು

ಮರೆತು ಸಂಸಾರದಲ್ಲಿ ಬೆರೆತು ದುಃಖವನ್ನು ಅನುಭವಿಸುತ್ತಾನೆ. ಇದಕ್ಕೆ ಕಾರಣವಾದ ಅವಿದ್ಯೆಯು ಅಡಗಿದಾಗ ಸ್ವರೂಪ ಸುಖದ ಆವಿರ್ಭಾವ ವಾಗುತ್ತದೆ (ಅವಿದ್ಯಾ ನಿವೃತ್ತಿ ಪೂರ್ವಕ ಸ್ವರೂಪಾನಂದಾವಿರ್ಭಾವ). ಮುಕ್ತಿಯೆಂಬ ಮಾತಿಗೆ ಬಿಡುಗಡೆಯೆಂದರ್ಥವಷ್ಟೆ ? ಭವಬಂಧನ ಗಳಿಂದ ಬಿಡುಗಡೆಯಾಗುವುದೇ ಮುಕ್ತಿ, ನೈಜ ಸುಖಾನುಭೂತಿ. ಜೀವರು ತಂತಮ್ಮ ಯೋಗ್ಯತೆಗೆ ಅನುಸಾರವಾಗಿ ನಾಲ್ಕು ಬಗೆಯ ಮುಕ್ತಿಯನ್ನು ಅನುಭವಿಸುತ್ತಾರೆ. ಭಗವಂತನ ಸನ್ನಿಧಿಯಲ್ಲೇ ಅವನನ್ನು ಎವೆಯಿಕ್ಕದೆ ಕಾಣುತ್ತಿರುವ ಸಾಲೋಕ್ಯ ; ಉಪಾಸನಾದಿಗಳಿಂದ ಭಗವಂತನ ನಿಕಟವರ್ತಿಯಾಗಿರುವ ಸಾಮೀಪ್ಯ ; ಅವನಂತೆಯೇ ಶಂಖಚಕ್ರಾದಿಗಳನ್ನೂ ವೈಭವಪೂರ್ಣವಾದ ಅಲಂಕಾರಗಳನ್ನೂ ಧರಿಸಿ ಸಾರೂಪ್ಯ (ಶ್ರೀವತ್ಸ ಮತ್ತು ಕೌಸ್ತುಭ ಎರಡೇ ವಿಷ್ಣುವಿಗೆ ವಿಶಿಷ್ಟ ವಾದುವು. ಉಳಿದ ವಿವರಗಳು ಮುಕ್ತರಿಗೂ ಉಂಟು) ; ಮತ್ತು ಹರಿಚರಣಗಳಲ್ಲಿಯೇ ನೆಲೆಯನ್ನು ಕಂಡಿರುವ ಸಾಯುಜ್ಯ ಇವು ಚತುರ್ವಿಧಮುಕ್ತಿ. ವಿಷ್ಣುವಿನ ಬಿಂಬಾಪರೋಕ್ಷರೂಪವಾದ ದರ್ಶನವನ್ನು ಜೀವನ್ಮುಕ್ತಿಯೆಂದು ವ್ಯವಹರಿಸುತ್ತಾರೆ. ಮುಕ್ತಕ್ಷೇತ್ರವಾದ ವೈಕುಂಠವನ್ನು ಅಪ್ರಾಕೃತಲೋಕ ಅಥವಾ ಪ್ರಕೃಷ್ಟ ತತ್ತ್ವರಾಶಿ ಎಂದು ನಿರ್ದೇಶಿಸುತ್ತಾರೆ. ಇದು ಸಾಕಾರವಾದುದು. ಇಲ್ಲಿ ಷಡ್ರಸಗಳ ನದಿ ಹರಿಯುತ್ತದೆ, ಅಮೃತಸ್ಯಂದಿನಿಯಾದ ಅಶ್ವತ್ಥ ವೃಕ್ಷವಿದೆ. ಇಲ್ಲಿ ಇರುವವರು ಮುಕ್ತರೇ, ಭಗವತ್ಪ್ರಸಾದವನ್ನು ಪಡೆದವರೇ. ಹರಿಯನ್ನು ಭಜಿಸದವರಿಗೆ ಇದು ಅಪ್ರಾಪ್ಯವಾದ ಸ್ಥಾನ.

ಮಾಧ್ವರ ಭೂಗೋಳವರ್ಣನೆಯಲ್ಲಿ ಪಾರ್ಥಿವ ಜಗತ್ತಿನ ನಿರೂಪಣೆ ಹೀಗೆ ಬರುತ್ತದೆ. ಮೇರುಪರ್ವತ ಮತ್ತು ಅದಕ್ಕೆ ಹೊಂದಿ ಕೊಂಡಂತೆ ನವಖಂಡಗಳು, ಸಪ್ತದ್ವೀಪಗಳು, ಭೂ-ಭುವ ಮೊದಲಾದ

ಏಳು ಮೇಲಿನ ಲೋಕಗಳು, ಅತಲ-ವಿತಲ-ಸುತಲ ಮೊದಲಾದ ಏಳು ಕೆಳಗಿನ ಲೋಕಗಳು, ಇವುಗಳನ್ನು ಸುತ್ತುವರೆದು ಲೋಕಾಲೋಕ ಪರ್ವತ, ಘನಾರ್ಣವ, ಪೃಥಿವಿ-ಅಪ್ ಮೊದಲಾದ ಪಂಚತತ್ತ್ವಾವರಣ, ಇವುಗಳ ಆಚೆ ಶ್ವೇತದ್ವೀಪ, ಅನಂತಾಸನ, ವೈಕುಂಠ. ಈ ಮೂರಕ್ಕೆ ವಿಷ್ಣುವಿನ ತ್ರಿಧಾಮ ಎನ್ನುತ್ತಾರೆ. ಪರಮಾತ್ಮನಾದ ವಿಷ್ಣುವು ಬ್ರಹ್ಮಾಂಡದ ಒಳಗೂ ಹೊರಗೂ ಇದ್ದು ಎಲ್ಲವನ್ನೂ ಧರಿಸಿದ್ದಾನೆ. ಮಹಾಪ್ರಳಯದ ಸಂದರ್ಭದಲ್ಲಿ ಎಲ್ಲ ಜೀವರಾಶಿಗಳೂ ವಿಷ್ಣುವಿನ ಕುಕ್ಷಿಯೊಳ ಹೊಕ್ಕು ಮಲಗುತ್ತವೆ ; ಆಗ ವಾಯುವು ಮಾತ್ರ ಎಚ್ಚರವಿರುತ್ತಾನೆ. ಲಯವೆನ್ನುವುದು ಮುಕ್ತಿಗೆ ಪೂರ್ವಾವಸ್ಥೆ. ಎಲ್ಲ ಜೀವರಿಗೆ ಅವರವರಿಗೆ ತಕ್ಕ ಗತಿಯನ್ನು ಕೊಡುವುದಕ್ಕಾಗಿಯೇ ವಿಷ್ಣುವು ಲಯವನ್ನುಂಟುಮಾಡುತ್ತಾನೆ. ಜೀವರಿಗೆ ತಂತಮ್ಮ ಯೋಗ್ಯತಾನುಸಾರ ವಾದ ಫಲವನ್ನು ಒದಗಿಸಲೆಂದೇ ಸೃಷ್ಟಿಯೂ ಪ್ರಸಕ್ತವಾಗಿರುವುದು. ಸೃಷ್ಟಿಯು ಪರಮಾತ್ಮನಿಗೆ ಲೀಲೆ, ಲಕ್ಷ್ಮಿಗೆ ಮಹಾವೈಭವ.

೮. ಸಾಧನೆ

ಯೋಗ್ಯರಾದ ಜೀವಿಗಳು ಮುಕ್ತಿಯನ್ನು, ಎಂದರೆ ಸ್ವರೂಪ ಸುಖವನ್ನು ಪಡೆಯಲು ಶಾಸ್ತ್ರಸಾಧನೆಗಳು ಪ್ರವೃತ್ತವಾಗಿವೆ. ಈ ಸಾಧನೆಗಳು ನಾಲ್ಕು ಬಗೆಯವು : ವಿಷಯವೈರಾಗ್ಯ ಸತ್ಕರ್ಮಾಚರಣೆ, ಬ್ರಹ್ಮವಿಚಾರ ಮತ್ತು ಭಗವದ್ಭಕ್ತಿ. ಸಾಂಸಾರಿಕ ದುಃಖಗಳನ್ನು ನೋಡಿ, ಕೇಳಿ, ಅನುಭವಿಸಿ ವಿಷಯಸುಖಗಳಲ್ಲಿ ವಿರಕ್ತಿಯನ್ನು ತಳೆಯುವುದು ವಿಷಯವೈರಾಗ್ಯ. ಶಾಸ್ತ್ರವಿಹಿತವಾದ ನಿತ್ಯ ನೈಮಿತ್ತಿತ ಕರ್ಮಗಳನ್ನು ಯಥಾವತ್ತಾಗಿ ಮಾಡುವುದು ಸತ್ಕರ್ಮಾಚರಣೆ. ಜಿಜ್ಞಾಸೆ,

ಶಾಸ್ತ್ರಚಿಂತನ, ಶ್ರವಣ, ಮನನ, ಧ್ಯಾನ ಇವು ಬ್ರಹ್ಮವಿಚಾರವೆನಿಸಿಕೊಳ್ಳುತ್ತದೆ. ಭಗವತ್ಪ್ರಸಾದವನ್ನು ಬಯಸಿ ಭಗವಂತನಲ್ಲಿ ಪ್ರೀತಿಯನ್ನು ಮಾಡುವುದು ಭಕ್ತಿ. ಭಗವಂತನು ಭಕ್ತಿಯಿಂದಲೇ ಪ್ರಸನ್ನನಾಗುತ್ತಾನೆ, ಬೇರೆ ಯಾವ ಸಾಧನೆಯಿಂದಲೂ ತೃಪ್ತನಾಗುವುದಿಲ್ಲ (ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯನೇನ ಕೇನಚಿತ್) ; ಎಂದರೆ ಭಕ್ತಿಯೇ ಉತ್ತಮವಾದ ಸಾಧನ.

ಭಕ್ತಿಯನ್ನು ''ಮಾಹಾತ್ಮ್ಯಜ್ಞಾನಪೂರ್ವಕವಾದ ಸುದೃಢವಾದ ಸ್ನೇಹ'' ಎಂದು ನಿರ್ದೇಶಿಸಿದ್ದಾರೆ. ಹರಿಯು ಸರ್ವೋತ್ತಮ ಎನ್ನುವ ಜ್ಞಾನವೇ ಮಾಹಾತ್ಮ್ಯ ಜ್ಞಾನ ; ಈ ಜ್ಞಾನದಿಂದ ಒದಗುವ ಸರ್ವತೋಧಿಕ ಪ್ರೇಮ ಪ್ರವಾಹವು ಸಾವಿರ ಆತಂಕಗಳು ಬಂದರೂ ಎಡೆಬಿಡದೆ ಹರಿಯುತ್ತದೆ. ಈ ವಿವರವನ್ನು 'ನ್ಯಾಯಸುಧೆ'ಯಲ್ಲಿ ಹೀಗೆ ಬಣ್ಣಿಸಿದ್ದಾರೆ — ''ಪರಮೇಶ್ವರ ಭಕ್ತಿರ್ನಾಮ ನಿರವಧಿಕ— ಅನಂತ— ಅನವದ್ಯ—ಕಲ್ಯಾಣ—ಗುಣತ್ವ—ಜ್ಞಾನಪೂರ್ವಕಃ ಸ್ವಾತ್ಮೀಯ ಸಮಸ್ತವಸ್ತುಭ್ಯಃ ಅನೇಕಗುಣಾಧಿಕಃ ಅಂತರಾಯ ಸಹಸ್ರೇಣಾಪಿ ಅಪ್ರತಿಬದ್ಧಃ ಪ್ರೇಮಪ್ರವಾಹಃ''. ಎಂದರೆ ಜ್ಞಾನದಿಂದಲೇ ಭಕ್ತಿಯು ಸಂಪನ್ನವಾಗುವುದು. 'ಜ್ಞಾನಿಗಳಿಗೆ ಜ್ಞಾನವನ್ನು ಕೊಡುವವನೂ ಜ್ಞಾನಿಗಳಿಗೆ ಮೋಕ್ಷವನ್ನು ಕೊಡುವವನೂ ವಿಷ್ಣುವೇ' (ಅಜ್ಞಾನಿನಾಂ ಜ್ಞಾನದೋ ವಿಷ್ಣುಃ ಜ್ಞಾನಿನಾಂ ಮೋಕ್ಷದಶ್ಚ ಸಃ) ಎನ್ನುವ ಮಾತಿನಲ್ಲಿ ಮುಕ್ತಿಗೆ ಜ್ಞಾನದ ಅಗತ್ಯ ಧ್ವನಿಸುತ್ತದೆ. ಶ್ರವಣ, ಮನನ ಮುಂತಾದವುಗಳಿಂದ ನಿಷ್ಪನ್ನವಾಗುವ ಜ್ಞಾನವು ವಿಷ್ಣುವಿನ ಮಾಹಾತ್ಮ್ಯೆಯನ್ನು ದೃಢಪಡಿಸುತ್ತದೆ. ಹೀಗೆ ಮಾಹಾತ್ಮ್ಯ ಜ್ಞಾನವು ದೃಢವಾದಾಗಲೇ ಎಲ್ಲಕ್ಕಿಂತ ಎಷ್ಟೋಪಟ್ಟು ಹೆಚ್ಚಿನದಾದ (ಸಮಸ್ತ ವಸ್ತುಭ್ಯಃ ಅನೇಕ ಗುಣಾಧಿಕಃ) ಪ್ರೇಮ ಪ್ರವಾಹವು ಪ್ರವೃತ್ತವಾಗುತ್ತದೆ. ಇಂಥ ಭಗವದ್ಭಕ್ತಿಯು ಅತ್ಯರ್ಥಹೇತು, ಎಂದರೆ ಮುಕ್ತಿಗೆ ಕಾರಣವಾಗುತ್ತದೆ. ನೈಜಸುಖಾನುಭೂತಿಯ ಸ್ವರೂಪವುಳ್ಳ ಮುಕ್ತಿಗೆ ಅಮಲವಾದ ಭಕ್ತಿಯೊಂದೇ ಸಾಧನ ಎಂಬುದು ಮಾಧ್ವವೇದಾಂತದ ಮುಖ್ಯಪ್ರಮೇಯ.

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ (ರಿ.)

ನಮ್ಮ ಪ್ರಕಟಣೆಗಳು ಹೀಗಿವೆ.

ಕನ್ನಡ		ರೂ. ಪೈ.
1.	ಶ್ರೀ ರಾಘವೇಂದ್ರ ಸ್ವಾಮಿಗಳು	40.00
2.	ದಂಡಿಯ ಅವಂತಿಸುಂದರೀ – ಒಂದು ಸಂಕ್ಷಿಪ್ತ ಕಥನ	70.00
3.	ಶ್ರೀ ಪುರಂದರ ದಾಸರು	70.00
4.	ಬೋಧಿಯ ಬೆಳಕಿನಲ್ಲಿ – ಬುದ್ಧನ ಬಾಳು–ಬೆಳಕು	100.00
5.	ವೇದದಲ್ಲಿನ ಕಥೆಗಳು	60.00
6.	ಭಾರತದ ದೇವಾಲಯಗಳು ನೆಲೆ–ಹಿನ್ನೆಲೆ	75.00
7.	ಶ್ರೀ ಶಾರದಾಪೀಠದ ಮಾಣಿಕ್ಯ	120.00
8.	ಪೂರ್ಣಪ್ರಜ್ಞ ಪ್ರಶಸ್ತಿ – ಶ್ರೀ ಮಧ್ವಾಚಾರ್ಯರ ಬಾಳು–ಬೆಳಕು	80.00

English.

1.	The Three Ācharyas: Śankara, Rāmānuja, Madhva	35.00
2.	The Teachings of the Buddha	85.00
3.	Temples: Icons and Rituals	100.00
4.	Jainism in South India	85.00
5.	Ādhyātma Rasa Ranjani of Viṣṇutīrtha	20.00
6.	The Hill Shrine of Tirupathi	200.00

₹ 80/-